ಬೆಂಗಳೂರು ಸಂಪುಟ: 16 ಸಂಚಿಕೆ: 22 ಪುಟ: 06 ಗುರುವಾರ 12-12-2024 Mail: mussanje2010@gmail.com www.mussanjenews.com ₹ 3

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB) Executive Editor: L P Babu Honourary Editor: Venkatesh

**ನಾವೂ ಈಗ ಡಿಜಿಟಲೀಕರಣಗೊಂಡಿದ್ದೇವೆ...**

ಪ್ರಿಯ ಓದುಗರೇ.....

ತಮ್ಮೆಲ್ಲರ ಒತ್ತಾಸೆಯ ಮೇರೆಗೆ ನಿಮ್ಮ 'ಮುಸ್ಸಂಜೆ' ಸಂಜೆ ದಿನ ಪತ್ರಿಕೆ ಈಗ ಡಿಜಿಟಲೀಕರಣಗೊಂಡಿದೆ. ಹದಿನೈದು ವಸಂತಗಳನ್ನು ಯಶಸ್ವಿಯಾಗಿ ಪೂರೈಸಿ 16ನೇ ವಸಂತಕ್ಕೆ ಕಾಲಿಟ್ಟ ಈ ಸುಸಂದರ್ಭದಲ್ಲಿ ರಾಜ್ಯದಲ್ಲೇ ಅಲ್ಲದೇ ದೇಶದ ವಿವಿಧೆಡೆಗಳಿಂದ ಸಹಕಾರ ದೊರೆತ ಹಿನ್ನೆಲೆಯಲ್ಲಿ ಪತ್ರಿಕೆಯನ್ನು ಡಿಜಿಟಲೀಕರಣಗೊಳಿಸಿ ನೂತನ ವೆಬ್‌ಸೈಟ್ ಲಾಂಚ್ ಮಾಡುವ ಮೂಲಕ onlineನಲ್ಲಿ ಪತ್ರಿಕೆ ವೀಕ್ಷಿಸಲು ಅವಕಾಶ ಕಲ್ಪಿಸಿದ್ದೇವೆ. ಈಗ ಪತ್ರಿಕೆಯನ್ನು ನೈಜ ಸುದ್ದಿಯೊಂದಿಗೆ ಹೊಸ ರೂಪದಲ್ಲಿ ನಿಮ್ಮ ಮುಂದಿಡುವ ಪ್ರಯತ್ನ ಮಾಡಿದ್ದೇವೆ. ನಮ್ಮ ಈ ಪ್ರಯತ್ನಕ್ಕೆ ಓದುಗರು, ಚಂದಾದಾರರೂ, ಹಾಗೂ ಜಾಹೀರಾತುದಾರರಾದ ತಮ್ಮ ಪ್ರೋತ್ಸಾಹವನ್ನು ಎಂದಿನಂತೆ ನಿರೀಕ್ಷಿಸುತ್ತೇವೆ...

www.mussanjenews.com

- ಇಂತಿ ಸಂಪಾದಕ

## ಪಂಚಮಸಾಲಿ ಹೋರಾಟಗಾರರ ಮೇಲೆ ಲಾಠಿಚಾರ್ಜ್ : ಕ್ಷಮೆಯಾಚನೆಗೆ ಆಗ್ರಹ

# ಬಿಜೆಪಿ ಪ್ರತಿಭಟನೆ

## ಅಲ್ಪಸಂಖ್ಯಾತರಿಗೆ ಕೋಟಿ-ಕೋಟಿ; ಲಿಂಗಾಯತರಿಗೆ ಲಾಠಿ ಏಟು

**ಬೆಳಗಾವಿ:** ಪಂಚಮಸಾಲಿ ಲಿಂಗಾಯತ ಹೋರಾಟಗಾರರ ಮೇಲಿನ ಲಾಠಿ ಚಾರ್ಜ್ ಖಂಡಿಸಿ ಬಿಜೆಪಿ ಶಾಸಕರು ಸುವರ್ಣಸೌಧದ ಮುಂಭಾಗದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರವು ವಾಕ್ ಸ್ವಾತಂತ್ರ್ಯ, ಹೋರಾಟ ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಇದು ಲಿಂಗಾಯತ ವಿರೋಧಿ ಸರ್ಕಾರ ಎಂದು ಧಿಕ್ಕಾರ ಕೂಗಿದರು. ಪ್ರಜಾಪ್ರಭುತ್ವ ಧಮನ ಮಾಡುತ್ತಿದೆ, ಸರ್ವಾಧಿಕಾರ ಸಿದ್ದರಾಮಯ್ಯ ಸರ್ಕಾರಕ್ಕೆ ಧಿಕ್ಕಾರ, ಅಲ್ಪಸಂಖ್ಯಾತರಿಗೆ ಕೋಟಿ ಕೋಟಿ ಲಿಂಗಾಯತರಿಗೆ ಲಾಠಿ ಏಟು ಎಂಬ ಘೋಷಣೆಗಳೊಂದಿಗೆ ಶಾಸಕರು ಆಕ್ರೋಶ ಹೊರಹಾಕಿದರು.

ಸಿಎಂ ಸಿದ್ದರಾಮಯ್ಯ ಕುಮ್ಮಕ್ಕಿನಿಂದ ಲಾಠಿ ಪ್ರಹಾರ: ಈ ವೇಳೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, "ಶಾಂತಿಯುತ ಪಂಚಮಸಾಲಿ ಮೀಸಲಾತಿ ಹೋರಾಟದ ಮೇಲೆ ಸಿಎಂ ಕುಮ್ಮಕ್ಕಿನಿಂದ ಪೊಲೀಸರು ಲಾಠಿ ಪ್ರಹಾರ ಮಾಡಿದ್ದಾರೆ. ಈ ಮುಂಚೆನೂ ಸಿಎಂ ಆಗಿದ್ದಾಗ ಪುಟ 2



## ಪ್ರತಿಭಟನೆ ತಡೆಯುವುದು ಅನಿವಾರ್ಯವಾಗಿತ್ತು: ಜಿ.ಪರಮೇಶ್ವರ್

**ಬೆಳಗಾವಿ :** ಬೆಳಗಾವಿಯಲ್ಲಿ ಸುವರ್ಣಸೌಧ ಮುತ್ತಿಗೆ ಹಾಕುವ ಪ್ರಯತ್ನ ಮಾಡಿದ ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ಪೊಲೀಸರು ತಡೆದು ಲಾಠಿಚಾರ್ಜ್ ಮಾಡಿದ ವಿಚಾರಕ್ಕೆ ಸಂಬಂಧಪಟ್ಟಂತೆ, ಗೃಹ ಸಚಿವ ಡಾ. ಜಿ ಪರಮೇಶ್ವರ್ ಅವರು ಸುವರ್ಣಸೌಧ ಮುತ್ತಿಗೆ ಹಾಕುವುದನ್ನು ತಡೆಯಬೇಕಾಗಿತ್ತು.

ಹಾಗಾಗಿ ಅನಿವಾರ್ಯವಾಗಿ ಲಾಠಿಚಾರ್ಜ್ ಮಾಡಬೇಕಾಯಿತು ಎಂದು ಪೊಲೀಸರು ನಡೆದುಕೊಂಡ ರೀತಿಯನ್ನು ಸಮರ್ಥಿಸಿ ಕೊಂಡಿದ್ದಾರೆ. ಪುಟ 2





ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಮಹೇಶ್ ಜೋಶಿ ಮತ್ತು ಸಚಿವರಾದ ಚಲುವರಾಯಸ್ವಾಮಿ ನೇತೃತ್ವದ ಜಿಲ್ಲಾಡಳಿತದ ನಿಯೋಗ ಸುವರ್ಣ ಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನಿಸಿತು.

## ಕಾಂಗ್ರೆಸ್ ಮಾಜಿ ಶಾಸಕ ಆರ್. ನಾರಾಯಣ್ ನಿಧನ

**ಬೆಳಗಾವಿ :** ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ತುಮಕೂರಿನ ಕಾಂಗ್ರೆಸ್ ಮಾಜಿ ಶಾಸಕ ಆರ್. ನಾರಾಯಣ್ (81) ಇಂದು ( ಡಿ.12) ವಿಧಿವಶರಾಗಿದ್ದಾರೆ. ಅನಾರೋಗ್ಯದಿಂದ ಬಳಲುತ್ತಿದ್ದ ನಾರಾಯಣ್ ಅವರನ್ನು ಸಿದ್ಧಗಂಗಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ, ಚಿಕಿತ್ಸೆ ಫಲಿಸದೇ ಇಂದು ಬೆಳಗ್ಗೆ 8.30ಕ್ಕೆ ಕೊನೆಯುಸಿರೆಳೆದಿದ್ದಾರೆ. ತುಮಕೂರಿನ ರೈಲ್ವೆ ನಿಲ್ದಾಣದ ಸಿಎಸ್‌ಐ ಲೇಔಟ್ ನಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಪುಟ 2

## ಎಲ್ಲರೂ ಒಪ್ಪುವ ರೀತಿಯಲ್ಲಿ ಸರ್ಕಾರ ತೀರ್ಮಾನ ನೀಡಲಿದೆ

ಬೆಳಗಾವಿ: ಮೀಸಲಾತಿಗೆ ಸಂಬಂಧಿಸಿ ಎಲ್ಲರಿಗೂ ಒಪ್ಪುವ ರೀತಿಯಲ್ಲಿ ಸರ್ಕಾರ ತೀರ್ಮಾನ ನೀಡಲಿದೆ ಎಂದು ಸಚಿವ ಕೆ.ಎನ್. ರಾಜಣ್ಣ ಹೇಳಿದರು.



ಅವರು ಬೆಳಗಾವಿ ನಗರದಲ್ಲಿ ಪಂಚಮಸಾಲಿ ಸಮಾಜದ ಮೇಲೆ ಲಾಠಿ ಚಾರ್ಜ್ ವಿಚಾರವಾಗಿ ಮಾತನಾಡಿ, "ಸರ್ಕಾರಿ, ಸಾರ್ವಜನಿಕ ಆಸ್ತಿ ಕಾಪಾಡಿಕೊಳ್ಳುವಂತದ್ದು, ಯಾರಿಗೆ ಕೂಡ ತೊಂದರೆಯಾಗದಂತೆ ನೋಡಿಕೊಂಡು ಜನರಿಗೆ ರಕ್ಷಣೆ ಕೊಡುವಂತದ್ದು, ಯಾವುದೇ ಸರ್ಕಾರ ಇದ್ದರೂ ಕೂಡ ಅವರಿಗೆ ಇರುವಂತ ಮೂಲ ಸದುದ್ದೇಶ. ಸರ್ಕಾರಿ, ಸಾರ್ವಜನಿಕ ಆಸ್ತಿಗೆ ನಷ್ಟ ಮಾಡುವುದು, ಸಾರ್ವಜನಿಕರಿಗೆ ತೊಂದರೆ ಕೊಟ್ಟಾಗ ಪೊಲೀಸರು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ. ಆ ಬಗ್ಗೆ ನಾವು ಟೀಕೆ ಮಾಡುವುದು ಸರಿಯಲ್ಲ. ಒಮ್ಮೆ ಎಲ್ಲ ಊಹೆ ಮಾಡಿ, ಪೊಲೀಸರು ಕ್ರಮ ತೆಗೆದುಕೊಳ್ಳದೇ, ಎಲ್ಲಾ ಪ್ರತಿಭಟನಾಕಾರರು ವಿಧಾನಸಭೆಗೆ ನುಗ್ಗಿ ಬಿಟ್ಟಿದ್ದರೆ ಏನು ಆಗುತ್ತಿತ್ತು ಹೇಳಿ. ಅದು ಆಗಬಾರದು ಎನ್ನುವ ಮುನ್ನೆಚ್ಚರಿಕೆಯಿಂದ ಪೊಲೀಸರು ಆ ಕ್ರಮ ತೆಗೆದುಕೊಂಡಿದ್ದಾರೆ" ಎಂದು ಸಚಿವ ರಾಜಣ್ಣ ಲಾಠಿ ಚಾರ್ಜ್ ಕ್ರಮವನ್ನು ಸಮರ್ಥನೆ ಮಾಡಿಕೊಂಡಿದ್ದಾರೆ.

**ಮೀಸಲಾತಿ ವಿಚಾರ:** ಹಿಂದುಳಿದ ವರ್ಗಗಳಿಂದ ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ಕೊಡಬೇಡಿ ಎಂದು ಸಿಎಂ ಮನವಿ ಪತ್ರ ಕೊಟ್ಟಿರುವ ವಿಚಾರವಾಗಿ ಮಾತನಾಡಿದ ಸಚಿವರು, "ಎಲ್ಲರಿಗೂ ಒಪ್ಪುವ ರೀತಿ ಸರ್ಕಾರ ತೀರ್ಮಾನ ಮಾಡುತ್ತದೆ. ಏನೆಲ್ಲ ಸಲಹೆ ಬರುತ್ತವೆ ಅದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ತೀರ್ಮಾನ ಕೈಗೊಳ್ಳಲಿದೆ" ಎಂದು ಪ್ರತಿಕ್ರಿಯಿಸಿದರು. ಪುಟ 2

## ಮಣಿಪುರದಲ್ಲಿ ಮೂವರು ಉಗ್ರರ ಬಂಧನ

ಇಂಫಾಲ: ಮಣಿಪುರದ ತೌಬಲ್ ಜಿಲ್ಲೆಯಲ್ಲಿ ನಿಷೇಧಿತ ಉಗ್ರಗಾಮಿ ಸಂಘಟನೆ ಪೀಪಲ್ಸ್ ರೆವಲ್ಯೂಷನರಿ ಪಾರ್ಟಿ ಆಫ್ ಕಂಗ್ಲೆಪಕ್‌ದ ಮೂವರು ಕಾರ್ಯಕರ್ತರನ್ನು ಬಂಧಿಸಲಾಗಿದೆ. ಅಕ್ರಮ ಗುಂಪಿನ ಬಂಧಿತ ಸದಸ್ಯರು ಸುಲಿಗೆಯಲ್ಲಿ ತೊಡಗಿದ್ದರು ಎಂದು ಪೊಲೀಸ್ ಹೇಳಿಕೆ ತಿಳಿಸಿದೆ.

ಪ್ರೆಪಕ್ (ಪ್ರೊ) ಸಂಘಟನೆಯ ಕೆಲವು ಸಕ್ರಿಯ ಕಾರ್ಯಕರ್ತರು ತೌಬಲ್ ಅಥೋಕ್‌ಪಾಮ್ ಪ್ರದೇಶದಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಅಡ್ಡಾಡುತ್ತಿದ್ದಾರೆ ಎಂಬ ಮಾಹಿತಿಯ ಮೇರೆಗೆ, ಕಮಾಂಡೋ ಯುನಿಟ್ ತೌಬಲ್‌ನ ಸಂಯೋಜಿತ ತಂಡ ಮತ್ತು 4 ಎಆರ್ (ಅಸ್ಸಾಂ ರೈಫಲ್ಸ್) ತಂಡ ಎಚ್‌ಡಿಎಫ್‌ಸಿ ಬ್ಯಾಂಕ್ ಬಳಿಯ ಪ್ರದೇಶಕ್ಕೆ ಧಾವಿಸಿ ಸುತ್ತಮುತ್ತಲಿನ ಕಾನೂನುಬಾಹಿರ ಪುಟ 2

## ಗಾಂಧಿ ಕುಟುಂಬಕ್ಕಾಗಿ ಸಿಎಂ ವಯನಾಡಲ್ಲಿ ಮನೆ ಕಟ್ಟಲು ಮುಂದಾಗಿದ್ದಾರೆ

ಬೆಳಗಾವಿ: "ಸಿಎಂ ಸಿದ್ದರಾಮಯ್ಯ ಕೇರಳ ಸಿಎಂ? ಅಥವಾ ಕನ್ನಡಿಗರ ಸಿಎಂ? ಎಂಬ ಬಗ್ಗೆ ರಾಜ್ಯದ ಜನರಿಗೆ ಅನುಮಾನ ಮೂಡಿದೆ" ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದ್ದಾರೆ.

ಸುವರ್ಣಸೌಧದಲ್ಲಿ ಮಾತನಾಡಿದ ಅವರು, ಕೇರಳ ಸಿಎಂಗೆ ಸಿಎಂ ಸಿದ್ದರಾಮಯ್ಯ ಪತ್ರ ಬರೆದಿರುವ ವಿಚಾರವಾಗಿ ಪ್ರತಿಕ್ರಿಯಿಸಿ, "ಮಳೆಗೆ ನಮ್ಮ ರಾಜ್ಯದಲ್ಲಿ ಅನೇಕ ಬಡವರು ಮನೆ ಕಳೆದುಕೊಂಡಿದ್ದಾರೆ. ಅವರಿಗೆ 1 ಲಕ್ಷ ರೂ. ಪರಿಹಾರವನ್ನೂ ಕೊಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ ಗಾಂಧಿ ಕುಟುಂಬವನ್ನು ಖುಷಿ ಪಡಿಸಲು, ಕೇರಳ ರಾಜ್ಯದಲ್ಲಿ ಪುಟ 2

**ಉಕ್ಕು ಕ್ಷೇತ್ರದಲ್ಲಿ ಹಸಿರು ಕ್ರಾಂತಿ**

## ಪ್ರಧಾನಿ ಮೋದಿ ಕನಸು ಅನಾವರಣ

ನವದೆಹಲಿ: ಉಕ್ಕು ಕ್ಷೇತ್ರದಲ್ಲಿ ಮಾಲಿನ್ಯಕ್ಕೆ ಇತಿಶ್ರೀ ಹಾಡಲು ಹಾಗೂ ಪರಿಸರಪೂರಕವಾದ ಗ್ರೀನ್ ಸ್ಟೀಲ್ ತಯಾರಿಕೆಗೆ ಪ್ರಾಮುಖ್ಯತೆ ನೀಡಲು ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನ ಕೂಸಾದ 'ಸಾಂಸ್ಥಿಕ ರಚನೆಗಳ ವೈಜ್ಞಾನಿಕ ವರ್ಗೀಕರಣ' ವರದಿಯನ್ನು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಬಿಡುಗಡೆ ಮಾಡಿದರು.

ನವದೆಹಲಿಯ ವಿಜ್ಞಾನ ಭವನದಲ್ಲಿ ಗುರು ವಾರ ಉಕ್ಕು ಸಚಿವಾಲಯ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಸಾಂಸ್ಥಿಕ ರಚನೆಗಳ ವೈಜ್ಞಾನಿಕ ವರ್ಗೀಕರಣ' ವರದಿಯನ್ನು ಬಿಡುಗಡೆ ಮಾಡಿದ ಹೆಚ್.ಡಿ. ಕುಮಾರಸ್ವಾಮಿ ಅವರು; ಭಾರತವು ಪರಿಸರ ರಕ್ಷಣೆಗೆ ಎಲ್ಲಾ ಉಪಕ್ರಮಗಳನ್ನು ಕೈಗೊಂಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಈ ನಿಟ್ಟಿನಲ್ಲಿ ಹೆಚ್ಚು



ಒತ್ತಾಸೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಟ್ಯಾಕ್ಸಾನಮಿಯನ್ನು ಬಿಡುಗಡೆಗೊಳಿಸಲಾಗಿದೆ. ಇದು ದೇಶದ ಅತ್ಯಂತ ಪ್ರಮುಖ ಉದ್ಯಮಗಳಲ್ಲಿ ಒಂದಾದ ಉಕ್ಕು ಉದ್ಯಮದ ಸುಸ್ಥಿರತೆಯನ್ನು ವೃದ್ಧಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ ಎಂದರು. ಪುಟ 2

## ಕಾಂಗ್ರೆಸ್ ಮಾಜಿ ಶಾಸಕ ನಾರಾಯಣ್ ನಿಧನ

**ಬೆಂಗಳೂರು :** ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ತುಮಕೂರಿನ ಕಾಂಗ್ರೆಸ್ ಮಾಜಿ ಶಾಸಕ ಆರ್. ನಾರಾಯಣ್ (81) ಇಂದು ( ಡಿ.12) ವಿಧಿವಶರಾಗಿದ್ದಾರೆ. ಅನಾರೋಗ್ಯದಿಂದ ಬಳಲುತ್ತಿದ್ದ ನಾರಾಯಣ್ ಅವರನ್ನು ಸಿದ್ಧಗಂಗಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ, ಚಿಕಿತ್ಸೆ ಫಲಿಸದೇ ಇಂದು ಬೆಳಗ್ಗೆ 8.30ಕ್ಕೆ ಕೊನೆಯುಸಿರೆಳೆದಿದ್ದಾರೆ. ತುಮಕೂರಿನ ರೈಲ್ವೆ ನಿಲ್ದಾಣದ ಸಿಎಸ್‌ಐ ಲೇಔಟ್‌ನಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಪುಟ 2



## ಕೊಳವೆ ಬಾವಿಗೆ ಬಿದ್ದ 5 ವರ್ಷದ ಬಾಲಕ ಸಾವು

ಜೈಪುರ: ಇಲ್ಲಿನ ದೌಸಾದಲ್ಲಿ 160 ಅಡಿ ಆಳದ ಬೋರ್‌ವೆಲ್‌ಗೆ ಬಿದ್ದಿದ್ದ 5 ವರ್ಷದ ಬಾಲಕನನ್ನು ಮೇಲೆತ್ತಿದರು ಆತ ಕೊನೆಯುಸಿರೆಳೆದಿದ್ದಾನೆ.

ಸುಮಾರು 55 ಗಂಟೆಗೂ ಹೆಚ್ಚು ಕಾಲ ನಡೆದ ರಕ್ಷಣಾ ಕಾರ್ಯಾಚರಣೆಯ ನಂತರ ಕಳೆದ ರಾತ್ರಿ ಆರ್ಯನ್ ಎಂಬ ಐದು ವರ್ಷದ ಬಾಲಕನನ್ನು ಬೋರ್‌ವೆಲ್ ಕೊಳವೆಯಿಂದ ಹೊರತೆಗೆಯಲಾಯಿತು ಆದರೆ ಆತ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ತಕ್ಷಣ ಅಲ್ಲಿದ್ದ ಪುಟ 2

## ಕೊಡಗು ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ಮಡಿಕೇರಿ: ಕೊಡಗಿನ ವೀರ ಸೇನಾನಿಗಳ ಕುರಿತು ವಾಟ್ಸ್ ಆಯಪ್ ಗ್ರೂಪ್ ವೊಂದರಲ್ಲಿ ಅವಹೇಳನಕಾರಿ ಸಂದೇಶ ಹಾಕಿದ ಆರೋಪಿಯನ್ನು ಆರು ತಿಂಗಳ ಕಾಲ ಕೊಡಗಿನಿಂದ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿ ಕೊಡಗು ಸರ್ವ ಜನಾಂಗಗಳ ಒಕ್ಕೂಟ ಕರೆ ನೀಡಿರುವ ಬಂದ್ ಗೆ ಇಂದು ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕೆಲವು ಶಾಲೆಗಳು ರಜೆ ಘೋಷಿಸಿದ್ದರೆ ಬಹುತೇಕ ಖಾಸಗಿ ಶಾಲೆಗಳು ಎಂದಿನಂತೆ ತೆರೆದಿವೆ. ಪ್ರಯಾಣಿಕರ ಕೊರತೆಯಿಂದ ಬಸ್



ಸಂಚಾರ ವಿರಳವಾಗಿದ್ದರೆ ಆಟೊ ಸಂಚಾರ ಎಂದಿನಂತೆ ಕಂಡುಬಂದಿತು. ಇನ್ನೂ, ಕುಶಾಲನಗರ, ವಿರಾಜಪೇಟೆಯಲ್ಲಿ ಬಂದ್‌ಗೆ ಉತ್ತಮ ಸ್ಪಂದನೆ ದೊರಕಿದೆ. ನಾಪೋಕ್ಲು ಪಟ್ಟಣ ಸಂಪೂರ್ಣ ಬಂದ್ ಆಗಿದೆ. ಸೋಮವಾರ ಪೇಟೆ, ಕೊಡ್ಲಿಪೇಟೆಯಲ್ಲಿ ಎಂದಿನಂತೆ ಅಂಗಡಿ ಮುಗ್ಗಟ್ಟು ತೆರಿದಿದ್ದು, ಬಸ್ ಸಂಚಾರ ಬೆರಳೆಣಿಕೆಯಲ್ಲಿವೆ.

ಮಡಿಕೇರಿಯ ಮುಖ್ಯ ರಸ್ತೆಗಳಲ್ಲಿ ಅಂಗಡಿ ಮಳಿಗೆಗಳು ಮುಚ್ಚಿದ್ದು, ಮಾರ್ಕೆಟ್ ಒಳಭಾಗದಲ್ಲಿ ಮಾಂಸದ ಅಂಗಡಿಗಳು ಹಾಗು ಕೆಲವೊಂದು ರೆಸ್ಟೋರೆಂಟ್ ಗಳು ತೆರೆದಿದೆ. ಇನ್ನು ಬೆರಳೆಣಿಕೆಯ ಆಟೋ ರಿಕ್ಷಾ ಸಂಚಾರ ಎಂದಿನಂತಿತ್ತು. ಪುಟ 2

## ಮಾಜಿ ಶಾಸಕ ನಾರಾಯಣ ನಿಧನಕ್ಕೆ ಡಿಸಿಎಂ ಸಂತಾಪ



ಬೆಂಗಳೂರು: ಕಾಂಗ್ರೆಸ್ ಮಾಜಿ ಶಾಸಕರಾದ ಆರ್. ನಾರಾಯಣ ಅವರ ನಿಧನಕ್ಕೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಸಂತಾಪ ಸೂಚಿಸಿದ್ದಾರೆ.

"ಆರ್.ನಾರಾಯಣ ಅವರ ನಿಧನದ ಸುದ್ದಿ ಕೇಳಿ ತೀವ್ರ ಬೇಸರವಾಗಿದೆ. ನಾರಾಯಣ ಅವರು ಸತತವಾಗಿ ಮೂರು ಬಾರಿ ಶಾಸಕರಾಗಿದ್ದರು. ಎಸ್.ಎಂ ಕೃಷ್ಣ ಅವರ ಸರ್ಕಾರದಲ್ಲಿ ಹೌಸಿಂಗ್ ಬೋರ್ಡ್ ಅಧ್ಯಕ್ಷರೂ ಆಗಿದ್ದರು. ಕೆಂಗಲ್ ಹನುಮಂತಯ್ಯ ಅವರ ಅನುಯಾಯಿಯಾಗಿ ಪುಟ 2

# ದರ್ಪದಿಂದ ಮೆರೆದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಳಗಾವಿ: ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಡವಳಿಕೆ, ಅಧಿಕಾರದ ದರ್ಪದಿಂದ ಮೆರೆಯುತ್ತಿದ್ದಾರೆ ಎಂದು ರಾಜ್ಯದ ಜನತೆ ಮಾತನಾಡುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಅವರು ಆಕ್ಷೇಪಿಸಿದರು.

ಪಂಚಮಸಾಲಿ ಲಿಂಗಾಯತ ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ನಡೆಸಿದ್ದನ್ನು ಖಂಡಿಸಿ ರಾಜ್ಯ ಬಿಜೆಪಿ ವತಿಯಿಂದ ಇಂದು ಬೆಳಗಾವಿ ಸುವರ್ಣಸೌಧದ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು. ಇದೇವೇಳೆ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ಮುಖ್ಯಮಂತ್ರಿಗಳು ಸ್ವಾಮೀಜಿ, ರೈತಾಪಿ ವರ್ಗದ ಧರಣಿ– ಹೋರಾಟದ ಸ್ಥಳಕ್ಕೆ ತೆರಳಿ ಮನವಿ ಸ್ವೀಕರಿಸಬೇಕಿತ್ತು. ಮುಖ್ಯಮಂತ್ರಿಗಳಿಗೆ ಏನು ಧಾಡಿ ಆಗಿತ್ತು ಎಂದು ಪ್ರಶ್ನಿಸಿದರು.

ಇಲ್ಲೇ ಸುವರ್ಣ ಸೌಧದಲ್ಲಿ ಇದ್ದರೂ ಸಹ ಮುಖ್ಯಮಂತ್ರಿಗಳು ಮನಸ್ಸು ಮಾಡಲಿಲ್ಲ. ಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ಭೇಟಿ ಮಾಡುವ ಸೌಜನ್ಯವನ್ನು ತೋರಲಿಲ್ಲ; ಬದಲಾಗಿ ಅಮಾಯಕರ



ಮೇಲೆ ಲಾಠಿ ಚಾರ್ಜ್ ಮಾಡಿಸಿದ್ದು, ಚನ್ನಮ್ಮನ ನಾಡಿನಲ್ಲಿ ಲಾಠಿಚಾರ್ಜ್ ಆಗಿರುವುದು ಅಕ್ಷಮ್ಯ ಅಪರಾಧ ಎಂದು ಖಂಡಿಸಿದರು.


ಮುಖ್ಯಮಂತ್ರಿಗಳು ಯಾವ ಕಾರಣಕ್ಕೆ ಲಾಠಿ ಚಾರ್ಜ್ ಮಾಡಿಸಿದ್ದಾರೆ ಎಂಬ ಪ್ರಶ್ನೆಗೆ ಉತ್ತರ ಪಡೆಯುತ್ತೇವೆ. ದರ್ಪದಿಂದ ಮೆರೆದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು. ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಎರಡೂ ಸದನದಲ್ಲಿ ಇದನ್ನು ಆಗ್ರಹಿಸಲಿವೆ ಎಂದು ಅವರು ತಿಳಿಸಿದರು.

ಕಾಂಗ್ರೆಸ್ ಸರಕಾರದವರು ಮೂರೂ ಬಿಟ್ಟಿದ್ದಾರೆ. 136 ಶಾಸಕರಿದ್ದೇವೆ; ಅಧಿಕಾರ ಶಾಶ್ವತ ಎಂಬ ಭ್ರಮೆಯಲ್ಲಿ ಸಿದ್ದರಾಮಯ್ಯನವರ ಸರಕಾರ ಇದ್ದಂತಿದೆ. ಹಿಂದಿನ ಅವಧಿಯಲ್ಲೂ ಇದೇರೀತಿ ನಡೆದುಕೊಂಡಿದ್ದು, ಸಿಎಂ ಅವರನ್ನು ಸದನದಲ್ಲಿ ಪ್ರಶ್ನಿಸುತ್ತೇವೆ ಎಂದು ಪ್ರಶ್ನೆಗೆ ಉತ್ತರ ನೀಡಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ಆರಂಭವಾದ ಪ್ರತಿಭಟನೆ ಸಂದರ್ಭದಲ್ಲಿ ರಾಜ್ಯದ ಮಾಜಿ ಸಚಿವರು, ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರು ಉಪಸ್ಥಿತರಿದ್ದರು. ಮೀಸಲಾತಿ ನೀಡದ ಕಾಂಗ್ರೆಸ್ ಸರಕಾರಕ್ಕೆ ಧಿಕ್ಕಾರ, ಪ್ರಾಣ ಕೊಟ್ಟೇವು ಮೀಸಲಾತಿ ಬಿಡೆವು, ಹೋರಾಟಗಾರರ ಮೇಲೆ ಹಲ್ಲೆ ನಡೆಸಿದ ಕಾಂಗ್ರೆಸ್ ಸರಕಾರಕ್ಕೆ ಧಿಕ್ಕಾರ ಇವೇ ಮೊದಲಾದ ಭಿತ್ತಿಪತ್ರಗಳನ್ನು ಹಿಡಿದಿದ್ದ ಶಾಸಕರು, ವಿಧಾನಪರಿಷತ್ ಸದಸ್ಯರು ಸರಕಾರದ ಧೋರಣೆಯನ್ನು ಖಂಡಿಸಿ ವಿವಿಧ ಘೋಷಣೆಗಳನ್ನು ಕೂಗಿದರು.

# ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷನೇ ವಕ್ಫ್ ಮಂಡಳಿಯ ಆಸ್ತಿಯನ್ನು ಕಬಳಿಸಿರುವ ಭೂ ಕಬಳಿಕೆ ಹಗರಣ"

ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕು, ಕಸಬಾ ಹೋಬಳಿ ಅಗಸನಕಲ್ಲು ಗ್ರಾಮದ ಸರ್ವೆ ನಂಬರ್ 11 ರಲ್ಲಿ ಹಿಂದಿನ ವಿಶೇಷ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಇವರು 06 ಎಕರೆ ಜಮೀನನ್ನು ಮುಸ್ಲಿಂ ಜನಾಂಗದ ಖಬರಸ್ಥಾನಕ್ಕೆಂದು ಮಂಜೂರು (ಸಂಖ್ಯೆ: LNDCR/170/86–87, ಆಣ: 31/03/1987) ಮಾಡಿರುತ್ತಾರೆ.



ಸದರಿ ಚಿತ್ರದುರ್ಗ ನಗರದ ಅಗಸನಕಲ್ಲು ಗ್ರಾಮದ ಸರ್ವೆ ನಂಬರ್ 11 ಅನ್ನು ಕಾನೂನು ಬಾಹಿರವಾಗಿ ಹೊಸ ಸರ್ವೆ ನಂಬರ್ 25 ಎಂದು ಪೋಡು ದುರಸ್ತಿ ಮಾಡಿಸಿರುವ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷರಾದ ಶ್ರೀ. ಅನ್ವರ್ ಬಾಷಾ ರವರು ಸಂಪೂರ್ಣ ಸ್ವತ್ತನ್ನು ಅತಿಕ್ರಮಿಸಿಕೊಂಡು ತಮ್ಮ ಮಾಲೀಕತ್ವದ ಬೃಹತ್ ಖಾಸಗಿ ಶಾಲಾ ಕಟ್ಟಡವನ್ನು ಮತ್ತು ತಮ್ಮ ವಾಸಕ್ಕಾಗಿ ಬೃಹತ್ ಬಂಗಲೆಯನ್ನು ನಿರ್ಮಿಸಿರುತ್ತಾರೆ.

ಮುಸ್ಲಿಂ ಸಮುದಾಯದ ಸ್ಮಶಾನಕ್ಕೆಂದು ಕಾನೂನು ರೀತ್ಯಾ ಸರ್ಕಾರಿ ಅಧಿಸೂಚನೆಯಂತೆ ಮಂಜೂರಾಗಿರುವ ಸುಮಾರು 10 ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಸ್ವತ್ತನ್ನು ಅತ್ಯಂತ ಜವಾಬ್ದಾರಿಯುತ ಸ್ಥಾನದಲ್ಲಿರುವ ವಕ್ಫ್ ಮಂಡಳಿಯ ಅಧ್ಯಕ್ಷರೇ ಕಬಳಿಸಿರುವುದು ನಿಜಕ್ಕೂ ವಿಪರ್ಯಾಸವಾಗಿರುತ್ತದೆ.

"ಬೇಲಿಯೇ ಎದ್ದು ಹೊಲವನ್ನು ಮೇಯ್ದಂತೆ" ಎಂಬ ಗಾದೆಗೆ ಇದು ಪ್ರತ್ಯಕ್ಷ ಸಾಕ್ಷಿಯಾಗಿದೆ.

Central Waqf Board Act, 1923 ರಂತೆ ಮುಸಲ್ಮಾನರ ಖಬರಸ್ಥಾನ, ಮಸೀದಿ ಮತ್ತು ದರ್ಗಾಗಳು ವಕ್ಫ್ ಮಂಡಳಿಯ ಆಸ್ತಿ ಎಂದು ಪರಿಗಣಿಸಲ್ಪಟ್ಟಿರುತ್ತದೆ. ಹಾಗಿದ್ದಾಗ್ಯೂ ಸಹ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ಸೇರಿದ ಅಮೂಲ್ಯ ಆಸ್ತಿಯನ್ನು ಅದೇ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ. ಅನ್ವರ್ ಬಾಷಾ ರವರು ಕಾನೂನಿನ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಕಬಳಿಸಿ, ಸದರಿ ಸ್ವತ್ತಿನಲ್ಲಿ ತಮ್ಮದೇ ಮಾಲೀಕತ್ವದ ಬೃಹತ್ತಾದ ಖಾಸಗಿ ಶಾಲಾ ಕಟ್ಟಡವನ್ನು ಮತ್ತು ತಮ್ಮ ವಾಸಕ್ಕಾಗಿ ಬೃಹತ್ ಬಂಗಲೆಯನ್ನು ನಿರ್ಮಿಸಿರುತ್ತಾರೆ. ಇವರ ಈ ಭೂ ಕಬಳಿಕೆ ಕಾರ್ಯಕ್ಕೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧಿಕಾರಿಗಳೂ ಸಹ ಎಲ್ಲ ರೀತಿಯ ಸಹಕಾರ ನೀಡಿರುವುದು ಅತ್ಯಂತ ಸ್ಪಷ್ಟವಾಗಿರುತ್ತದೆ.

ಆದ ಕಾರಣ ವಕ್ಫ್ ಮಂಡಳಿಯ ಆಸ್ತಿಯನ್ನು ಕಬಳಿಸಿರುವ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷರಾದ ಶ್ರೀ. ಅನ್ವರ್ ಬಾಷಾ ಮತ್ತು ಇವರ ಭೂ ಕಬಳಿಕೆಗೆ ಎಲ್ಲ ರೀತಿಯ ಸಹಕಾರ ನೀಡಿರುವ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧಿಕಾರಿಗಳ ವಿರುದ್ಧ ಕಾನೂನು ರೀತ್ಯಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಸಂಬಂಧ ಹಾಗೂ ಕೂಡಲೇ ಈ ಸರ್ಕಾರಿ ಆಸ್ತಿಯನ್ನು ರಾಜ್ಯ ಸರ್ಕಾರದ ವಶಕ್ಕೆ ಪಡೆಯುವ ಸಂಬಂಧ ಕ್ರಮ ತೆಗೆದುಕೊಳ್ಳುವಂತೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ಆಗ್ರಹಿಸಲಾಗಿದೆ.

ಅಲ್ಲದೇ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷರಾದ ಶ್ರೀ. ಅನ್ವರ್ ಬಾಷಾ ಸೇರಿದಂತೆ ಇವರ ಭೂ ಕಬಳಿಕೆಗೆ ಎಲ್ಲ ರೀತಿಯ ಸಹಕಾರ ನೀಡಿರುವ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧಿಕಾರಿಗಳ ವಿರುದ್ಧ ಸರ್ಕಾರಿ ಭೂ ಕಬಳಿಕೆ, ವಂಚನೆ, ಅಧಿಕಾರ ದುರುಪಯೋಗ ಮತ್ತು ನಕಲಿ ದಾಖಲೆ ತಯಾರಿಕೆ ಪ್ರಕರಣಗಳನ್ನು ದಾಖಲಿಸಿಕೊಂಡು ಕಾನೂನು ರೀತ್ಯಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಂಪೂರ್ಣ ದಾಖಲೆಗಳ ಸಹಿತ ಲೋಕಾಯುಕ್ತದಲ್ಲಿ ದೂರು ಸಲ್ಲಿಸಲಾಗಿದೆ.

# ಸಿದ್ದರಾಮಯ್ಯರಿಂದ ಹಿಂದುಳಿದ–ಲಿಂಗಾಯತರ ಮಧ್ಯೆ ಜಗಳ ಹಚ್ಚುವ ಕುತಂತ್ರ

**ಬೆಳಗಾವಿ:** ಪಂಚಮಸಾಲಿ 2ಎ ಮೀಸಲಾತಿ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಇದು ಬಿಜೆಪಿಗೆ ರಾಜಕೀಯ ಅಸ್ತ್ರವಾಗಿದೆ. ಅದರಲ್ಲೂ ಮಂಗಳವಾರ ಸುವರ್ಣ ಸೌಧದ ಮುಂಭಾಗ ನಡೆಯುತ್ತಿದ್ದ ಹೋರಾಟ ಏಕಾಏಕಿ ಹಿಂಸಾತ್ಮಕ ಸ್ವರೂಪ ಪಡೆದುಕೊಂಡಿರುವುದಕ್ಕೆ ಸರ್ಕಾರವೇ ನೇರ ಹೊಣೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆಕ್ರೋಶ ಹೊರಹಾಕಿದ್ದಾರೆ.

ಈ ವಿಚಾರವಾಗಿ ಬೆಳಗಾವಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಯತ್ನಾಳ್ ಅವರು, ''ಲಿಂಗಾಯತ ನನ್ನ ಮಕ್ಕಳನ್ನು ಬಗ್ಗು ಬಡಿಯಬೇಕೆಂದು ಮುಖ್ಯಮಂತ್ರಿಗಳು ಪೊಲೀಸರಿಗೆ ಹೇಳಿದ್ದಾರೆ. ಅದಕ್ಕಾಗಿ ಪೊಲೀಸರು ನಮ್ಮ ಮೇಲೆ ಲಾಠಿ ಚಾರ್ಜ್ ಮಾಡಿದ್ದಾರೆ. ನಾವು ಮೊದಲೇ ಕಲ್ಲು ತೂರಾಟ ಮಾಡಿದ್ರೆ ವೀಡಿಯೋ ಬಹಿರಂಗಪಡಿಸಲಿ…'' ಎಂದು ಸವಾಲು ಹಾಕಿದರು.ಹಿಂದುಳಿದ ಹಾಗೂ ಲಿಂಗಾಯತರ ನಡುವೆ ಜಗಳ ಹಚ್ಚೋಕೆ ಸಿದ್ದರಾಮಯ್ಯ ಕುತಂತ್ರ ಮಾಡಿದ್ದಾರೆ. ಅದಕ್ಕಾಗಿ ಹಿಂದುಳಿದ ವರ್ಗಗಳ ಒಕ್ಕೂಟದಿಂದ ನಿನ್ನೆ ಮನವಿ ತಗೊಂಡಿದ್ದಾರೆ. ಅದನ್ನು ಅವರ ಅಧಿಕೃತ ಎಕ್ಸ್ ಖಾತೆಯಲ್ಲಿ ಹಾಕೊಂಡಿದ್ದಾರೆ ಎಂದು ಹೇಳಿದರು.



ಹೋರಾಟವನ್ನು ಬಗ್ಗು ಬಡಿಯಬೇಕು ಎಂದು ಸರ್ಕಾರ ಮೊದಲೇ ಪ್ಲಾನ್ ಮಾಡಿತ್ತು. ಪೊಲೀಸರ ಮೂಲಕ ಹೋರಾಟಗಾರರ ಮೇಲೆ ಸರ್ಕಾರ ಧಮ್ಕಿ ಹಾಕಿಸಿದ್ದಾರೆ. ನಮ್ಮ ಹೋರಾಟ ಸಂಪೂರ್ಣವಾಗಿ ಶಾಂತಿಯುತವಾಗಿತ್ತು. ನಾವು ಯಾವುದೇ ಗಲಾಟೆ, ಕಲ್ಲು ತೂರಾಟ ಮಾಡೋದಾಗಲಿ, ಬೆಂಕಿ ಹಚ್ಚುವ ಕೆಲಸ ಮಾಡಿಲ್ಲ. ಐಜಿಪಿ ವಿಥ್ ಔಟ್ ಡ್ರೆಸ್ ಕೈಯಲ್ಲಿ ಲಾಠಿ ಹಿಡಿದಿದ್ದು ಮಹಾ ಅಪರಾಧ. ಡ್ರೆಸ್ ಹಾಕದೆ ಇರೋನು ಅಧಿಕಾರಿನೇ ಅಲ್ಲ ಎಂದು ಪೊಲೀಸ್ ಅಧಿಕಾರಿಗಳ ವಿರುದ್ಧ ವಾಗ್ದಾಳಿ ನಡೆಸಿದರು.

ಸಿಎಂ ಒತ್ತಡದಿಂದ ಪೊಲೀಸರು ಅಮಾನುಷವಾಗಿ ಲಾಠಿ ಚಾರ್ಜ್ ಮಾಡಿದ್ದು ಕಾನೂನು ಬಾಹಿರ. ಮೂರು ಸಲ ಎಚ್ಚರಿಕೆ ಕೊಡದೆ ಲಾಠಿ ಚಾರ್ಜ್ ಆಗುತ್ತದೆ. ಅವರ ಹಿಂದೆ ಯಾರ ಷಡ್ಯಂತ್ರ ಇತ್ತು ಎಂದು ಜನರ ಮುಂದೆ ಹೇಳಲಿ ಎಂದರು.

ಸಿದ್ದರಾಮಯ್ಯನವರು ಹಿಂದುಳಿದ ವರ್ಗಗಳ ಒಕ್ಕೂಟ ಮನವಿ ತಗೊಂಡಿದ್ದಾರೆ. ಒಬ್ಬ ಮುಖ್ಯಮಂತ್ರಿಯಾಗಿ ಹಿಂದುಳಿದವರಿಗೆ ಲಿಂಗಾಯತರಿಗೆ ಜಗಳ ಹಚ್ಚೋದು, ಈ ಮುಖ್ಯಮಂತ್ರಿಯಿಂದ ನಿಜವಾಗಿಯೂ ನಮಗೆ ನ್ಯಾಯ ಸಿಗೋದಿಲ್ಲ. ಸಿದ್ದರಾಮಯ್ಯಗೆ ಮನುಷ್ಯತ್ವ ಏನಾದರೂ ಇದ್ದರೆ ತನಿಖೆ ಮಾಡಿಸಲಿ.. ಇಲ್ಲವಾದಲ್ಲಿ ನಾವು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಕೊಡುತ್ತೇವೆ ಎಂದು ಯತ್ನಾಳ್ ಎಚ್ಚರಿಕೆ ನೀಡಿದರು.

ಆ ಅಧಿಕಾರಿಗಳು ಸಸ್ಪೆಂಡ್ ಆಗಬೇಕು, ಮುಂದಿನ ಅಧಿವೇಶನದಲ್ಲಿ ಏನ್ ಬೇಕಾದರೂ ಆಗಲಿ, ಇದಕ್ಕಿಂತ ದೊಡ್ಡದಾಗಿ ನಾವು ದೊಡ್ಡದಾಗಿ ಹೋರಾಟ ಮಾಡುತ್ತೇವೆ. ಕಲ್ಲು ಎಸದ್ರೋ ಅಥವಾ ಲಾಠಿ ಚಾರ್ಜ್ ಮಾಡಿದ್ರೋ ಮೊದಲು ಬಹಿರಂಗ ಪಡಿಸಿ. ಅಧಿಕಾರಿಗಳು ಸರ್ಕಾರದ ಕೈಗೊಂಬೆಯಾಗಿ ಕೆಲಸ ಮಾಡಿದ್ದಾರೆ ಎಂದು ಕಿಡಿಕಾರಿದರು.

ಡಿಸಿ ಆರ್ಡರ್ ಮಾಡ್ತಾನೆ, ಕರ್ಫ್ಯೂ ಹಾಕ್ತಾನೆ. ಮತಾಂತದರ ಕೈಯಲ್ಲಿ ರಾಜ್ಯ ಸಿಕ್ಕಿದೆ. ಸಿದ್ದರಾಮಯ್ಯ ಹಿಂದು ವಿರೋಧಿ, ದಲಿತ ವಿರೋಧಿ. ಸಂವಿಧಾನದ ಬಗ್ಗೆ ಏನಾದರೂ ಡಿಕೆಶಿಗೆ ಗೊತ್ತಿದೆಯಾ..? ಮುಸ್ಲಿಂರಿಗೆ ಮೀಸಲಾತಿ ಹೇಗೆ ಒಪ್ಕೊಳ್ತೀರಿ..? ಎಂದು ಸಿಎಂ ಸಿದ್ದರಾಮಯ್ಯ ವಿರುದ್ಧ ಬಸನಗೌಡ ಪಾಟೀಲ್ ಯತ್ನಾಳ್ ವಾಗ್ದಾಳಿ ನಡೆಸಿದರು.

# 'ಮೃತ ಬಾಣಂತಿಯರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಕೊಡಬೇಕು'

**ಬಳ್ಳಾರಿ:** ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಬಾಣಂತಿಯರ ಸರಣಿ ಸಾವಿನ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ನೀಡಲು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮಿ ಚೌಧರಿ ಗುರುವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಆಸ್ಪತ್ರೆಯಲ್ಲಿನ ವ್ಯವಸ್ಥೆ ಬಗ್ಗೆ ಸಂಬಂಧಪಟ್ಟವರಿಂದ ಮಾಹಿತಿ ಪಡೆದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, "ಬಾಣಂತಿಯರ ಸಾವು ಕೇವಲ ಬಳ್ಳಾರಿ ಮಾತ್ರವಲ್ಲ ರಾಯಚೂರು, ತುಮಕೂರು ಸೇರಿ ಹಲವು ಕಡೆ ಆಗಿದೆ. ಕಡಿಮೆ ವೆಚ್ಚಕ್ಕೆ ಔಷಧಿ ಸರಬರಾಜು ಮಾಡುವರಿಗೆ ಮಣೆ ಹಾಕಲಾಗುತ್ತಿದೆ. ಸರ್ಕಾರ ಅದನ್ನು ತಡೆದು, ಗುಣಮಟ್ಟದ ಔಷಧಿ ಕೊಡಬೇಕು" ಎಂದರು.



"ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ಹೆರಿಗೆ ವಾರ್ಡ್, ಒಟಿ ಪರಿಶೀಲನೆ ಮಾಡಿರುವೆ. ನೀರಿನ ಟ್ಯಾಂಕ್ ನೋಡಿ ಬಂದಿದ್ದೇನೆ.. ರೋಗಿಗಳನ್ನು ಮಾತನಾಡಿಸಿ ಮಾಹಿತಿ ಕಲೆ ಹಾಕಿದ್ದೇನೆ. ವೈದ್ಯರು ಐವಿ ಫ್ಲೂಯಿಡ್ ಕೊಟ್ಟ ಬಳಿಕ ಬಾಣಂತಿಯರ ಆರೋಗ್ಯದಲ್ಲಿ ಏರುಪೇರಾಯಿತು ಅಂತಾ ಹೇಳಿದ್ದಾರೆ" ಎಂದು ತಿಳಿಸಿದರು.

"ನಾಳೆ ಜಿಲ್ಲಾ ಆಸ್ಪತ್ರೆ ಹಾಗೂ ವಿಮ್ಸ್ ವೈದ್ಯರು ಹಾಗೂ ಇತರ ಆಸ್ಪತ್ರೆ ವೈದ್ಯರ ಜೊತೆ ಪ್ರಗತಿ ಪರಿಶೀಲನೆ ಮಾಡುತ್ತೇನೆ. ನಾಳೆ ಒಟಿಯಲ್ಲಿನ ಶುಚಿತ್ವದ ಬಗ್ಗೆ ಮಾಹಿತಿ ತರಲು ಹೇಳಿರುವೆ. ಒಟಿ ಶುಚಿಯಾಗಿತ್ತಾ, ಇಲ್ಲವಾ ಎನ್ನುವ ಬಗ್ಗೆ ಪ್ರತಿ ವರ್ಷ ವರದಿ ಮಾಡಬೇಕು. ಇಲ್ಲಿ ಮೆಲ್ನೋಟಕ್ಕೆ ಎಲ್ಲವೂ ಸರಿಯಾಗಿದೆ, ಆದರೆ, ಲ್ಯಾಬ್ ರಿಪೋರ್ಟ್ ಕೇಳಿದ್ದೇನೆ" ಎಂದು ಮಾಹಿತಿ ನೀಡಿದರು.

ಸರ್ಕಾರದ ಪರಿಹಾರ ಸಾಲದು: "ಬಾಣಂತಿಯರ ಸಾವಿಗೆ ಸರ್ಕಾರ ಕೊಟ್ಟಿರುವ ಪರಿಹಾರ ಸಾಕಾಗುವುದಿಲ್ಲ. ತಾಯಿಯನ್ನು ಕಳೆದುಕೊಂಡಿರುವ ಆ ಮಕ್ಕಳು ಎಲ್ಲಿವರೆಗೂ ಓದುತ್ತಾರೋ ಅಲ್ಲಿವರೆಗೂ ವಿದ್ಯಾಭ್ಯಾಸ ಉಚಿತವಾಗಿ ಕೊಡಬೇಕು. ಅನಾರೋಗ್ಯ ಸೇರಿದಂತೆ ಅವರ ಜೀವನಕ್ಕೆ ಅವಶ್ಯ ನೆರವು ನೀಡಬೇಕು. ನಾನು ಈ ಬಗ್ಗೆ ಸಿಎಂ ಬಳಿ ಮಾತನಾಡುವೆ" ಎಂದರು. ನೀರಿನ ಟ್ಯಾಂಕ್ ನೋಡಿ ವೈದ್ಯರಿಗೆ ತರಾಟೆ: ಜಿಲ್ಲಾಸ್ಪತ್ರೆ ಹೆರಿಗೆ ಒಟಿ, ಹರಿಗೆ ವಾರ್ಡ್‌ಗೆ ಭೇಟಿ ಪರಿಶೀಲನೆ ನಡೆಸಿದ ನಾಗಲಕ್ಷ್ಮಿ ಚೌದರಿ ಅವರು ಸರ್ಜನ್ ಡಾ. ಬಸಾರೆಡ್ಡಿ ಮೂಲಕ ಮಾಹಿತಿ ಪಡೆದರು. ಅಲ್ಲದೆ, ನೀರಿನ ಟ್ಯಾಂಕ್ ಪರಿಶೀಲನೆ ನಡೆಸಿದ ಅವರು, ವೈದ್ಯರನ್ನು ತರಾಟೆ ತೆಗೆದುಕೊಂಡರು. ನಾಗಲಕ್ಷ್ಮಿ ಅವರೊಂದಿಗೆ ಸಾಥ್ ನೀಡಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಯಲ್ಲಾ ರಮೇಶ್ ಬಾಬು ಸಾಥ್ ನೀಡಿದರು. ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಎಸ್‌ಪಿ ಡಾ. ಶೋಭಾರಾಣಿ ವಿ.ಜೆ., ಸಿಇಒ ರಾಹುಲ್ ಶರಣಪ್ಪ ಶಂಕನೂರು, ಬಿಮ್ಸ್ ನಿರ್ದೇಶಕ ಗಂಗಾಧರ ಗೌಡ ಇತರರು ಇದ್ದರು.

# ಸರ್ಕಾರದ ಬಗ್ಗೆ ಮೆಚ್ಚುಗೆ

**ಮೈಸೂರು:** ಮಾಜಿ ಸಿಎಂ ಎಸ್.ಎಂ ಕೃಷ್ಣ ಅವರ ಅಂತ್ಯಕ್ರಿಯೆಯನ್ನ ಅಚ್ಚುಕಟ್ಟಾಗಿ ನಡೆಸಿಕೊಟ್ಟ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಬಗ್ಗೆ ವಿಧಾನಪರಿಷತ್ ಬಿಜೆಪಿ ಸದಸ್ಯ ಹೆಚ್.ವಿಶ್ವನಾಥ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇಂದು ಮೈಸೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಂಎಲ್ ಸಿ ಹೆಚ್.ವಿಶ್ವನಾಥ್, ಮಾಜಿ ಸಿಎಂ ಎಸ್ ಎಂ ಕೃಷ್ಣ ಅವರ ಅಂತ್ಯ ಸಂಸ್ಕಾರವನ್ನ ರಾಜ್ಯ ಸರ್ಕಾರ ಬಹಳ ಗೌರವಯುತವಾಗಿ ನಡೆಸಿಕೊಟ್ಟಿದೆ. ಅವರನ್ನ ಅತ್ಯಂತ ಗೌರವದಿಂದ ಬೀಳ್ಕೊಟ್ಟಿದೆ. ಎಲ್ಲವನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿತು. ಹಾಗಾಗಿ ರಾಜ್ಯ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಶ್ಲಾಘಿಸಿದರು.

**ಸೋನಿಯಾಗಾಂಧಿ ವಿರುದ್ಧ ಅಸಮಾಧಾನ:** ಇದೇ ವೇಳೆ ಸೋನಿಯಾ ಗಾಂಧಿ ವಿರುದ್ದ ಅಸಮಾಧಾನ ವ್ಯಕ್ತಪಡಿಸಿದ ಹೆಚ್. ವಿಶ್ವನಾಥ್, ಕೇಂದ್ರದಲ್ಲಿ ಪ್ರಧಾನಿ ಮೋದಿಯವರು ಸಂತಾಪ ಸೂಚಿಸಿದ್ದಾರೆ.

ಆದರೆ ಕಾಂಗ್ರೆಸ್ ಅಧಿನಾಯಕಿ ಸೌಜನ್ಯಕ್ಕೂ ಸಂತಾಪ ಸೂಚಿಸಿಲ್ಲ, ಎಸ್.ಎಂ ಕೃಷ್ಣ ಅವರ ಬಗ್ಗೆ ತುಟಿಯನ್ನೇ ಬಿಚ್ಚಿಲ್ಲ ಇದು ವಿಷಾದನೀಯ. ಈ ಹಿಂದೆ ದೇವರಾಜು ಅರಸು ನಿಧನಕ್ಕೂ ಕೂಡ ಕಾಂಗ್ರೆಸ್ ನಾಯಕರು ಸರಿಯಾಗಿ ಸ್ಪಂದಿಸಲಿಲ್ಲ ಎಂದು ಸೋನಿಯಾ ಗಾಂಧಿ ಬಗ್ಗೆ ಬೇಸರ ವ್ಯಕ್ತಪಡಿಸಿದರು.

## ಮೊದಲ ಪುಟದಿಂದ

## ಉಗ್ರರ ಬಂಧನ

ಸಂಘಟನೆಯ ಮೂವರು ಸಕ್ರಿಯ ಕಾರ್ಯಕರ್ತರನ್ನು ಬಂಧಿಸಿದೆ.ಬಂಧಿತರನ್ನು ನಂಬ್ರಮ್ ಇಂದ್ರಜಿತ್ ಸಿಂಗ್, ರಾಜ್‌ಕುಮಾರ್ ಮೊಹೆನ್ ಸನಾ ಮತ್ತು ವಾರೆಪಮ್ ಆಲ್ಬರ್ಟ್ ಮೈತೆ ಥೋಯ್ ಎಂದು ಗುರುತಿಸಲಾಗಿದೆ. ಅವರ ವಶದಿಂದ ಒಂದು ಗ್ರೆನೇಡ್, ಪ್ರಿಪಕ್ (ಪೊ) ಬೇಡಿಕೆ ಪತ್ರಗಳು, ಮೂರು ಮೊಬೈಲ್ ಫೋನ್‌ಗಳು ಮತ್ತು ಒಂದು ಮೋಟಾರ್‌ಸೈಕಲ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಚಾರಣೆಯ ವೇಳೆ, ಬಂಧಿತ ಉಗ್ರಗಾಮಿ ಸಂಘಟನೆಯ ಕಾರ್ಯಕರ್ತರು ತಮ ಸಂಘಟನೆಯ ಸಿಂಥೋಯಿಬಾ ಅವರ ಸೂಚನೆಯ ಮೇರೆಗೆ ತೌಬಲ್ ಜಿಲ್ಲೆಯ ಶಾಲೆಗಳು, ಕಾಲೇಜುಗಳು ಮತ್ತು ಸರ್ಕಾರಿ ಕಚೇರಿಗಳಿಂದ ಸುಲಿಗೆಯಲ್ಲಿ ತೊಡಗಿದ್ದರು ಎಂದು ಒಪ್ಪಿಕೊಂಡಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಬಂಧಿತ ವ್ಯಕ್ತಿಗಳನ್ನು ವಶಪಡಿಸಿಕೊಂಡ ವಸ್ತುಗಳೊಂದಿಗೆ ಮುಂದಿನ ಕಾನೂನು ಕ್ರಮ ಜರುಗಿಸಲು ತೌಬಲ್ ಪೊಲೀಸ್ ಠಾಣೆಗೆ ಹಸ್ತಾಂತರಿಸಲಾಗಿದೆ.ಏತನಧ್ಯೆ, ಭದ್ರತಾ ಪಡೆಗಳು, ಚುರಾಚಂದ್‌ಪುರ ಮತ್ತು ಚಾಂಡೆಲ್ ಜಿಲ್ಲೆಗಳಲ್ಲಿ ಪ್ರತ್ಯೇಕ ಶೋಧ ಕಾರ್ಯಾಚರಣೆಯಲ್ಲಿ 10 ಬಂದೂಕುಗಳು ಮತ್ತು ಮದ್ದುಗುಂಡುಗಳ ಸಂಗ್ರಹವನ್ನು ವಶಪಡಿಸಿಕೊಂಡಿದ್ದಾರೆ ಎಂದು ಮತ್ತೊಂದು ಪೊಲೀಸ್ ಹೇಳಿಕೆ ತಿಳಿಸಿದೆ.

## 5 ವರ್ಷದ ಬಾಲಕ ಸಾವು

ಆಂಬ್ಯುಲೆನ್ಸ್ ನಲ್ಲಿ ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಯಿತು, ಅಲ್ಲಿ ವೈದ್ಯರು ಆತ ಈಗಾಗಲೆ ಸಾವನ್ನಪ್ಪಿದ್ದಾನೆ ಎಂದು ಘೆಣಟಿಜಜಜುಟಿಜಜಷಿಸಿದರು ಎಂದು ಪೊಲೀಸರು ತಿಳಿಸಿದ್ದಾರೆ. ಕಳೆದ ಸೋಮವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಕಾಲಿಖಾಡ್ ಗ್ರಾಮದಲ್ಲಿ ಈ ಘಟನೆ ಸಂಭವಿಸಿದ್ದು, ಆರ್ಯನ್ ಜಮೀನಿನಲ್ಲಿ ಆಟವಾಡುತ್ತಿದ್ದಾಗ ಆಕಸಿಕವಾಗಿ ತಾಯಿಯ ಎದುರಿನ ಬೋರ್‌ವೆಲ್‌ಗೆ ಬಿದ್ದಿದ್ದಾನೆ.ನಂತರ ವಿಷಯ ತಿಳಿದು ಗ್ರಾಮಸ್ಥರು ಸ್ಥಳಕ್ಕೆ ಬಂದು ಪೊಲೀಸರಿಗೆ ಮಾಹಿತಿ ನೀಡಿದರು ಒಂದು ಗಂಟೆಯ ನಂತರ ರಕ್ಷಣಾ ಕಾರ್ಯಾಚರಣೆ ಆರಂಭವಾಯಿತು. ರಕ್ಷಣಾ ತಂಡ ಅಲ್ಲಿಗೆ ತಲುಪಿದ ತಕ್ಷಣ ಪೈಪ್ ಮೂಲಕ ಆಮ್ಲಜನಕ ಪೂರೈಕೆ ಆರಂಭಿಸಿ ಅವರ ಚಲನವಲನವನ್ನು ಸೆರೆಹಿಡಿಯಲು ಕ್ಯಾಮರಾ ಇರಿಸಲಾಗಿತ್ತು.

## ಪ್ರತಿಭಟನೆ

ಲಿಂಗಾಯತ ಸಮಾಜದ ವಿರುದ್ಧ ಸಿದ್ದರಾಮಯ್ಯ ಅವರು ಒಡೆದು ಆಳುವ ನೀತಿ ಅನುಸರಿಸಿದ್ದರು. ಇಂದು ಶಾಂತಿಯುತವಾಗಿ ಧರಣಿ ನಡೆಯುತ್ತಿರುವಾಗ ಪೊಲೀಸರನ್ನು ಛೂ ಬಿಟ್ಟಿದ್ದೀರಿ. ಸಿದ್ದರಾಮಯ್ಯ ಅವರೇ ನಿಮಗೆ ಪ್ರಜಾಪ್ರಭುತ್ವದ ಮೇಲೆ ವಿಶ್ವಾಸ ಇಲ್ಲವೇ? ಎಂದು ಪ್ರಶ್ನಿಸಿದರು.

"ಮೀಸಲಾತಿ ಹೋರಾಟ ನಡೆದಾಗ ಸೌಜನ್ಯ ಇದ್ದಿದ್ದರೆ ಸಿಎಂ ಅವರು ಜಯಮೃತ್ಯುಂಜಯ ಸ್ವಾಮೀಜಿ ಅವರನ್ನು ಭೇಟಿಯಾಗಬೇಕಿತ್ತು. ಸಿಎಂ ಸಿದ್ದರಾಮಯ್ಯ ಅಹಂ, ದುರಹಂಕಾರದಿಂದ ನಡೆದುಕೊಳ್ಳುತ್ತಿದ್ದಾರೆ. ಅಧಿಕಾರ ಎಂಬುದು ಶಾಶ್ವತ ಅಲ್ಲ. ನೀವು ಅಧಿಕಾರವನ್ನು ಸದ್ಬಳಕೆ ಮಾಡದೇ, ಜಾತಿ, ಧರ್ಮ ಮಧ್ಯೆ ವಿಷ ಬೀಜ ಬಿತ್ತಿದ್ದೀರಿ. ಲಾಠಿ ಪ್ರಹಾರ ಮಾಡಿರುವುದು ಅಕ್ಷಮ್ಯ ಅಪರಾಧವಾಗಿದೆ. ಸ್ವಾಮಿಗಳು ಹಾಗೂ ಪಂಚಮಸಾಲಿ ಸಮಾಜದ ಕ್ಷಮಾಪಣೆ ಕೇಳಬೇಕು. ದೌರ್ಜನ್ಯ ಮಾಡಿದ ಪೊಲೀಸರ ವಿರುದ್ಧ ಕ್ರಮ ತೆಗದುಕೊಳ್ಳಬೇಕು" ಎಂದು ಆಗ್ರಹಿಸಿದರು.

ನ್ಯಾಯಾಂಗ ತನಿಖೆ ನಡೆಸಬೇಕು: ಇದೇ ವೇಳೆ ಮಾತನಾಡಿದ ವಿಪಕ್ಷ ನಾಯಕ ಆರ್.ಅಶೋಕ್, ''ಸಿದ್ದರಾಮಯ್ಯ ಕುತಂತ್ರದಿಂದ ಲಿಂಗಾಯತ ಸಮುದಾಯಕ್ಕೆ ಲಾಠಿ ಏಟು ಕೊಟ್ಟಿದ್ದಾರೆ. ಬಸವಣ್ಣನವರ ಅನುಭವ ಮಂಟಪ ತೈಲ ಚಿತ್ರ ಅನಾವರಣಗೊಳಿಸಿ, ಭಾಷಣ ಮಾಡಿದ ಸಿಎಂ ದಯೆಯೇ ಧರ್ಮದ ಮೂಲ ಎಂದು ವಚನ ಹೇಳಿದ್ದರು.

ಆದರೆ, ಇಲ್ಲಿ ದಯೆ ಇಲ್ಲದೇ ರಕ್ತ ಬರುವಂತೆ ಹಲ್ಲೆ ಮಾಡಿದ್ದಾರೆ. ಇದೆಲ್ಲ ಪೂರ್ವಯೋಜಿತವಾಗಿದೆ. ಪೊಲೀಸರೇ ಪ್ರತಿಭಟನಾಕಾರರ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಕಾಂಗ್ರೆಸ್ ಸರ್ಕಾರ ಸ್ವಾಮಿಗಳ ಕ್ಷಮೆಯಾಚಿಸಬೇಕು. ಹಲ್ಲೆ ಮಾಡಿದ ಅಧಿಕಾರಿಗಳನ್ನು ಅಮಾನತು ಮಾಡಬೇಕು. ಈ ಬಗ್ಗೆ ನ್ಯಾಯಾಂಗ ತನಿಖೆ ಮಾಡಬೇಕು" ಎಂದು ಆಗ್ರಹಿಸಿದರು.

ಗಾಯಾಳುಗಳ ಕಿಡ್ನಾಪ್ ಮಾಡಿದ್ದೀರಿ: ಪರಿಷತ್ ವಿಪಕ್ಷ ನಾಯಕ ಚಲವಾದಿ ನಾರಾಯಣಸ್ವಾಮಿ ಮಾತನಾಡಿ, "ಕೈಯ್ಯಲ್ಲಿ ಶರಣು, ಕಂಕುಳಲ್ಲಿ ದೊಣ್ಣೆ ಇದು ಸರ್ಕಾರದ ನೀತಿಯಾಗಿದೆ. ನಿಜಲಿಂಗಪ್ಪ ಕಾಲದಿಂದ ಈವರೆಗೆ ಕಾಂಗ್ರೆಸ್ ಇದೇ ದ್ವಂದ್ವ ನೀತಿ ಹೊಂದಿದ್ದಾರೆ. ಈ ಮುಂಚೆ ಲಿಂಗಾಯತ ಸಮಾಜವನ್ನು ಒಡೆದು ಕೆಲಸ ಮಾಡಿದ್ದರು. ನಾವು ಮೀಸಲಾತಿ ಬಗ್ಗೆ ಕೊಟ್ಟ ಮಾತು ಈಡೇರಿಸಿದ್ದೆವು. ಆದರೆ, ನೀವು ನುಡಿದಂತೆ ನಡೆದಿಲ್ಲ" ಎಂದು ಆರೋಪಿಸಿದರು."ಮೊನ್ನೆ ಲಾಠಿಚಾರ್ಜ್ ಮಾಡಿಸಿದ್ದೀರಿ. ಲಾಠಿ ಚಾರ್ಜ್ ನಲ್ಲಿ ಗಾಯಾಳುಗಳನ್ನು ಕಿಡ್ನಾಪ್ ಮಾಡಿ ಎಲ್ಲಿ ಇಟ್ಟಿದ್ದೀರಿ? ಗಾಯಾಳುಗಳು ಎಲ್ಲಿ ಹೋಗಿದ್ದಾರೆ. ನಿಮಗೆ ಪಾಠ ಕಲಿಸಬೇಕಾಗುತ್ತೆ. ಮೀಸಲಾತಿ ನೀಡಿದರೆ ಯಾರಿಗೆ ತೊಂದರೆ ಆಗುತ್ತೆ? ಹಿಂದುಳಿದ ವರ್ಗಗಳನ್ನು ಎತ್ತಿಕಟ್ಟಿ ಅವರಿಂದ ಪತ್ರ ಬರೆಸುತ್ತಿದ್ದೀರಿ. ನೀವೇ ಆ ಬಗ್ಗೆ ಟ್ವೀಟ್ ಮಾಡುತ್ತೀರಿ. ನೀವು ಸಿಎಂ ಆಗುವುದಕ್ಕೆ ಯೋಗ್ಯರಾ? ನಿಮ್ಮ ಚರಿತ್ರೆಯನ್ನು ದಿನಹೋದಂತೆ ಹೊರಬರಲಿದೆ" ಎಂದು ಚಲವಾದಿ ನಾರಾಯಣಸ್ವಾಮಿ ಕಿಡಿಕಾರಿದರು. ಪ್ರತಿಭಟನೆಯಲ್ಲಿ ಬಿಜೆಪಿ ವಿಧಾನಸಭೆ ಹಾಗೂ ವಿಧಾನಪರಿಷತ್ ಸದಸ್ಯರು ಪಾಲ್ಗೊಂಡಿದ್ದರು.

## ಅನಿವಾರ್ಯವಾಗಿತ್ತು

ಬೆಳಗಾವಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಗಳು ಮಹದೇವಪ್ಪ, ವೆಂಕಟೇಶ್, ಸುಧಾಕರ್ ಅವರನ್ನ ಮೂರು ಜನ ಸಚಿವರುಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ಅದರಲ್ಲಿ ಸ್ಥಳೀಯ ಸಚಿವರಾಗಿ ರುವಂತಹ ಲಕ್ಷ್ಮಿ ಹೆಬ್ಬಾಳಕರ್ ಕೂಡ ಇದ್ದರು

ಅವರು ಕೂಡ ಮುಖ್ಯಮಂತ್ರಿಗಳು ಈ ರೀತಿ ಹೇಳಿದ್ದಾರೆ. ಎಲ್ಲರು ಕುಳಿತುಕೊಂಡು ಚರ್ಚೆ ಮಾಡೋಣ ಬನ್ನಿ ಅಂತ ಹೇಳಿದ ಕಳಿಸಿದ್ದಾರೆ ಎಂದರು. ಆಗಲು ಕೂಡ ಇಲ್ಲ ನಾವು ಬರೋದಿಲ್ಲ ಮುಖ್ಯಮಂತ್ರಿಗಳೇ ಇಲ್ಲಿಗೆ ಬರಲಿ ಅಂತ ಹೇಳಿದರು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಬರೋದಿಕ್ಕೆ ಸಾಧ್ಯವಿಲ್ಲ ಎಂದಾಗ ಇದಕ್ಕಿದಂತೆ ಸ್ವಾಮೀಜಿಯವರು ವಿಧಾನಸೌಧಕ್ಕೆ ಹೋಗೋಣ ಬನ್ನಿ ಎಂದು ಕರೆದುಕೊಂಡು ಹೋಗಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯ ರಸ್ತೆಗೆ ಬರೋದಕ್ಕೆ ಶುರು ಮಾಡಿದ್ದಾರೆ ಬ್ಯಾರಿಕೆಡ್ ತಳ್ಳಿ ಮುಖ್ಯರಸ್ತೆಗೆ ಬರೋದಕ್ಕೆ ಪ್ರಯತ್ನ ಮಾಡಿದಾಗ ಅಲ್ಲಿ ಪೊಲೀಸರು ಅವರನ್ನು ತಡೆದಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ನಮ್ಮ ಬಳಿಯೂ ವಿಡಿಯೋ ಮತ್ತು ಫೋಟೋಗಳಿವೆ. ಪಂಚಮಸಾಲಿ ಹೋರಾಟಗಾರರು ಕಾನೂನು ಕೈಗೆತ್ತಿಕೊಂಡಿದ್ದರು. ಸ್ವತಹ ಸಿಎಂ ಹೋರಾಟ ಸ್ಥಳಕ್ಕೆ ಬರಬೇಕು ಎಂದು ಪಟ್ಟು ಹಿಡಿದಿದ್ದರು.

ನಾವು ಸಚಿವರನ್ನು ಪ್ರತಿಭಟನೆ ಸ್ಥಳಕ್ಕೆ ಕಳಿಸಿದಾಗಲೂ ಕೂಡ ಅವರು ಒಪ್ಪಲಿಲ್ಲ ಪಂಚಮಸಾಲಿ ಹೋರಾಟಗಾರರು ಮೊದಲು ಚಪ್ಪಲಿ, ಕಲ್ಲು ಎಸೆದರು. ಜಯ ಮೃತ್ಯುಂಜಯ ಸ್ವಾಮೀಜಿ ಸೇರಿದಂತೆ ಹಲವರು ಕಾನೂನು ಕೈಗೆತ್ತಿಕೊಂಡರು.

ಮುತ್ತಿಗೆ ಹಾಕುತ್ತೇವೆ ಎಂದಾಗ ತಡೆಯುವುದು ಅನಿವಾರ್ಯ ಆಗಿತ್ತು. ಸುವರ್ಣಸೌಧಕ್ಕೆ ಮುತ್ತಿಗೆ ಹಾಕಲು ಹೀಗೆ ಅವಕಾಶ ನೀಡಿದರೆ ನಾಳೆ ಎಲ್ಲರೂ ಮುತ್ತಿಗೆ ಹಾಕಲು ಬರುತ್ತಾರೆ. ಕೋರ್ಟ್ ತಡೆಯಾಜ್ಞೆ ಇದ್ದಾಗಲೂ ನಿರ್ಬಂಧ ನಿಯಮ ಉಲ್ಲಂಘನೆಯಾಗಿದೆ. ಜಯ ಮೃತ್ಯುಂಜಯ ಸ್ವಾಮೀಜಿ ಎಲ್ಲರೂ ಸೇರಿ ನಿರ್ಬಂಧ ಉಲ್ಲಂಘಿಸಿದ್ದಾರೆ. ಇದಕ್ಕೆ ಸಂಬಂಧಿಸಿದ ವಿಡಿಯೋ ಹಾಗೂ ಫೋಟೋ ದಾಖಲೆಗಳಿವೆ ಎಂದು ಬೆಳಗಾವಿಯಲ್ಲಿ ಗೃಹ ಇಲಾಖೆಯ ಸಚಿವ ಡಾ. ಜಿ ಪರಮೇಶ್ವರ್ ತಿಳಿಸಿದರು.

**ಎಲ್ಲರೂ ಒಪ್ಪುವ ರೀತಿಯಲ್ಲಿ ಸರ್ಕಾರ ತೀರ್ಮಾನ ನೀಡಲಿದೆ**

ಸರ್ಕಾರದ ವಿರುದ್ಧ ವಿಪಕ್ಷ ನಾಯಕ ಕಿಡಿ: ವಿಪಕ್ಷ ನಾಯಕ ಆರ್. ಅಶೋಕ್ ಮಾಧ್ಯಮದವರಿಗೆ ಪ್ರತಿಕ್ರಿಯಿಸಿ, ಬಿಜೆಪಿ ತಮ್ಮ ಸರ್ಕಾರದ ಸಮಯದಲ್ಲಿ ಮೀಸಲಾತಿ ಕೊಟ್ಟಿದ್ದೆವು. ಅಲ್ಪಸಂಖ್ಯಾತರಿಗೆ ಈ ದೇಶದ ಕಾನೂನು ಪ್ರಕಾರ ಧರ್ಮ ಆಧಾರಿತ ಮೀಸಲಾತಿ ಕೊಡಲು ಸಾಧ್ಯವಿಲ್ಲ. ಇದು ಸಂವಿಧಾನದಲ್ಲೇ ಇದೆ. ನಾವು ಅದನ್ನು ತೆಗೆದು ಹಾಕಿ ಆ ಮೀಸಲಾತಿಯನ್ನು ಪಂಚಮಸಾಲಿ, ಮರಾಠ ಮತ್ತು ಒಕ್ಕಲಿಗ ಸಮುದಾಯಕ್ಕೆ ನಾವು ಕೊಟ್ಟಿದ್ದೇವೆ. ಆದರೆ ಕಾಂಗ್ರೆಸ್‌ನವರದ್ದು ವೋಟ್ ಬ್ಯಾಂಕ್ ಪಾಲಿಟಿಕ್ಸ್. ಅವರಿಗೆ ಕರುಣೆ ತೋರಿಸುವ ಮುಖಾಂತರ ಈ ಮೀಸಲಾತಿಯನ್ನು ತಡೆಹಿಡಿದಿದ್ದಾರೆ" ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿದ್ದರಾಮಯ್ಯ ಅವರು ಮಾತುಕತೆಗೆ ಆಹ್ವಾನ ಮಾಡಿದರೂ ಬಿಜೆಪಿ ನಾಯಕರು ಯಾರೂ ಹೋಗಿಲ್ಲ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, "ಅದೆಲ್ಲ ಸುಳ್ಳು. ಸ್ವಾಮೀಜಿ ಅವರೇ ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. ನಾವು ಮನವಿ ಕೊಡಲು ಬರುವಾಗ ನಮ್ಮನ್ನು ತಡೆದು ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ ಎಂದು ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರೇ ಹೇಳಿದ್ದಾರೆ" ಎಂದರು.

## ನಾರಾಯಣ್ ನಿಧನ

ನಾರಾಯಣ್ ಅವರು ತುಮಕೂರಿನ ಬೆಳ್ಳಾವಿ ಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು.

## ಮೋದಿ ಕನಸು ಅನಾವರಣ

ಟ್ಯಾಕ್ಸಾನಮಿ ಬಿಡುಗಡೆಯು ಒಂದು ಐತಿಹಾಸಿಕ ಹೆಜ್ಜೆ ಎಂದು ನಾನು ಹೇಳ ಬಯಸುತ್ತೇನೆ. ಏಕೆಂದರೆ, ಇದು ಉಕ್ಕಿನ ಉತ್ಪಾದನೆಯನ್ನು ಸಂಪೂರ್ಣವಾಗಿ ಮಾಲಿನ್ಯ ಮುಕ್ತಗೊಳಿಸಲು ಸಮಗ್ರವಾಗಿ ಕೆಲಸ ಮಾಡುತ್ತದೆ. ಅಲ್ಲದೆ, ಪರಿಸರಕ್ಕೆ ಪೂರಕವಾಗಿ ಹೊಣೆ ಗಾರಿಕೆಯನ್ನು ಉತ್ತೇಜಿಸುವ ಕಾರ್ಯವನ್ನೂ ಮಾಡುತ್ತದೆ ಎಂದು ಕೇಂದ್ರ ಸಚಿವರು ಹೇಳಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ಭಾರತದ ಉಕ್ಕಿನ ಕ್ಷೇತ್ರವು ತನ್ನ ಬೆಳವಣಿಗೆಯ ಪಥವನ್ನು ಮತ್ತಷ್ಟು ವಿಸ್ತೃತಗೊಳಿಸಿಕೊಂಡು, ಸುಸ್ಥಿರ ಜಾಗತಿಕ ಪರಿವರ್ತನೆಗೆ ನಾಂದಿ ಹಾಡಿದೆ. ಅಲ್ಲದೆ, ಜಾಗತಿಕ ಮಟ್ಟದಲ್ಲಿ ಭಾರತವು ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದು ಅವರು ಹೇಳಿದರು.

ರಾಷ್ಟ್ರೀಯ ಗ್ರೀನ್ ಸ್ಟೀಲ್ ಮಿಷನ್ ನ ಕಾರ್ಯಸೂಚಿಯ ಪ್ರಕಾರ; ಹೈಡ್ರೋಜನ್ ಆಧಾರಿತ ಉಕ್ಕು ಉತ್ಪಾದನೆ ಮತ್ತು ಇಂಗಾಲ ಹೊರಸೂಸುವಿಕೆಯನ್ನು ಶೂನ್ಯ ಮಟ್ಟಕ್ಕೆ ತರುವುದು, ಸುಸ್ಥಿರ ಅಭಿವೃದ್ಧಿಗೆ ಹಸಿರುಪೂರಕ ತಂತ್ರಜ್ಞಾನಗಳನ್ನು ಉತ್ತೇಜಿಸುವುದು, ಉಕ್ಕಿನ ಮರು ಬಳಕೆ ಹೆಚ್ಚಳ ಮಾಡುವುದು ಮತ್ತು ಉತ್ತೇಜಿಸುವುದು, ಉಕ್ಕಿನ ಸುಸ್ಥಿರ ಉತ್ಪಾದನೆಗೆ ಸಂಶೋಧನೆ ಅಭಿವೃದ್ಧಿಗೆ ಒತ್ತು ಕೊಡಲಾಗುತ್ತದೆ ಎಂದು ಕೇಂದ್ರ ಸಚಿವರು ಪ್ರಮುಖವಾಗಿ ಉಲ್ಲೇಖಿಸಿದರು.

ಈಗ ಬಿಡುಗಡೆಯಾಗಿರುವ ಟ್ಯಾಕ್ಸಾನಮಿಯು ಪ್ಯಾರಿಸ್ ಒಪ್ಪಂದದ ಬದ್ಧತೆಗಳನ್ನು ಪೂರೈಸುತ್ತದೆ. ಜಾಗತಿಕವಾಗಿ ಉತ್ತಮ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಮಾನದಂಡವಾಗಿ ಕಾರ್ಯನಿರ್ವಹಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಈ ಚೌಕಟ್ಟನ್ನು ರೂಪಿಸಲು ನೀಡಿದ ಕೊಡುಗೆಗಳಿಗಾಗಿ ಉಕ್ಕು ಉತ್ಪಾದಕರು,

ನೀತಿ ನಿರೂಪಕರು ಮತ್ತು ಪರಿಸರ ತಜ್ಞರು ಸೇರಿದಂತೆ ಅನೇಕರಿಗೆ ಕೇಂದ್ರ ಸಚಿವರು ಕೃತಜ್ಞತೆ ಸಲ್ಲಿಸಿದರು. ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ರಾಜ್ಯ ಸಚಿವರಾದ ಭೂಪತಿರಾಜು ಶ್ರೀನಿವಾಸ ವರ್ಮ ಮತ್ತು ಉಕ್ಕು ಸಚಿವಾಲಯದ ಕಾರ್ಯದರ್ಶಿ ಸಂದೀಪ್ ಪೌಂಡ್ರಿಕ್ ಅವರು ಸೇರಿದಂತೆ ಸಚಿವಾಲಯದ ಹಲವಾರು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಮನೆ ಕಟ್ಟಲು ಮುಂದಾಗಿದ್ದಾರೆ

ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಅವರನ್ನು ಖುಷಿ ಪಡಿಸಲು ಅಲ್ಲಿ ಬಡವರಿಗೆ ಮನೆ ಕಟ್ಟಿಸುವುದಾಗಿ ಹೇಳಿದ್ದಾರೆ" ಎಂದು ಕಿಡಿ ಕಾರಿದರು.

"ಇದರ ಜೊತೆಗೆ ಕೇರಳ ಉಪಚುನಾವಣೆ ಪ್ರಚಾರದ ವೇಳೆ ಡಿಸಿಎಂ ಡಿಕೆಶಿ ಬಂಡೀಪುರದಲ್ಲಿ ರಾತ್ರಿ ಸಂಚಾರಕ್ಕೆ ಅವಕಾಶ ನೀಡುವುದಾಗಿ ಹೇಳಿಕೆ ನೀಡಿದ್ದರು. ಇದು ಸರಿಯಲ್ಲ. ಸುಪ್ರೀಂ ಕೋರ್ಟ್‌ನಲ್ಲಿ ಈ ಬಗ್ಗೆ ತೀರ್ಮಾನ ಆಗಿದೆ. ಸಿಎಂ ಹಾಗೂ ಡಿಸಿಎಂ ರಾಜ್ಯದ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಮರೆತಿದ್ದಾರೆ. ಈ ವಿಚಾರವನ್ನೂ ಸದನದಲ್ಲಿ ಪ್ರಸ್ತಾಪಿಸುತ್ತೇವೆ. ಈ ಬಗ್ಗೆ ಪತ್ರವನ್ನೂ ಬರೆಯುತ್ತಿದ್ದೇನೆ" ಎಂದರು.

"ಸಿಎಂ ಸಿದ್ದರಾಮಯ್ಯ ಅಧಿಕಾರದ ದರ್ಪದಿಂದ ನಡೆದುಕೊಳ್ಳುತ್ತಿದ್ದಾರೆ. ಮೀಸಲಾತಿ ಹೋರಾಟ ಕೈಗೊಂಡಾಗ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಲು ಏನು ದಾಡಿಯಾಗಿತ್ತು. ಪ್ರತಿಭಟನಾಕಾರರ ಬಳಿ ಹತ್ತು ಹೆಜ್ಜೆ ಹೋಗಿ ಭೇಟಿ ಮಾಡಲು ಏಕೆ ಆಗಿಲ್ಲ? ಸಿಎಂ ಇಲ್ಲೇ ಸುವರ್ಣಸೌಧದಲ್ಲಿ ಇದ್ದಗಾಲೂ ಸ್ವಾಮೀಜಿಯನ್ನು ಭೇಟಿಯಾಗುವ ವ್ಯವದಾನ ತೋರಿಲ್ಲ. ಸರ್ಕಾರ ಚೆನ್ನಮ್ಮನ ನಾಡಿನಲ್ಲಿ ರಕ್ತ ಹರಿಸುವ ಕೆಲಸ ಮಾಡಿದೆ. ಯಾವ ಕಾರಣಕ್ಕೆ ಲಾಠಿ ಪ್ರಹಾರ ಮಾಡಿದೆ. ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು. ಅಮಾಯಕರ ಮೇಲೆ ಲಾಠಿ ಪ್ರಹಾರ ಮಾಡಿದ್ದಾರೆ. 138 ಶಾಸಕರು ಇದ್ದೇವೆ. ಮುಂದೆ ನಾವೇ ಅಧಿಕಾರದಲ್ಲಿ ಇರುತ್ತೇವೆ ಎಂಬ ಭ್ರಮೆಯಲ್ಲಿ ಈ ರೀತಿ ಮಾಡುತ್ತಿದ್ದಾರೆ" ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ಪ್ರಥಮ ಮಹಾ ದಂಡನಾಯಕ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಗೂ ಜನರಲ್ ತಿಮ್ಮಯ್ಯ ಅವರನ್ನು ಅಪಮಾನಿಸಿ ಪೋಸ್ಟ್ ಮಾಡಿದ್ದ ವ್ಯಕ್ತಿಗೆ ಕೇವಲ ಆರು ತಿಂಗಳ ಕಾಲ ಬಾರ್ ಕೌನ್ಸಿಲ್ ನಿಂದ ಹೊರಗಿಡಲಾಗಿದೆ.

ಆದರೆ ಆ ವ್ಯಕ್ತಿಯನ್ನು ಕನಿಷ್ಠ ಆರುಗಳು ಕಾಲವಾದರೂ ಜಿಲ್ಲೆಯಿಂದ ಗಡಿಪಾರು ಮಾಡುವಂತೆ ಆಗ್ರಹಿಸಿ ಇಂದು ಸರ್ವಜನಾಂಗದ ಒಕ್ಕೂಟ ಜಿಲ್ಲಾ ಬಂದ್ ಗೆ ಕರೆ ನೀಡಿತ್ತು.

ಖಾಸಗಿ ಬಸ್ ಮಾಲೀಕರ ಸಂಘ, ಆಟೋ ಮಾಲೀಕರು ಮತ್ತು ಚಾಲಕರ ಸಂಘ, ಜಿಲ್ಲಾ ಛೇಂಬರ್ ಆಫ್ ಕಾಮರ್ಸ್ ವಿವಿಧ ಕೊಡವ ಸಮಾಜಗಳು ಸೇರಿದಂತೆ ಒಟ್ಟು 21 ಕ್ಕೂ ಹೆಚ್ಚು ವಿವಿಧ ಸಂಘ ಸಂಸ್ಥೆಗಳು ಕೊಡಗು ಜಿಲ್ಲಾ ಬಂದ್‌ಗೆ ಸೂಚಿಸಿದ್ದವು.

## ಮಾಜಿ ಶಾಸಕ ನಾರಾಯಣ ನಿಧನಕ್ಕೆ ಡಿಸಿಎಂ ಸಂತಾಪ

ಕಾಂಗ್ರೆಸ್ ಪಕ್ಷದ ಭದ್ರ ಬುನಾದಿಗೆ ಶ್ರಮಿಸಿದವರು. ತಮ್ಮ ಅಚ್ಚುಕಟ್ಟುತನದಿಂದ ಕೂಡಿದ ಕೆಲಸಕ್ಕೆ ಹೆಸರಾಗಿದ್ದವರು. ತುಮಕೂರು ಜಿಲ್ಲೆಯಲ್ಲಿ ಪಕ್ಷದ ಪ್ರಮುಖ ನಾಯಕರಾಗಿದ್ದರು. ಕಾಂಗ್ರೆಸ್ ಪಕ್ಷದ ಏಳಿಗೆಗೆ ಇವರ ಕೊಡುಗೆ ಅಪಾರ. ಸರಳ, ಸಜ್ಜನಿಕೆಯ ವ್ಯಕ್ತಿತ್ವ ದೂರವಾಗಿರುವುದು ನೋವಿನ ಸಂಗತಿ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ" ಎಂದು ಶಿವಕುಮಾರ್ ಅವರು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.



ಮಹಾಲಕ್ಷ್ಮಿ ಎಜುಕೇಶನ್ ಟ್ರಸ್ಟ್ ಮತ್ತು ಮಾತೃ ಮಿಲನ ಕ್ರೀಡೆ ಹಾಗೂ ಸಾಂಸ್ಕೃತಿ ಸಂಘ, ವಿಶ್ವ ಒಕ್ಕಲಿಗರ ಮಹಿಳಾ ವೇದಿಕೆ ,ಸಿರಿಗಂಧ ಮಹಿಳಾ ಒಕ್ಕಲಿಗರ ಸಂಘ ನಾಗಪುರ ವಾರ್ಡ್ನ ಶಾಸಕರ ಕಚೇರಿಯಲ್ಲಿ ಆಯೋಜಿಸಿದ್ದ ಮಹಿಳೆಯರಿಗಾಗಿ ಉಚಿತ ಹೃದಯ ಮತ್ತು ಆರೋಗ್ಯ ತಪಾಸಣಾ ಶಿಬಿರವನ್ನು ಸ್ಥಳೀಯ ಶಾಸಕರಾದ ಕೆ ಗೋಪಾಲಯ್ಯನವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಹಾಲಕ್ಷ್ಮಿ ಎಜುಕೇಶನ್ ಟ್ರಸ್ಟ್ ನ ಅಧ್ಯಕ್ಷ ಜಯರಾಮಯ್ಯ, ಡಾ. ಗಳಾದ ಮಂಜುನಾಥ್ ಗೌಡ ಗೋಪಾಲಯ್ಯ. ಸಂಜಯ್ ಗೌಡ ಗೋಪಾಲಯ್ಯ ಮುಖಂಡರುಗಳ ವೆಂಕಟೇಶ್ ಮೂರ್ತಿ, ವೆಂಕಟೇಶ್ ಮತ್ತಿತರರಿದ್ದರು

# ನೀರು ಪೂರೈಸುವ ಪೈಪ್ ಹಾನಿ, ಕೂಡಲೇ ಸ್ಥಳಕ್ಕೆ ಆಗಮಿಸಿದ ನಗರಸಭೆ ಅಧ್ಯಕ್ಷ ಎ.ಗಜೇಂದ್ರ

**ಚಿಕ್ಕಬಳ್ಳಾಪುರ:** ನಗರದ ಎಂ.ಜಿ.ರಸ್ತೆಯಲ್ಲಿ ದರ್ಗಾ ಮುಂಭಾಗ ಬೃಹತ್ ಪ್ರಮಾಣದಲ್ಲಿ ನೀರು ಹರಿದು ರಸ್ತೆ ತುಂಬಿ ಹರಿಯುತ್ತಿತ್ತು.

ರಾಷ್ಟ್ರೀಯ ಹೆದ್ದಾರಿ 69 ಅಗಲೀಕರಣದಂತೆ ಚರಂಡಿ ಕಾಮಗಾರಿ ನಡೆಯುತ್ತಿದ್ದ ಸಂದರ್ಭದಲ್ಲಿ,ಜೆಸಿಬಿ ಉಪಕರಣದಿಂದ ಜಕ್ಕಲಮಡುಗು ನೀರು ಪೂರೈಸುವ ಪೈಪ್ ಹಾನಿಯಾಗಿದೆ ಎಂದು ತಿಳಿದು ಬಂದಿದ್ದು.ಈ ಪೈಪ್ ಸಿ.ಎಸ್.ಐ ಆಸ್ಪತ್ರೆಯ ಬಳಿ ಇರುವ ಓವರ್‌ಹೆಡ್ ಟ್ಯಾಂಕ್‌ಗೆ ನೀರು ಸಾಗಿಸುತ್ತಿತ್ತು. ಪೈಪಿನ ತಿರುವುಗಳು ಮತ್ತು ಸ್ಥಳದ ಸ್ಥಿತಿಯನ್ನು ಗೊತ್ತಿಲ್ಲದೆ ಕಾಮಗಾರಿ ನಡೆಯುತ್ತಿದ್ದ ಕಾರಣ ಈ ಅವಾಂತರ ಸಂಭವಿಸಿದೆ ಎನ್ನಲಾಗಿದೆ. ಹಾನಿ ನಂತರ, ತಿಪ್ಪೇನಹಳ್ಳಿಯ ವಾಟರ್ ಪ್ಲಾಂಟ್‌ನ ಮೋಟರ್ ನಿಲ್ಲಿಸಿದರೂ ಸುಮಾರು ಎರಡು ಗಂಟೆಗಳ ಕಾಲ ಸಾವಿರಾರು ಗ್ಯಾಲನ್ ನೀರು ನಿರಂತರವಾಗಿ ಹರಿದು ಬೃಹತ್ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ. ಮಾಹಿತಿ ಪಡೆದ ನಗರಸಭೆ ಅಧ್ಯಕ್ಷ ಎ.ಗಜೇಂದ್ರ ತಕ್ಷಣ ಸ್ಥಳಕ್ಕೆ ಆಗಮಿಸಿ,ನೀರನ್ನು ನಿಲ್ಲಿಸುವಂತೆ ಸೂಚಿಸಿದರು. ಜೆಸಿಬಿ ಚಾಲಕನಿಗೆ ಪೈಪಿನ ತಿರುವುಗಳು



ಗೊತ್ತಿಲ್ಲದೆ ಈ ಘಟನೆ ನಡೆದಿದೆ ಎನ್ನಲಾಗಿದ್ದು ನೀರು ನಿಂತ ಕೂಡಲೆ ಕೆಲಸವನ್ನುಸರಿಪಡಿಸುತ್ತೇವೆ,ಎಂದು ಅವರು ತಿಳಿಸಿದ್ದಾರೆ.

ಸಾರ್ವಜನಿಕರು ಕಾಮಗಾರಿ ವೇಳೆ ಜಕ್ಕಲಮಡುಗು ನೀರಿನ ಪೈಪ್ ಡ್ಯಾಮೇಜ್ ಆಗಿ, ಚರಂಡಿ ನೀರು ಕುಡಿಯುವ ನೀರಿಗೆ ಸೇರುತ್ತಿದೆ ಎಂಬ ಆರೋಪ ಮಾಡಿದ್ದರು.ಇದಕ್ಕೆ ಪ್ರತಿಯಾಗಿ ಅಧ್ಯಕ್ಷರು,ಹೀಗಾದರೆ ಕೂಡಲೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

# ಕೆಂಗೇರಿ ಕಲಾ ಕೇಂದ್ರದ ಎರಡನೇ ವರ್ಷದ ವಾರ್ಷಿಕೋತ್ಸವ; ಕೆಂಪೇಗೌಡರ ಸೊಸೆ ಸಿರಿದೇವಿ ನಾಟಕ ಪ್ರದರ್ಶನ

**ಬೆಂಗಳೂರು:** ಕೆಂಗೇರಿ ಕಲಾ ಕೇಂದ್ರದ ಎರಡನೇ ವರ್ಷದ ವಾರ್ಷಿಕೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ನಿಮಿತ್ತ ಕೆಂಪೇಗೌಡರ ಸೊಸೆ ಸಿರಿದೇವಿ ಎಂಬ ನಾಟಕ ಪ್ರದರ್ಶನಗೊಂಡಿತ್ತು.

ಐತಿಹಾಸಿಕ ಕೆಂಪೇಗೌಡರ ಜೊತೆ ಸಿರಿದೇವಿ ನಾಟಕವನ್ನು ನ. ಲಿ. ನಾಗರಾಜ್ ರಚಿಸಿದ್ದು, ದಿವಾಕರ್ ಅವರ ಸಾರಥ್ಯದಲ್ಲಿ ನಾಟಕ ಪ್ರದರ್ಶನಗೊಂಡಿತ್ತು.ಹಳ್ಳಿಕಾರ್ ನಾಗರಾಜ್ ನಿರ್ದೇಶನ, ರಂಗಸಜ್ಜಿಕೆಯ ನಾಟಕ ಇದಾಗಿದ್ದು ವಿಜಯಲಕ್ಷ್ಮಿ ಸಹ ನಿರ್ದೇಶನ ನೀಡಿದ್ದಾರೆ, ಹರೀಶ್ ಅವರ ಸಂಗೀತ, ರವಿಕುಮಾರ್ ಅವರ ವಸ್ತ್ರಲಂಕಾರ ನೋಡುಗರ ಮನಸೂರೆಗೊಂಡಿತು,

ಗಾಯಕ,ಪತ್ರಕರ್ತ ವಿರೇಶ್ ಶಿವಮೊಗ್ಗ ಅವರು ಕೆಂಪೇ ಗೌಡರ ಕುರಿತು ಹಾಡಿದ ಹಾಡು ಪ್ರೇಕ್ಷಕರ ಮನ ಸೆಳೆಯಿತು. ಶಿಕ್ಷಕಿ ಆಶಾ ಸುರೇಶ್ ನಿರೂಪಣೆಯನ್ನು ಅದ್ಭುತವಾಗಿ ನೆರವೇರಿಸಿಕೊಟ್ಟರು. ಇದಕ್ಕೂ ಮುನ್ನ ಮಕ್ಕಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರಿಗೂ ಮುದ ನೀಡಿತು

ವಿಶೇಷ ಅತಿಥಿಗಳಾಗಿ ಯಶವಂತಪುರ ಕ್ಷೇತ್ರದ ಶಾಸಕ ಎಸ್ ಟಿ ಸೋಮಶೇಖರ್ ಹಾಗೂ ಅಮ್ಮಜಿ ಸೇವಾಶ್ರಮದ, ಪ್ರಮೋದ್ ಗುರೂಜಿ, ನಮ್ಮ ಕನ್ನಡಿಗರ ಸಂಸ್ಥಾಪಕ ರಾಜ್ಯಾಧ್ಯಕ್ಷ ಎಸ್. ವಿಜಯಕುಮಾರ್,ನಿವೃತ್ತ ಸೈನಿಕ ಕುಮಾರ ಸ್ವಾಮಿ, ಕೆಂಗೇರಿ ವೃತ ನಿರೀಕ್ಷಕ ಸಂಜೀವ್ ಗೌಡ, ಸ್ವಾಭಿಮಾನಿ ಮಹಿಳಾ ಟ್ರಸ್ಟ್ ಸಂಸ್ಥಾಪಕಿ ಡಾ. ಅನುಪಮಾ ಪಂಚಾಕ್ಷರಿ, ಯಶವಂತಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಅನಿಲ್ ಚಳಗೇರಿ, ಕೆಂಗೇರಿ ಬಿಬಿಎಂಪಿ ಸದಸ್ಯ ಸತ್ಯನಾರಾಯಣ, ಬಿಜೆಪಿ ಮುಖಂಡ ದೀಪಕ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ಸುಬೇದಾರ್ ಮೇಜರ್ ಜಿಕೆ ಕುಮಾರ್ ಸ್ವಾಮಿ, ಹಿರಿಯ ನಾಗರಿಕ ವೇದಿಕೆಯ ಅಧ್ಯಕ್ಷ ಬಸವರಾಜ್, ಹಿರಿಯ ವೈದ್ಯಾಧಿಕಾರಿ ರೇಷ್ಮಾ ಮುಂತಾದವರು ಭಾಗವಹಿಸಲಿದ್ದರು.





ಮಂಡ್ಯದಲ್ಲಿ ಇದೇ 20 ರಿಂದ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಹ್ವಾನ ಪತ್ರಿಕೆಯನ್ನು ಡಿಸಿಎಂ ಡಿ ಕೆ ಶಿವಕುಮಾರ್ ಅವರಿಗೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಷಿ ಅವರು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಗುರುವಾರ ನೀಡಿದರು. ಶಾಸಕರಾದ ನರೇಂದ್ರಸ್ವಾಮಿ, ಉದಯ್ ಕದಲೂರು, ರವಿ ಗಣಿಗ, ರಮೇಶ್ ಬಂಡಿಸಿದ್ದೇಗೌಡ, ಎಂಎಲ್ಸಿ ಮಧು ಮಾದೇಗೌಡ, ಜಿಲ್ಲಾಧಿಕಾರಿ ಕುಮಾರ್ ಉಪಸ್ಥಿತರಿದ್ದರು.

# ಜ್ಞಾನ ವಿಕಾಸ ಕೇಂದ್ರದ ಮಾಸಿಕ ಸಭೆ

**ಚೇಳೂರು,** ಚೇಳೂರಿನ ಶ್ರೀ ಕ್ಷೇತ್ರ ಧರ್ಮಸ್ಥಳದ ಗ್ರಾಮೀಣಾಭಿವೃದ್ಧಿ ಸಂಘದಿಂದ ಕಾವೇರಿ ಜ್ಞಾನವಿಕಾಸ ಕೇಂದ್ರದಲ್ಲಿ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಕೇಂದ್ರದ ವಾರ್ಷಿಕೋತ್ಸವವನ್ನು ಆಯೋಜಿಸಿಸಲಾಗಿತ್ತು.

ಕೇಂಧ್ರದ ಅಧ್ಯಕ್ಷೆ ಹಾಗೂ ಮಹಿಳಾ ಮಂಡಳಿ ಅಧ್ಯಕ್ಷೆ ಫಾತಿಮಾ, ವಲಯದ ಮೇಲ್ವಿಚಾರಕಿ ಪ್ರಭಾವತಿ ಹಾಗೂ ಸದಸ್ಯರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸದ್ಯಸರು ತಮ್ಮ ತಮ್ಮ ಸಂಘದಿಂದ ಪ್ರಗತಿ ನಿಧಿಯನ್ನು ಪಡೆದು ಅಭಿವೃದ್ಧಿ ಆಗಿರುವ ಬಗ್ಗೆ ಮತ್ತು ಜ್ಞಾನ ವಿಕಾಸ ಕೇಂದ್ರದ ಮಾಸಿಕ ಸಭೆಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಿಂದ ಸಿಗುವ ಮಾಹಿತಿಯನ್ನು ಅರಿತಿರುವುದರ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಸದಸ್ಯರಿಗೆ ವಿವಿಧ ರೀತಿ ಚಟುವಟಿಕೆಗಳನ್ನು ಏರ್ಪಡಿಸಿದ್ದು, ಇದರಲ್ಲಿ ಭಾಗವಹಿಸಿದ್ದು ಎಲ್ಲಾ ಸದಸ್ಯರಿಗೆ ಬಹುಮಾನಗಳನ್ನು ವಿತರಿಸಲಾಯಿತು.




ಸದಸ್ಯರು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮನರಂಜನೆ ನೀಡಿದರು.

# ಅಕ್ರಮ ಮರಳು ಸಾಗಾಟ, ಟಿಪ್ಪರ್ ಮತ್ತು ಜೆಸಿಬಿ ವಶ

**ಚಿಕ್ಕಬಳ್ಳಾಪುರ:** ಮಂಚೇನಹಳ್ಳಿಯ ಪುರ ಗ್ರಾಮಪಂಚಾಯಿತಿ ಬಿಸಲಹಳ್ಳಿ ಗ್ರಾಮದಿಂದ ಚನ್ನಬೈರೇನಹಳ್ಳಿ ಹಾಗೂ ಅಲಕಾಪುರ ಕಡೆಗೆ ಹೋಗುವ ಮಾರ್ಗದಲ್ಲಿ ಉತ್ತರ ಪಿನಾಕಿನಿ ನದಿ ಇದ್ದು, ನದಿಗೆ ಹೋಗುವುದಕ್ಕೆ ಪುಷ್ಪ ಚಿತ್ರದಂತೆ ಇಲ್ಲಿ ಜಮೀನು ಗಳ ಮಧ್ಯೆ ರಸ್ತೆ ಮಾಡಿಕೊಂಡು ರಾಜಾರೋಷವಾಗಿ ಟಿಪ್ಪರ್, ಜೆಸಿಬಿ, ಟ್ರ್ಯಾಕ್ಟರ್ ಮೂಲಕ ನದಿಯ ಮರಳನ್ನು ಅಕ್ರಮವಾಗಿ ಸಾಗಿಸುತ್ತಿದ್ದರು ಮಂಚೇನಹಳ್ಳಿ ಪೊಲೀಸರು ಕಣ್ಮುಚ್ಚಿ ಕುಳಿತಿದ್ದಾರೆ.

ಕಣ್ಣು ತಪಿಸಲು ಮರಳು ಲೋಡ್ ಆದ ಟಿಪ್ಪರ್ ಮೇಲೆ ಎಂ ಸ್ಯಾಂಡ್ ಹಾಕಿ ಬೆಂಗಳೂರಿಗೆ ಸಾಗಾಟ ಮಾಡುತ್ತಿದ್ದ ಮರಳು ಮಾಫಿಯಾ ಮಾಹಿತಿ ಕಲೆಹಾಕಿದ ಸಿಸಿಬಿ ಸೈಬರ್ ಕ್ರೈಂ ಪೊಲೀಸರು ಎರಡು ದಿನಗಳ ಕಾರ್ಯಾಚರಣೆ ನಡೆಸಿ ಕೊನೆಗೂ ಮರಳು ಮಾಫಿಯಾ ನಡೆಸುತ್ತಿದ್ದ ತಿಮ್ಮರೆಡ್ಡಿ ಮತ್ತು ಚಾಲಕ ರವಿಕುಮಾರ್ ನನ್ನು ಸ್ಥಳದಲ್ಲೇ 55 ಲಕ್ಷ ರೂಪಾಯಿ ಬೆಲೆ ಬಾಳುವ ಟಿಪ್ಪರ್ ಮತ್ತು ಜೆಸಿಬಿಯನ್ನು ಮರಳು ಸಮೇತ ಮಂಗಳವಾರ ಬೆಳಗಿನ ಜಾವ ವಶಕ್ಕೆ ಪಡೆಯಲಾಗಿದೆ.

ಸ್ಥಳಕ್ಕೆ ಅಧಿಭಜಡಿ ಛಿಡುಟಜ್ಞ, ಇಛಿಂಟಿಂಟುಛಿ & ಓಚಿಡಿಛಿಂಣುಛಿ ರಜಿಜಿಜಟಿಛಿಜ್ಞ.ಚಿಕ್ಕಬಳ್ಳಾಪುರ ಡಿ ವೈ ಎಸ್ ಪಿ ರವಿಕುಮಾರ್, ಪಿಐ ಸೂರ್ಯಪ್ರಕಾಶ, ಪಿಎ□□□ ಶರತ್ ಕುಮಾರ್, ಎ ಎಸ್ ಐ ಸುಬ್ರಮಣಿ, ಮುಖ್ಯಪೇದೆ ಕೃಷ್ಣಾ, ಪೇದೆಗಳಾದ ಜಯಣ್ಣ, ಮತ್ತು ವಿನಾಯಕ ಇವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.



ಯಾವುದೇ ಕಾನೂನಿಗೆ ಅಂಜದೆ ಇಷ್ಟೆಲ್ಲಾ ಮರುಳು ಮಾಫಿಯಾ ದಂಧೆ ನಡಿಯುತ್ತಿದ್ದರು ಇಲ್ಲಿನ ಪೊಲೀಸರು ಕಣ್ಮುಚ್ಚಿ ಕುಳಿತಿದ್ದಾರಾ ಅಥವಾ ಅವರಿಗೂ ಚಳಿಯಲ್ಲಿ ಕೈ ಬಿಸಿ ಯಾಗುತ್ತಿದೆಯೋ ಗೋತ್ತಿಲ್ಲವಾಗಿದೆ.ಇನ್ನು ಆ ಭಾಗದ ಗ್ರಾಮಸ್ಥರು ಹೇಳುವುದು ನೋಡಿದರೆ ಬೇರೆ ರೀತಿ ಇದೇ ಸತ್ಯ ಸತ್ಯತೆಗಳು ತನಿಖೆಯಿಂದಲೇ ಹೊರಬರಬೇಕಾದರೆ. ವಶಕ್ಕೆ ಪಡೆದ ಸ್ಥಳದಲ್ಲಿ ಮಾಲೀಕ ತಿಮ್ಮಾರೆಡ್ಡಿ ಮಂಚೇನಹಳ್ಳಿ ಪೊಲೀಸ್ ಠಾಣೆಯ ಜಿಪ್ ಡ್ರೈವರ್ ಮತ್ತು ಎ ಎಸ್ ಐ ಗೆ ವಾಟ್ಸಪ್ ಕರೆ ಮಾಡಿರುತ್ತಾನೆ ಎಂಬುದು ತಿಳಿದುಬಂದಿದೆ.

## ಸುದ್ದಿ ಸಂಜೆ

# ಶಸ್ತ್ರ ಚಿಕಿತ್ಸೆಗೆ ಒಳಗಾದ ದರ್ಶನ್

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿಯಾಗಿರುವ ನಟ ದರ್ಶನ್, ಬುಧವಾರ ಃಉಖ ಗ್ಲೆನೆಗಲ್ಸ್ ಗ್ಲೋಬಲ್ ಆಸ್ಪತ್ರೆಯಲ್ಲಿ ಬೆನ್ನು ನೋವಿನ ಶಸ್ತ್ರ ಚಿಕಿತ್ಸೆಗೆ ಒಳಗಾದರು. ದರ್ಶನ್ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ. ಆದರೆ ಯಾವುದೇ ಪ್ರತಿಕ್ರಿಯೆ ನೀಡಲು ಹಿರಿಯ ಅಧಿಕಾರಿಗಳು ನಿರಾಕರಿಸಿದ್ದಾರೆ. ಕಾನೂನಿನ ಸಮಸ್ಯೆಯಿಂದಾಗಿ ಯಾವುದೇ ವಿಚಾರವನ್ನು ಬಹಿರಂಗಗೊಳಿಸದಂತೆ ಕುಟುಂಬದವರು ಆಸ್ಪತ್ರೆಯವರಿಗೆ ಹೇಳಿರುವುದಾಗಿ ತಿಳಿದುಬಂದಿದೆ.'ರ್ಶನ್ ಅವರ ಶಸ್ತ್ರಚಿಕಿತ್ಸೆ ಗೌಪ್ಯವಾಗಿರಬೇಕು. ಅವರ ಚಿಕಿತ್ಸೆಯಲ್ಲಿ ನೇರವಾಗಿ ತೊಡಗಿಸಿಕೊಂಡಿರುವ ವೈದ್ಯಕೀಯ ಸಿಬ್ಬಂದಿಗೆ ಮಾತ್ರ ಕಾರ್ಯವಿಧಾನದ ಬಗ್ಗೆ ತಿಳಿದಿರಬೇಕು, ಬೇರೆ ಯಾರಿಗೂ ತಿಳಿಯಬಾರದು ಎಂದು ಅವರ ಕುಟುಂಬದ ಒತ್ತಾಯವಿದೆ ಎಂದು ತಿಳಿದುಬಂದಿದೆ.

# ಲಾರಿ ಹರಿದು 2 ಸಾವು.!

ಮದ್ದೂರು : ಮಹಿಳೆಯರ ಮೇಲಿನ ಅತ್ಯಾಚಾರ ಗಳಿಗೆ ಅಂತ್ಯ ಹಾಡುವಾ ನಿಟ್ಟಿನಲ್ಲಿ ಕಠಿಣ ಕಾನೂನು ಜಾರಿಗೊಳಿಸಬೇಕು ,ಅತ್ಯಾಚಾರ ಪ್ರಕರಣಗಳ ಶೀಘ್ರವಿಚಾರಣೆನಡೆಸಿ, ಗರಿಷ್ಠಪ್ರಮಾಣದ ಶಿಕ್ಷೆ ಖಾತರಿಪಡಿಸಬೇಕು ಎಂದು ಆಗ್ರಹಿಸಿ ಮಂಗಳೂರಿನಿಂದ ದೆಹಲಿವರೆಗೆ ಪಾದಯಾತ್ರೆ ಹಮ್ಮಿಕ್ಕೊಂಡು ಗುಜರಾತ್ ನ ಸೂರತ್ ಬಳಿ ಪಾದಯಾತ್ರೆ ಸಾಗುವಾ ವೇಳೆ ಅಪಘಾತ ಉಂಟಾಗಿ ಈ ಅಪಘಾತದಲ್ಲಿ ಕೆ ಆರ್ ಎಸ್ ಪಕ್ಷದ ರಾಜ್ಯ ಉಪಾಧ್ಯಕ್ಷ ಎಸ್ ಎಚ್ ಲಿಂಗೇಗೌಡ ಹಾಗೂ ಮೂಸಾ ಷರೀಫ್ ಸಾವನ್ನಪ್ಪಿದ್ದಾರೆ. ಮಂಗಳೂರಿನಿಂದ ದೆಹಲಿ ತಲುಪಿ ರಾಷ್ಟಪತಿಗಳು ಹಾಗು ಪ್ರಧಾನ ಮಂತ್ರಿಯವರಿಗೆ ನೇರವಾಗಿ ಮನವಿ ಸಲ್ಲಿಸಿ ಮಹಿಳೆಯರ ಮೇಲಿನ ಅತ್ಯಾಚಾರ ತಡೆಯಲು ಕಠಿಣ ಕಾನೂನು ರೂಪಿಸಲು ಮನವಿ ಮಾಡುವುದು ತನ್ಮೂಲಕ ಮಹಿಳೆಯರ ಮೇಲಿನ ಅತ್ಯಾಚಾರಕ್ಕೆ ನಾಂದಿಹಾಡಬೇಕು ಎಂಬುವುದು ಈ ತಂಡದ ಉದ್ದೇಶವಾಗಿತ್ತು ಆಕ್ಟೊಬರ್ ಹದಿನೇಳರಂದು ಮಂಗಳೂರಿನಲ್ಲಿ ಪಾದಯಾತ್ರೆ ಆರಂಭಿಸಿಹ ಈ ತಂಡ ನಿನ್ನೆ ಐವತ್ತೈದನೆ ದಿನ ಗುಜರಾತಿನ ಸೂರತ್ ಹಾಗು ಆಹಮದಬಾದಿನ ನಡುವೆ ಪಾದಯಾತ್ರೆಸಾಗಿತ್ತು.ಮೂಲತಃ ಕೆ ಆರ್ ಎಸ್ ಪಕ್ಷದ ಕಾರ್ಯಕರ್ತರಾದ ಮಂಗಳೂರಿನ ಪ್ರವೀಣ್ ನೇತೃತ್ವದಲ್ಲಿ ಮಂಗಳೂರಿನ ಮೂಸ ಷರಿಪ್ , ನೌಪುಲ್ ಅಬ್ಬಾಸ್, ಬಾಲಕೃಷ್ಣ, ಶುಕ್ರ ಆಹಮದ್, ಹಮ್ಮಾ ಅವರು ಪಾದಯಾತ್ರೆ ರೂಪಿಸಿದ್ದರು ಎಸ್ ಎಚ್ ಲಿಂಗೇಗೌಡರು ಇವರೊಟ್ಟಿಗೆ ಸೇರಿ ಪಾದಯಾತ್ರೆ ಮಾಡುವಾ ಸಂದರ್ಭದಲ್ಲಿ ವಾಹನ ಪಾದಯಾತ್ರಿಗಳ ಮೇಲೆ ಹರಿದ ಪರಿಣಾಮ ಈ ಅವಘಡ ಸಂಭವಿಸಿ ಎಸ್ ಎಚ್ ಲಿಂಗೇಗೌಡ ಮತ್ತು ಮತ್ತೊಬ್ಬ ಪಾದಯಾತ್ರಿ ಮರಣಹೊಂದಿದ್ದಾರೆ

# ಬೆಳೆ ಮಣ್ಣು ಪಾಲು

ಚೇಳೂರು: ಚೇಳೂರು ಸುತ್ತಮುತ್ತಲಿನ ಇತರೆ ಕಡೆಗಳಲ್ಲಿ ಕಳೆದ ದಿನಗಳಿಂದ ನೈಋತ್ಯ ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಹಾಗೂ ಫೆಂಗಲ್ ಚಂಡಮಾರುತದ ಪ್ರಭಾವ ಆಂದ್ರದ ಗಡಿಯಲ್ಲಿನ ಚೇಳೂರು ತಾಲ್ಲೂಕಿನ ರಾಶ್ಚೇರುವು ಗ್ರಾ.ಪಂ. ಯ ಪ್ಯಾಯಲವಾರಪಲ್ಲಿ ಗ್ರಾಮದ ಪ್ರಗತಿಪರ ರೈತ ಪಿ.ಬಿ.ಬೈರೆಡ್ಡಿ ಅರಿಗೇವಾರಗುಟ್ಟ ಗ್ರಾಮದ ಸ.ನಂ. 23/1 ರಲ್ಲಿ 1–25 ಗುಂಟೆ ಜಮೀನಿನಲ್ಲಿ ಬೆಳೆದ ಭತ್ತದ ಬೆಳೆ ಕಟಾವ್ ಸಮಯದಲ್ಲಿ ಬೆಳೆ ಬಿದ್ದು ಹೋಗಿದೆ ಇದರಿಂದ ಬೆಳೆ ಮಣ್ಣು ಪಾಲಾಗಿದ್ದಲ್ಲದೇ ಮೊಳಕೆ ಬಂದು ಬೆಳೆ ನಾಶವಾಗಿದೆ ಇದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರದೇ ಹೋಗುತ್ತಿದ್ದು ಪ್ರಗತಿಪರ ರೈತ ಅಳಲು ತೋಡಿಕೊಂಡಿದ್ದಾರೆ.

ಎರಡು ತಿಂಗಳ ಹಿಂದೆ ತಾಲ್ಲೂಕಿನಾದ್ಯಂತ ರೈತರು ಶೇಂಗಾ ಬೆಳೆ ಕೆಟ್ಟು ಹೋಗಿ ನಷ್ಟವಾಯಿತು ಅಲ್ಪ ಸ್ವಲ್ಪ ಬೆಳೆಯಾದ ಶೇಂಗಾ ಬೆಳೆಗೆ ಬೆಲೆ ಸಿಗದೇ ಇನ್ನೂ ರೈತರ ಮನೆಯಲ್ಲೇ ಇದೆ ಇನ್ನೂ ಕೆಲವರು 43 ಕೆ.ಜಿ ಮೂಟೆಯ ಶೇಂಗಾ ಬೆಳೆ 1200. 1400. 1800. ರೂಗಳಿಗೆ ಮಾರಾಟ ಮಾಡಿ ನಷ್ಟ ಹೋಗಿದ್ದಾರೆ. ಇದರ ಜೊತೆಗೆ ಭತ್ತದ ಬೆಳೆಯೂ ನಷ್ಟವಾಗಿದೆ. ಏನೇ ಆಗಲಿ ಶೇಂಗಾ ಬೆಳೆ ನಷ್ಟದ ಜೊತೆಗೆ ಭತ್ತದ ಬೆಳೆಯೂ ನಷ್ಟವಾಗಿ ನಾಶವಾಗಿ ರೈತನನ್ನ ಸಾಲದ ಕೂಪಕ್ಕೆ ದೂಡುವಂತಾಗಿದೆ. ರೈತನ ಬದುಕು ಹಸನಾಗದೇ ಕನಸಾಗಿಯೇ ಉಳಿಯುತ್ತಿದೆ.

ಜಿಟಿ ಜಿಟಿ ಮಳೆಗೆ ಜಮೀನುಗಳಲ್ಲೇ ಕೊಳೆಯುತ್ತಿರುವ ಭತ್ತದ ಬೆಳೆ ಸೇರಿದಂತೆ ಟೊಮೊಟ ತೊಗರಿ ಇತರೆ ಬೆಳೆಗಳ ಬಗ್ಗೆ ಕೃಷಿ ಮತ್ತು ಕಂದಾಯ ಅಧಿಕಾರಿಗಳು ತನಿಖೆ ಮಾಡಿ ನಷ್ಟ ಪರಿಹಾರ ಕೊಡಿಸಬೇಕಾಗಿದೆ.

# ಪ್ರತಿಭಟನೆಯನ್ನು ಸರ್ಕಾರ ಲಾಠಿಚಾರ್ಜ್ ಮೂಲಕ ಹತ್ತಿಕ್ಕುತ್ತಿದೆ

**ಪಂಚಮಸಾಲಿ ಜಯಮೃತ್ಯುಂಜಯ ಶ್ರೀ ಆರೋಪ**

**ಬೆಂಗಳೂರು:** ಸಿಎಂ ಸಿದ್ದರಾಮಯ್ಯ ಅನುಮತಿ ಇಲ್ಲದೇ ಲಾಠಿ ಚಾರ್ಜ್ ಆಗಿದ್ದು ಹೇಗೆ? ಹಾಗೆ ಆಗಿದ್ದೇ ನಿಜವಾದರೆ ಕೂಡಲೇ ಆ ಅಧಿಕಾರಿಯನ್ನು ಅಮಾನತು ಮಾಡಿ ಎಂದು ಜಯಮೃತ್ಯುಂಜಯ ಶ್ರೀ ಆಗ್ರಹಿಸಿದ್ದಾರೆ. ಜತೆಗೆ, ನಿಮ್ಮ ಊರಲ್ಲಿ ರಸ್ತೆ ತಡೆದು ಹೋರಾಟ ಮಾಡಿ ಎಂದು ಎಲ್ಲಾ ಲಿಂಗಾಯತ ಸಮುದಾಯದವರಿಗೆ ಕರೆ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗಾವಿಯ ಸುವರ್ಣ ವಿಧಾನಸೌಧದ ಎದುರು ಸೋಮವಾರ ನಡೆದ ಪಂಚಮಸಾಲಿ 2ಎ ಮೀಸಲಾತಿ ಪ್ರತಿಭಟನೆ ವೇಳೆ ಲಾಠಿ ಚಾರ್ಜ್ ನಡೆಸಿದ್ದಕ್ಕೆ ಮತ್ತಷ್ಟು ಕೆರಳಿರುವ ಬಸವ ಜಯಮೃತ್ಯುಂಜಯ ಸ್ವಾಮೀಜಿ, ನಮ್ಮ ಜನ ಇನ್ನಷ್ಟು ಪುಟಿದೇಳುತ್ತಾರೆ ಎಂದಿದ್ದಾರೆ. ಅಲ್ಲದೆ, ಇಷ್ಟು ದಿನ ಶಾಂತಿಯುತ ಹೋರಾಟ ಆಗಿತ್ತು, ಇನ್ನು ಮೇಲೆ ಹಳ್ಳಿ ಹಳ್ಳಿಯಲ್ಲೂ ಕ್ರಾಂತಿಯುತ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

12 ಜಿಲ್ಲೆಗಳಲ್ಲಿ ನಡೆದ ನಮ್ಮ ಪ್ರತಿಭಟನೆಯಲ್ಲಿ ಯಾವುದೇ ಒತ್ತಡ ಅಥವಾ ಕಿರುಕುಳ ಇರಲಿಲ್ಲ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಹೀಗಾಗಿ ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಟ್ರ್ಯಾಕ್ಟರ್ ರ್ಯಾಲಿ ನಡೆಸಿ ಸರ್ಕಾರದ ಮೇಲೆ ಒತ್ತಡ ಹೇರಲು ಪ್ರಯತ್ನಿಸಿದ್ದೆವು. ಆದರೆ ನ್ಯಾಯಾಲಯದ ಷರತ್ತುಗಳ ಪ್ರಕಾರ ನಾವು ನಿಗದಿತ ಸ್ಥಳದಲ್ಲಿ ಶಾಂತಿಯುತ ಪ್ರತಿಭಟನೆ ನಡೆಸಿ ಸಿಎಂ ಅವರನ್ನು ಭೇಟಿಯಾಗಲು ಬಯಸಿದ್ದೆವು. ಆದರೆ, ನಮ್ಮ ಬೇಡಿಕೆಗಳನ್ನು ಆಲಿಸಲು ಸರ್ಕಾರ ಮೂವರು ಸಚಿವರನ್ನು ಕಳುಹಿಸಿದೆ. ಸಿಎಂ ಪ್ರತಿಭಟನಾ ಸ್ಥಳಕ್ಕೆ ಬರುವುದಿಲ್ಲ ಎಂದು ಹೇಳಿದ ಎಡಿಜಿಪಿ, ಸುವರ್ಣ ವಿಧಾನ ಸೌಧಕ್ಕೆ ಸಿಎಂ ಇರುವ ಜಾಗಕ್ಕೆ ತೆರಳಲು ನಿರ್ಧರಿಸಿದ್ದೇವೆ. ನಾವು ಮುಂದೆ ಹೋಗಲುಪ ಪ್ರಯತ್ನಿಸಿದಾಗ, ಸೇಡು ತೀರಿಸಿಕೊಳ್ಳಲು ಪೊಲೀಸರು ನಮ್ಮ ಮೇಲೆ ಲಾಠಿ ಪ್ರಹಾರ ಆರಂಭಿಸಿದರು. ಅವರು ಚಳವಳಿಗಾರರು ಮತ್ತು ವಕೀಲರ ಮೇಲೆ ಹಲ್ಲೆ ನಡೆಸಿದರು ಎಂದು ಅವರು ಹೇಳಿದರು. ಹಿಂದಿನ ಯಾವ ಮುಖ್ಯಮಂತ್ರಿಗಳೂ ಚಳವಳಿಗಾರರ ಮೇಲೆ ಇಂತಹ ದಾಳಿ ಮಾಡಿಲ್ಲ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಲಿಂಗಾಯತರನ್ನು ಗುರಿಯಾಗಿಸುವ ಅಗತ್ಯವಿರಲಿಲ್ಲ ಎಂದು ಬೇಸರ ವ್ಯಕ್ತ ಪಡಿಸಿದರು.



ಈ ಸರ್ಕಾರ ನಮ್ಮ ಸಮುದಾಯದ ಶಾಸಕರನ್ನು ಗುರಿಯಾಗಿಸಿಕೊಂಡು ನಮಗೆ ಮೀಸಲಾತಿ ನೀಡಲು ನಿರಾಕರಿಸಿದರೆ ನಾವು ಬೇರೆ ದಾರಿ ಹಿಡಿಯಬೇಕಾಗುತ್ತದೆ. ಸಮುದಾಯದ ಮೇಲೆ ದಾಳಿ ಮಾಡುವ ಮೂಲಕ ಈ ಸರ್ಕಾರ ಕೆಟ್ಟ ಹೆಸರು ಗಳಿಸುತ್ತಿದೆ. ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡುವ ಬದಲು ಲಾಠಿ ಚಾರ್ಜ್ ಮಾಡಿದ ಎಡಿಜಿಪಿ ಹಾಗೂ ಇತರ ಪೊಲೀಸ್ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸುವಂತೆ ಸಮುದಾಯದ ಮುಖಂಡರಿಗೆ ಮನವಿ ಮಾಡಿದರು. ಈ ತಿಂಗಳು ಪ್ರತಿ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ದಾಳಿಯನ್ನು ಖಂಡಿಸಿ ಪ್ರತಿಭಟನೆಗಳನ್ನು ಆಯೋಜಿಸುವಂತೆ ಶ್ರೀಗಳು ಸಮುದಾಯದ ಮುಖಂಡರಿಗೆ ಕರೆ ನೀಡಿದರು.

ಹಿರೇಬಾಗೇವಾಡಿ ಮತ್ತು ಹತ್ತರಗಿ ಟೋಲ್ ಪ್ಲಾಜಾದಲ್ಲಿ ಧರಣಿ ನಡೆಸುತ್ತೇವೆ. ನಮ್ಮ ಪ್ರತಿಭಟನೆಯು ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ ಮತ್ತು ನ್ಯಾಯಸಮ್ಮತವಾದ ರೀತಿಯಲ್ಲಿ ಮುಂದುವರಿಯುತ್ತದೆ. ಇನ್ನು ಮುಂದೆ ಹೋರಾಟ ತೀವ್ರಗೊಳಿಸಲಾಗುವುದು. ಲಿಂಗಾಯತ ಚಳವಳಿಯನ್ನು ಹತ್ತಿಕ್ಕಲು ಈ ಸರ್ಕಾರ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಅವರು ಹೇಳಿದರು.

ಸಿಎಂ ಸಿದ್ದರಾಮಯ್ಯ ಅನುಮತಿ ಇಲ್ಲದೇ ಲಾಠಿ ಚಾರ್ಜ್ ಆಗಿದ್ದು ಹೇಗೆ? ಹಾಗೆ ಆಗಿದ್ದೇ ನಿಜವಾದರೆ ಕೂಡಲೇ ಆ ಅಧಿಕಾರಿಯನ್ನು ಅಮಾನತು ಮಾಡಿ ಎಂದು ಜಯಮೃತ್ಯುಂಜಯ ಶ್ರೀ ಆಗ್ರಹಿಸಿದ್ದಾರೆ. ಜತೆಗೆ, ನಿಮ್ಮ ಊರಲ್ಲಿ ರಸ್ತೆ ತಡದು ಹೋರಾಟ ಮಾಡಿ ಎಂದು ಎಲ್ಲಾ ಲಿಂಗಾಯತ ಸಮುದಾಯದವರಿಗೆ ಕರೆ ನೀಡಿದ್ದಾರೆ.

# ಕೊಳ್ಳೇಗಾಲಕ್ಕೆ ಮುಖ್ಯಮಂತ್ರಿ ಭೇಟಿ: ಎಸ್.ಜಯಣ್ಣ ಅವರಿಗೆ ಗೌರವ ನಮನ ಸಲ್ಲಿಕೆ




**ಚಾಮರಾಜನಗರ, :** ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಕೊಳ್ಳೇಗಾಲ ಪಟ್ಟಣಕ್ಕೆ ಇಂದು ಭೇಟಿ ನೀಡಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರು ಹಾಗೂ ಮಾಜಿ ಶಾಸಕರಾದ ದಿವಂಗತ ಎಸ್. ಜಯಣ್ಣ ಅವರ ಪಾರ್ಥಿವ ಶರೀರದ ದರ್ಶನ ಪಡೆದು ಅಂತಿಮ ಗೌರವ ಸಲ್ಲಿಸಿದರು.

ಕೊಳ್ಳೇಗಾಲ ಪಟ್ಟಣದ ಎಂ.ಜಿ.ಎಸ್.ವಿ ಕಾಲೇಜು ಮೈದಾನದ ಹೆಲಿಪ್ಯಾಡ್‌ಗೆ ಬಂದಿಳಿದ ಮುಖ್ಯಮಂತ್ರಿಯವರು ಅಲ್ಲಿಂದ ಕಾರಿನಲ್ಲಿ ಪಟ್ಟಣದ ಮಹದೇಶ್ವರ ಕಾಲೇಜು ಬಡಾವಣೆಯಲ್ಲಿರುವ ಎಸ್. ಜಯಣ್ಣ ಅವರ ಅನುಗ್ರಹ ನಿಲಯಕ್ಕೆ ತೆರಳಿ ಅಂತಿಮ ದರ್ಶನ ಪಡೆದರು.

ಎಸ್. ಜಯಣ್ಣ ಅವರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವಿರಿಸಿ ಅಂತಿಮ ಗೌರವ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಸಕಲ ಸರ್ಕಾರಿ ಗೌರವ ಸಲ್ಲಿಸಲಾಯಿತು.

ಮುಖ್ಯಮಂತ್ರಿಯವರೊಂದಿಗೆ ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್, ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ, ಲೋಕಸಭಾ ಸದಸ್ಯರಾದ ಸುನಿಲ್ ಬೋಸ್, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಸಿ. ಪುಟ್ಟರಂಗಶೆಟ್ಟಿ, ಎಚ್.ಎಂ. ಗಣೇಶ್ ಪ್ರಸಾದ್, ಡಾ. ಯತೀಂದ್ರ ಸಿದ್ದರಾಮಯ್ಯ, ಎಂ.ಆರ್. ಮಂಜುನಾಥ್, ದರ್ಶನ್ ಧ್ರುವನಾರಾಯಣ, ಡಾ. ಡಿ. ತಿಮ್ಮಯ್ಯ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಡಾ. ಪುಷ್ಪಾ ಅಮರ್‌ನಾಥ್, ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಚುಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ಇನ್ನಿತರ ಗಣ್ಯರು ಎಸ್. ಜಯಣ್ಣ ಅವರಿಗೆ ಅಂತಿಮ ಗೌರವ ನಮನ ಸಲ್ಲಿಸಿದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ, ಉಪವಿಭಾಗಾಧಿಕಾರಿ ಬಿ.ಆರ್. ಮಹೇಶ್, ತಹಶೀಲ್ದಾರ್ ಬಸವರಾಜು, ಇನ್ನಿತರ ಗಣ್ಯರು ಈ ಸಂದರ್ಭದಲ್ಲಿ ಇದ್ದರು.

ಇದೇ ವೇಳೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಜಯಣ್ಣ ಅವರು ವಿದ್ಯಾರ್ಥಿ ದೆಸೆಯಿಂದಲೂ ನನ್ನ ಜತೆಗೆ ಆತ್ಮೀಯವಾದ ಸಂಬಂಧ ಹೊಂದಿದ್ದರು. ಶಾಸಕರಾದ ಮೇಲೆ ಮತ್ತಷ್ಟು ಹತ್ತಿರವಾದರು. ನಾನು ಯಾವುದೇ ತೀರ್ಮಾನ ತೆಗೆದುಕೊಂಡರೂ ಅದಕ್ಕೆ ಬದ್ಧರಾಗಿರುತ್ತಿದ್ದರು. ರಾಜಕೀಯದಲ್ಲಿ ಬಹಳ ಅಪರೂಪದ ವ್ಯಕ್ತಿ ಹಾಗೂ ಸೌಮ್ಯ ಸ್ವಭಾವದವರಾಗಿದ್ದರು ಎಂದರು.

ಜಯಣ್ಣ ಅವರು ಸಿದ್ಧಾಂತದ ಮೇಲೆ ನಂಬಿಕೆ ಇಟ್ಟವರಾಗಿದ್ದರು. ಯಾವುದೇ ಆಸೆ, ಆಮಿಷಗಳಿಗೆ ಒಳಗಾಗುತ್ತಿರಲಿಲ್ಲ. ಅವರು ನಂಬಿದ್ದ ಸಿದ್ಧಾಂತಗಳಲ್ಲಿ ಬದಲಾವಣೆ ಮಾಡುತ್ತಿರಲಿಲ್ಲ. ಅಜಾತಶತ್ರುವಾಗಿದ್ದ ಜಯಣ್ಣನವರು ಎಲ್ಲರನ್ನು ಪ್ರೀತಿಸುತ್ತಿದ್ದರು. ಎಂದೂ ದ್ವೇಷ ಮಾಡುತ್ತಿರಲಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದರು.

ಸಮಾಜ ಕಲ್ಯಾಣ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ ಅವರು ಮಾತನಾಡಿ ಜಯಣ್ಣ ಅವರು ಅಧಿಕಾರ ಇರಲಿ, ಇಲ್ಲದಿರಲಿ ಒಂದೇ ತರಹ ಇರುತ್ತಿದ್ದರು. ಶಾಂತಚಿತ್ತ ಸ್ವಭಾವ ಅವರದ್ದಾಗಿತ್ತು. ಅಪಾರ ಜನರ ಪ್ರೀತಿ ಗಳಿಸಿದ್ದರು. ಅವರ ಅಗಲಿಕೆಯಿಂದ ವೈಯಕ್ತಿಕವಾಗಿ ಅಪ್ಪನನ್ನು ಕಳೆದುಕೊಂಡಂತಾಗಿದೆ ಎಂದರು.

ಲೋಕಸಭಾ ಸದಸ್ಯರಾದ ಸುನಿಲ್ ಬೋಸ್ ಅವರು ಮಾತನಾಡಿ ಜಯಣ್ಣ ಅವರು ಹಿರಿಯರಾಗಿ ನಮಗೆ ಮಾರ್ಗದರ್ಶನ ಮಾಡುತ್ತಿದ್ದರು. ಮೃದುಭಾಷಿಯಾಗಿದ್ದ ಅವರು ತಾಳ್ಮೆಯ ಗುಣ ಹೊಂದಿದ್ದರು. ಅವರ ಅಗಲಿಕೆ ನಮ್ಮಲ್ಲಿ ಅನಾಥ ಭಾವ ಮೂಡಿಸಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿದರು.

ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ಮಾತನಾಡಿ ಜಯಣ್ಣ ಅವರು ನನ್ನೊಂದಿಗೆ ಬಹಳ ಪ್ರೀತಿ ವಿಶ್ವಾಸದಿಂದಿದ್ದರು. ನನಗೆ ಬೆಂಬಲವಾಗಿ ಇದ್ದವರು. ಅವರ ಅಗಲಿಕೆ ನಮ್ಮೆಲ್ಲರಿಗೂ ನೋವು ಉಂಟುಮಾಡಿದೆ ಎಂದು ಸಂತಾಪ ವ್ಯಕ್ತಪಡಿಸಿದರು.

ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಡಾ. ಪುಷ್ಪಾ ಅಮರ್‌ನಾಥ್ ಅವರು ಮಾತನಾಡಿ ಜಯಣ್ಣ ಅವರು ನೇರ ನಡೆ–ನುಡಿ, ಸಿದ್ಧಾಂತಗಳಿಗೆ ಬದ್ಧರಾಗಿದ್ದರು. ಪ್ರಾಮಾಣಿಕತೆಗೆ ಹೆಸರಾಗಿದ್ದ ಸರಳ ವ್ಯಕ್ತಿತ್ವದವರು. ಅವರನ್ನು ಕಳೆದುಕೊಂಡಿರುವುದು ಸಿದ್ಧಾಂತ ರಾಜಕಾರಣಕ್ಕೆ ತುಂಬಲಾರದ ನಷ್ಟ ಎಂದರು.

ಬುಧವಾರ ಸಂಜೆ ಜಯಣ್ಣ ಅವರ ಹುಟ್ಟೂರಾದ ಮಾಂಬಳ್ಳಿಯಲ್ಲಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿತು.

# ರೈತರ ಸಮಸ್ಯೆಗಳಿಗೆ ಸ್ಪಂದಿಸಿ, ಕಡಲೆ ಪಾರ್ಕ್ ನಿರ್ಮಿಸಿ.



**ಕುಕನೂರು :** ತಾಲೂಕಿನ ರೈತರ ಅನೇಕ ಸಮಸ್ಯೆಗಳು ಈಗಲೂ ಸರ್ಕಾರದ ಕಣ್ಣಿಗೆ ಕಾಣುತ್ತಿಲ್ಲ, ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಕುಕನೂರು ವ್ಯಾಪ್ತಿಯಲ್ಲಿ ಕಡಲೆ ಪಾರ್ಕ್ ಸ್ಥಾಪನೆ ಮಾಡಬೇಕಾಗಿದೆ ಎಂದು ಕ್ರಾಂತಿಕಾರಿ ರೈತ ಸೇನೆಯ ರಾಜ್ಯಾಧ್ಯಕ್ಷ ಎಂ ಎನ್ ಕುಕನೂರು ಹೇಳಿದ್ದಾರೆ.
ಕುಕನೂರು ಪಟ್ಟಣದಲ್ಲಿ ರೈತರ ಹಲವು ಸಮಸ್ಯೆಗಳ ಪಟ್ಟಿಯೊಂದಿಗೆ ಸರ್ಕಾರ ಮತ್ತು ಸ್ಥಳೀಯ ಶಾಸಕರ ಗಮನ ಸೆಳೆಯಲು ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು.

ತಾಲೂಕಿನ ಎರೇ ಭಾಗದಲ್ಲಿ ಹೆಚ್ಚಾಗಿ ಕಡಲೆ ಬೆಳೆಯನ್ನು ಪ್ರಮುಖವಾಗಿ ಬೆಳೆಯುತ್ತಿದ್ದಾರೆ. ಇದನ್ನು ಮನಗಂಡು ಇಲ್ಲಿಯ ಶಾಸಕರು ರೈತರ ಅನುಕೂಲಕ್ಕಾಗಿ ಕಡಲೆ ಪಾರ್ಕ್ನ ನಿರ್ಮಿಸಬೇಕು. ಕುಕನೂರು ಯಲಬುರ್ಗಾ ತಾಲೂಕನ್ನು ಒಳಗೊಂಡ ವಿಧಾನಸಭಾ ಕ್ಷೇತ್ರದಲ್ಲಿ ಶಾಶ್ವತ ನೀರಾವರಿ ಯೋಜನೆ ಜಾರಿಯಾಗಲು ಜನಪ್ರತಿನಿದಿನಗಳು ಶ್ರಮಿಸಬೇಕು, ಕೃಷ್ಣಾ, ತುಂಗಭದ್ರಾ, ಸಿಂಗತಾಲೂರು ನದಿಗಳಿಂದ ತಾಲೂಕಿನಲ್ಲಿ ರೈತರ ಜಮೀನುಗಳಿಗೆ ನೀರು ತರಲು ಸರ್ಕಾರ ಯೋಜನೆ ರೂಪಿಸಬೇಕು ಎಂದು ಎಂ ಎನ್ ಕುಕನೂರು ಹೇಳಿದ್ದಾರೆ.

ರೈತರ ಬೆಳೆ ವಿಮೆ ಸಕಾಲಕ್ಕೆ ಪಾವತಿಯಾಗುತ್ತಿಲ್ಲ, ಬೆಳೆಪರಿಹಾರ, ವಿಮೆ ಪರಿಹಾರ ರೈತರ ಖಾತೆಗೆ ಜಮೆ ಸರಿಯಾಗಿ ಜಮೆ ಆಗುತ್ತಿಲ್ಲ ಸರ್ಕಾರ ಕ್ರಮ ಕೈಕೊಳ್ಳಬೇಕಿದೆ. ತುಂಗಭದ್ರಾ ನದಿ ಮತ್ತು ಇತರ ಕೆರೆಗಳ ಹೂಳು ತೆಗೆಸಬೇಕು. ಕಬ್ಬಿನ ಬೆಂಬಲ ಬೆಲೆ ಅತೀ ಕಡಿಮೆ ಇದೆ. ಇತರ ರಾಜ್ಯಗಳಿಗೆ ಹೋಲಿಸಿದರೆ ಇಲ್ಲಿ ರೈತರ ಬೆಳೆಗಳಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ, ಸರ್ಕಾರ ರೈತರ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಬೇಕು ಎಂದು ಎಂ ಎನ್ ಕುಕನೂರು ಹೇಳಿದರು. ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ರಾಜೇಶ್ ವಾಲ್ಮೀಕಿ, ಕಾರ್ಯದರ್ಶಿ ಮಜೀದ್ ಖಾನ್, ಕ ಕ ಉಪಾಧ್ಯಕ್ಷ ನಿಂಗಪ್ಪ ಬೇಣಕಲ್ ಇದ್ದರು.

# ಮತದಾರರ ಪಟ್ಟಿಯ ಮಿಂಚಿನ ನೊಂದಣಿ ಅಭಿಯಾನವನ್ನು ಯಶಸ್ವಿಗೊಳಿಸಿ: ವಿ. ಶ್ರೀಧರ್



**ಮುಳಬಾಗಿಲು :** ನಗರ ವ್ಯಾಪ್ತಿಯಲ್ಲಿ ಮೂರು ದಿನ ಮತದಾರರ ಪಟ್ಟಿಯ ಮಿಂಚಿನ ನೋಂದಣಿ ಅಭಿಯಾನ: ವಿ.ಶ್ರೀಧರ್ ಮುಳಬಾಗಿಲು ನಗರ ವ್ಯಾಪ್ತಿಯಲ್ಲಿ ಬರುವ ಯುವ ಮತದಾರರು ದಿನಾಂಕ:– 11:12:2024 ರಿಂದ 13:12:2024 ರ ಮೂರು ದಿನ ಅರ್ಹ ಯುವ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತದಾರರ ಪಟ್ಟಿಯಲ್ಲಿ ನೋಂದಣಿ ಅಭಿಯಾನವನ್ನು ಯಶಸ್ವಿಗೊಳಿಸಲು ನಗರಸಭೆಯ ಪೌರಾಯುಕ್ತರಾದ ವಿ.ಶ್ರೀಧರ್ ತಿಳಿಸಿದರು, ಸದರಿ ಮತದಾರರ ಪಟ್ಟಿಯ ನೋಂದಣಿ ಅಭಿಯಾನವು ತಮ್ಮಗೆ ಸಂಬಂಧಿಸಿದ ಮತಗಟ್ಟೆಗಳಲ್ಲಿ ಬಿ.ಎಲ್.ಓ ಗಳ ಸಹಕಾರದೊಂದಿಗೆ ಅಗತ್ಯವಾದ ದಾಖಲೆಗಳೊಂದಿಗೆ ನೋಂದಣಿ ಮಾಡಿಸಬೇಕಾಗಿರುತ್ತದೆ, ಭವ್ಯ ಭಾರತ ಅಡಿಪಾಯ ಯುವ ಮತದಾರಿಂದ ಮಾತ್ರ ಸಾಧ್ಯ.

# ಕಾನೂನು ರೀತ್ಯಾ ಕ್ರಮಜರುಗಿಸಿ ನೊಂದ ಕುಟುಂಬಗಳಿಗೆ ಪರಿಹಾರವನ್ನು ಕಲ್ಪಿಸಬೇಕು



**ಮಾಲೂರು :** ಎಂ.ಕೊತ್ತೂರು ಮುರಾರ್ಜಿ ವಸತಿಶಾಲೆಯ ಮಕ್ಕಳು ಪ್ರವಾಸಕ್ಕೆ ತೆರಳಿ ಶಿಕ್ಷಕರ ಮತ್ತು ಮೇಲ್ವಿಚಾರಕರ ಅಜಾಗರೂಕತೆಯಿಂದ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆಯಾಗಿದ್ದು, ಸಂಬಂಧಿಸಿದವರ ವಿರುದ್ಧ ಕಾನೂನು ರೀತ್ಯಾ ಕ್ರಮಜರುಗಿಸಿ ನೊಂದ ಕುಟುಂಬಗಳಿಗೆ ಪರಿಹಾರವನ್ನು ಕಲ್ಪಿಸಬೇಕು ಎಂದು ಒತ್ತಾಯಿಸಿ ಕದಸಂಸ ತಾಲ್ಲೂಕು ಸಂಚಾಲಕ ಎಸ್.ಎಂ.ವೆಂಕಟೇಶ್ ಒತ್ತಾಯಿಸಿದರು.

ಪಟ್ಟಣದ ಪೋಲಿಸ್ ಠಾಣೆಯ ಮುಂಭಾಗದಲ್ಲಿ ಜಿಲ್ಲಾ ಸಂಘಟನಾ ಸಂಚಾಲಕ ಚವ್ವೇನಹಳ್ಳಿ ವಿಜಿ ನೇತೃತ್ವದಲ್ಲಿ ಜಮಾಯಿಸಿದ ಕಾರ್ಯಕರ್ತರು ಮಾಲೂರು ಪೋಲಿಸ್ ಇನ್ಸ್‌ಪೆಕ್ಟರ್ ಅವರ ಮೂಲಕ ಮನವಿ ಸಲ್ಲಿಸಿದರು.

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕು ಎಂ.ಕೊತ್ತೂರು ಮುರಾರ್ಜಿ ವಸತಿಶಾಲೆಯ ಮಕ್ಕಳು ಪ್ರವಾಸಕ್ಕೆ ಬಂದು ಉತ್ತರಕನ್ನಡ ಜಿಲ್ಲೆಯ, ಮುರಡೇಶ್ವರಕ್ಕೆ ತೆರಳಿದ್ದು, ಮಕ್ಕಳನ್ನು ನೀರಿನಲ್ಲಿ ಆಟವಾಡಲು ಬಿಟ್ಟು ಶಿಕ್ಷಕರು ಮತ್ತು ಮೇಲ್ವಿಚಾರಕರ ಅಜಾಗರೂಕತೆಯಿಂದ 9ನೇ ತರಗತಿ ವಿದ್ಯಾರ್ಥಿನಿ ಶ್ರಾವಂತಿ, ದೀಕ್ಷಾ.ಜೆ, ಲಾವಣ್ಯ, ವಂದನಾ, ನೀರಿನಲ್ಲಿ ಮುಳುಗಿ ಕಾಣೆಯಾಗಿದ್ದು, ಶ್ರಾವಂತಿಯ ಮೃತದೇಹ ಪತ್ತೆಯಾಗಿ ಮುರಡೇಶ್ವರದ ಆರ್‌ಎನ್‌ಎಸ್ ಆಸ್ಪತ್ರೆಯ ಶವಗಾರದಲ್ಲಿದ್ದು, ಇನ್ನೂ 3 ವಿದ್ಯಾರ್ಥಿನಿಯರು ಚಿಕಿತ್ಸೆ ಪಡೆಯುತ್ತಿದ್ದು, ಇನ್ನು ನಾಲ್ಕು ಜನ ವಿದ್ಯಾರ್ಥಿನಿಯರಾದ ಲಾವಣ್ಯ, ವಂದನಾ, ಮತ್ತು ದೀಕ್ಷಾ ಎಂಬುವವರು ಇನ್ನು ನೀರಿನಲ್ಲಿ ಪತ್ತೆಯಾಗಿರುವುದಿಲ್ಲ, ಇವರುಗಳ ಸಾವಿಗೆ ಸಂಬಂಧಪಟ್ಟ ಶಾಲೆಯ ಪ್ರಾಂಶುಪಾಲರು ಹಾಗೂ ಶಿಕ್ಷಕರು ಅವರ ಸಿಬ್ಬಂದಿ ವರ್ಗದ ಆಜಾಗರೂಕತೆ, ನಿರ್ಲಕ್ಷ್ಯ ಧೋರಣೆಯೇ ಕಾರಣವಾಗಿದ್ದು, ಸದರಿ ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗದ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸಿ ನೊಂದ ಕುಟುಂಬಗಳಿಗೆ ರೂ.25,00,000/– (ಇಪ್ಪತ್ತೈದು ಲಕ್ಷ) ರೂಗಳಂತೆ ಪರಿಹಾರ ಹಾಗೂ ಕುಟುಂಬದಲ್ಲಿ ಒಬ್ಬ ಸದಸ್ಯರಿಗೆ ಸರ್ಕಾರಿ ನೌಕರಿಯನ್ನು ನೀಡಬೇಕೆಂದು ಕದಸಂಸ ಸಂಘಟನೆ ಒತ್ತಾಯಿಸಿ ಮಾಲೂರು ಪೋಲಿಸ್ ಠಾಣೆಯ ಮುಖಾಂತರ ಸರಕಾರಕ್ಕೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಖಜಾಂಚಿ ನೀಲಕಂಠ ಅಗ್ರಹಾರ ಶ್ಯಾಮಣ್ಣ, ತಾಲ್ಲೂಕು ಸಂಘಟನಾ ಸಂಚಾಲಕ ಡಿ.ಎನ್.ನಾರಾಯಣಸ್ವಾಮಿ, ಬಂಡಹಟ್ಟಿ ನಾರಾಯಣಸ್ವಾಮಿ, ಯಶವಂತಪುರ ಮುನಿರಾಜು, ಫಿಲ್ಟರ್ ನಾರಾಯಣಸ್ವಾಮಿ, ಎಸ್.ಎಂ.ಮುರಳಿ, ಹಾರೋಹಳ್ಳಿ ಮುನಿರಾಜು, ಅಂಗಶೆಟ್ಟಹಳ್ಳಿ ನಾರಾಯಣಸ್ವಾಮಿ ಸೇರಿದಂತೆ ಕಾರ್ಯಕರ್ತರು ಹಾಜರಿದ್ದರು.

# ಅಂಗಾಂಗ ದಾನ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ



**ಮುಳಬಾಗಿಲು. :** ಗ್ರಾಮ ಭಾರತಿ ಟ್ರಸ್ಟ್ ಮತ್ತು ಮುಳಬಾಗಿಲು ಫುಡ್ ಬ್ಯಾಂಕ್ ಸಂಸ್ಥಾಪಕರಾದ ಮಾರಾಂಡಹಳ್ಳಿ ಎಂ.ಬಿ.ಕೃಷ್ಣಮೂರ್ತಿ ರವರಿಂದ ಅಂಗಾಂಗ ದಾನ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ. ನಾವು ಮೃತಪಟ್ಟ ಮೇಲೆ ನಮ್ಮ ಅಂಗಾಂಗಗಳನ್ನು ಮಣ್ಣಲ್ಲಿ ಹೂಳುವುದು ಆಗಲಿ ಸುಡುವುದು ಬೇಡ ಮತ್ತೊಬ್ಬರ ಪ್ರಾಣ ಉಳಿಸಲು ನಾವು ಮೃತಪಟ್ಟರು ನಮ್ಮ ಅಂಗಾಂಗಗಳು ಸಜೀವವಾಗಿರಲಿ ಎಂದು ತಿಳಿಸಿದ್ದಾರೆ.

ಎಂ. ಬಿ. ಕೃಷ್ಣಮೂರ್ತಿ ಅಂಗಾಂಗ ದಾನ ಅರಿವು ಮೂಡಿಸುವ ಕಾರ್ಯಕ್ರಮಗಳು ಪ್ರಾರಂಭ ಮಾಡಿದ್ದು ಒಬ್ಬ ವ್ಯಕ್ತಿಯಿಂದ (ಅಂಗ ದಾನಿ) ಅಂಗಾಂಗ ಅಥವಾ ಅಂಗಾಂಶವನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದುಹಾಕಿ ಮತ್ತು ಅದನ್ನು ಇನ್ನೊಬ್ಬ ವ್ಯಕ್ತಿಗೆ ಅಳವಡಿಸುವ ಪ್ರಕ್ರಿಯೆಯನ್ನು ಅಂಗಾಂಗ ದಾನ (ಸ್ವೀಕೃತದಾರ) ಎಂದು ಕರೆಯಲಾಗುತ್ತದೆ. ರೋಗ ಅಥವಾ ಗಾಯದಿಂದಾಗಿ ಸ್ವೀಕರಿಸುವವರ ಅಂಗವು ವಿಫಲವಾದಾಗ ಅಥವಾ ಹಾನಿಗೊಳಗಾದಾಗ ಒಬ್ಬರಿಗೆ ಕಸಿ ಅಗತ್ಯವಿರುತ್ತದೆ.

ತಜ್ಞರ ಪ್ರಕಾರ, ಒಬ್ಬ ದಾನಿಯ ಅಂಗಗಳು 50 ಜನರನ್ನು ಉಳಿಸಬಹುದು ಅಥವಾ ಸಹಾಯ ಮಾಡಬಹುದು. ಮೂತ್ರಪಿಂಡಗಳು, ಹೃದಯ, ಯಕೃತ್ತು, ಮೇದೋಜ್ಜೀರಕ ಗ್ರಂಥಿ, ಕರುಳು ಮತ್ತು ಶ್ವಾಸಕೋಶದಂತಹ ಆಂತರಿಕ ಅಂಗಗಳು ನೀವು ದಾನ ಮಾಡಬಹುದಾದ ಅಂಗಗಳಲ್ಲಿ ಸೇರಿವೆ. ಚರ್ಮ, ಮೂಳೆ ಮತ್ತು ಮೂಳೆ ಮಜ್ಜೆ, ಮತ್ತು ಕಾರ್ನಿಯಾಗಳು ತಮ್ಮನ್ನು ಒಳಗೊಂಡಿವೆ. ದಾನಿ ಮರಣಿಸಿದ ನಂತರ ಹೆಚ್ಚಿನ ಅಂಗ ಮತ್ತು ಅಂಗಾಂಶ ದಾನಗಳು ಸಂಭವಿಸುತ್ತವೆ. ಆದಾಗ್ಯೂ, ಕೆಲವು ಅಂಗಗಳು ಮತ್ತು ಅಂಗಾಂಶಗಳನ್ನು ದಾನಿ ಜೀವಂತವಾಗಿರುವಾಗ ದಾನ ಮಾಡಬಹುದು ನಮ್ಮ ಅಂಗಾಂಗಗಳನ್ನು ನಾವೇಕೆ ದಾನ ಮಾಡಬೇಕು?

5,00,000 ಜನರು ಅಂಗಗಳ ಕೊರತೆಯಿಂದ ಸಾಯುತ್ತಾರೆ, 200,000 ಯಕೃತ್ತಿನ ಕಾಯಿಲೆಯ ಪರಿಣಾಮವಾಗಿ ಮತ್ತು 50,000 ಹೃದಯ ಕಾಯಿಲೆಯ ಪರಿಣಾಮವಾಗಿ ಸಾಯುತ್ತಾರೆ. ಇದಲ್ಲದೆ, 150,000 ಜನರು ಮೂತ್ರಪಿಂಡ ಕಸಿಗಾಗಿ ಕಾಯುತ್ತಿದ್ದಾರೆ, ಆದರೆ 5,000 ಜನರು ಮಾತ್ರ ಆಯ್ಕೆಯಾಗುತ್ತಾರೆ. ಅಂಗಾಂಗ ದಾನಿಯು ಇತರರ ಜೀವನದಲ್ಲಿ ಗಮನಾರ್ಹ ಬದಲಾವಣೆಯನ್ನು ಮಾಡಬಹುದು. ದಾನಿಯ ಅಂಗವನ್ನು ತೀವ್ರವಾಗಿ ಅಗತ್ಯವಿರುವ ರೋಗಿಗೆ ಕಸಿ ಮಾಡಬಹುದುಅಂಗದಾನದ ಉದ್ದೇಶಗಳು

ಅಂಗಾಂಗ ದಾನದ ಪ್ರಾಥಮಿಕ ಉದ್ದೇಶವು ಆ ಅಂಗದ ಅಗತ್ಯವಿರುವವರಿಗೆ ಸಹಾಯ ಮಾಡುವುದು ಮತ್ತು ಅವರ ಜೀವವನ್ನು ಉಳಿಸುವುದು.

ಭಾರತದಲ್ಲಿ ಅಂಗಾಂಗ ಲಭ್ಯತೆಯ ತೀವ್ರ ಕೊರತೆಯಿಂದಾಗಿ, ಅಂಗಾಂಗ ದಾನವು ಇತರರಿಗೆ ಕಾಯಿಲೆಗಳು ಮತ್ತು ರೋಗಗಳನ್ನು ಎದುರಿಸಲು ಹೇಗೆ ಸಹಾಯ ಮಾಡುತ್ತದೆ ಎಂಬುದರ ಕುರಿತು ಜಾಗೃತಿ ಮೂಡಿಸುವುದು ಅನಿವಾರ್ಯವಾಗಿದೆ.

ಅದು ಜೀವಂತ ಅಂಗಾಂಗ ದಾನವಾಗಿರಲಿ ಅಥವಾ ಮರಣ ಹೊಂದಿದವರಾಗಿರಲಿ, ಅಂಗಾಂಗದ ಅವಶ್ಯಕತೆಯಿರುವವರಿಗೆ ಸಾಮಾನ್ಯ ಜೀವನವನ್ನು ನಡೆಸಲು ಇದು ಸಹಾಯ ಮಾಡುತ್ತದೆ. ಮೂಲಭೂತವಾಗಿ, ಅಂಗಾಂಗ ದಾನ ಮತ್ತು ಕಸಿ ಪ್ರಾಮುಖ್ಯತೆಯನ್ನು ಅತಿಯಾಗಿ ಹೇಳಲು ಸಾಧ್ಯವಿಲ್ಲ. ಅಂಗಾಂಗ ದಾನದ ಕೊರತೆಯು ಭಾರತೀಯ ಆರೋಗ್ಯ ಉದ್ಯಮವು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ಒಂದಾಗಿದೆ.
ಆದ್ದರಿಂದ, ನೀವು ಅಂಗಾಂಗ ದಾನವನ್ನು ನಂಬಿದರೆ ಅಥವಾ ಅದರ ಪ್ರಯೋಜನಗಳ ಬಗ್ಗೆ ಮನವರಿಕೆ ಮಾಡಿದರೆ, ನೋಂದಣಿ ಪ್ರಕ್ರಿಯೆಯನ್ನು ಅನುಸರಿಸಿ ಮತ್ತು ನಿಮ್ಮನ್ನು ನೋಂದಾಯಿಸಿಕೊಳ್ಳಿ.ನೀವು ಅಂಗಾಂಗ ದಾನಕ್ಕಾಗಿ ನೋಂದಾಯಿಸಲು ಬಯಸಿದರೆ ನೀವು ಈ ಕೆಳಗಿನ ಯಾವುದೇ ಅಂಗಗಳನ್ನು – ಯಕೃತ್ತು, ಮೂತ್ರಪಿಂಡ, ಮೇದೋಜೀರಕ ಗ್ರಂಥಿ, ಹೃದಯ, ಶ್ವಾಸಕೋಶ ಮತ್ತು ಕರುಳುಗಳನ್ನು ದಾನ ಮಾಡಬಹುದು. ನೀವು ಅಂಗಾಂಶ ದಾನಕ್ಕಾಗಿ ನೋಂದಾಯಿಸಿಕೊಳ್ಳಬಹುದು.ನೀವು ಆನ್‌ಲೈನ್ ಫಾರ್ಮ್ ಅನ್ನು ಭರ್ತಿ ಮಾಡಬೇಕು ಮತ್ತು ಅಂಗಾಂಗ ದಾನಕ್ಕಾಗಿ ನೋಂದಾಯಿಸಿಕೊಳ್ಳಬೇಕು.
ನೀವು ಫಾರ್ಮ್ ಅನ್ನು ಡೌನ್‌ಲೋಡ್ ಮಾಡಬಹುದು, ಅದನ್ನು ಭರ್ತಿ ಮಾಡಿ ಮತ್ತು ರಾಷ್ಟ್ರೀಯ ಪ್ರಾಧಿಕಾರಕ್ಕೆ ಕಳುಹಿಸಬಹುದು. ಮೇಲೆ ತಿಳಿಸಲಾದ ವಿವರವಾದ ನೋಂದಣಿ ಪ್ರಕ್ರಿಯೆ ಮತ್ತು ದೇಣಿಗೆ ವಿಧಾನವನ್ನು ನೀವು ಕಾಣಬಹುದು. ಎಂ ಬಿ ಕೃಷ್ಣಮೂರ್ತಿ ಅರಿವು ಮೂಡಿಸಿದರು.

# ಮಾಜಿ ಶಾಸಕ ಎಸ್,ಜಯಣ್ಣ ನಿಧನ; ಗೌರವಾರ್ಥ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಶ್ರದ್ಧಾಂಜಲಿ



ಚಾಮರಾಜನಗರ.: ಕೊಳ್ಳೇಗಾಲ ಮಾಜಿ ಶಾಸಕ ಎಸ್,ಜಯಣ್ಣ ಅವರ ನಿಧನದ ಗೌರವಾರ್ಥ ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಇದೇವೇಳೆ ಕಾಡಾಅಧ್ಯಕ್ಷ, ಜಿಲ್ಲಾಕಾಂಗ್ರೆಸ್ ಸಮಿತಿ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಎಸ್. ಜಯಣ್ಣ ಅವರು 2ಬಾರಿ ಕೊಳ್ಳೇಗಾಲ ಕ್ಷೇತ್ರದ ಶಾಸಕರಾಗಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೆರವೇರಿಸಿದ್ದಾರೆ. ಅವರು ಸಜ್ಜನರಾಜಕಾರಣಿಯಾಗಿದ್ದರು. ಪಕ್ಷ ಸಂಘಟನೆ ಕುರಿತು ಅನೇಕ ಮಾರ್ಗದರ್ಶನ ನೀಡುತ್ತಿದ್ದರು. ಅವರ ನಿಧನದಿಂದ ಪಕ್ಷ ಹಾಗೂ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ ಎಂದರು ಇದೇವೇಳೆ ಮೃತರ ಗೌರವಾರ್ಥ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಚುಡಾಅಧ್ಯಕ್ಷ ಮಹಮದ್ ಅಸ್ಗರ್, ನಂಜೇದೇವನಪುರ ಗ್ರಾ,ಪಂ ಅಧ್ಯಕ್ಷ ಶೇಖರಪ್ಪ, ನಗ್ರರಸಭೆ ಮಾಜಿಸದಸ್ಯ ಪುಟ್ಟಸ್ವಾಮಿ, ನಾಗರಾಜು, ನಾಗವಳ್ಳಿನಾಗಯ್ಯ, ಕರಿನಂಜನಪುರಸ್ವಾಮಿ, ಬಸವರಾಜು, ಎ.ಎಚ್. ನಸ್ರುಲ್ಲಾಖಾನ್, ಮೋಹನ್‌ನಗು, ವಕೀಲ ನಾಗಾರ್ಜುನ್ (ಪೃಥ್ವಿ),ಪರ್ವಿಜ್ ಪಿಎಸಿಸಿ ನಿರ್ದೇಶಕ ಗುರುಸ್ವಾಮಿ, ಅಪ್ಸರ್ ಅಹಮದ್, ನಾಗಬಸವಣ್ಣ, ಸಿದ್ದರಾಜು ಮುತ್ತುರಾಜು,ಹಾಜರಿದ್ದರು.




# 'ಎಸ್.ಎಂ.ಕೃಷ್ಣ ಓರ್ವ ಸಜ್ಜನರಾಜಕಾರಣಿ'

ಚಾಮರಾಜನಗರ: ವಯೋಸಹಜ ಕಾರಣದಿಂದ ನಿಧನರಾದ ರಾಜ್ಯದ ಮಾಜಿಮುಖ್ಯಮಂತ್ರಿ, ಕೇಂದ್ರದ ಮಾಜಿಸಚಿವರು, ಮಾಜಿ ರಾಜ್ಯಪಾಲ ದಿ.ಎಸ್.ಎಂ.ಕೃಷ್ಣ ಅವರ ಗೌರವಾರ್ಥ ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಇದೇ ವೇಳೆ ಕಾಡಾಅಧ್ಯಕ್ಷ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಕಳೆದ 60 ದಶಕಗಳ ಹಿಂದೆ ರಾಜಕಾರಣ ಪ್ರವೇಶಿಸಿದ ಎಸ್.ಎಂ.ಕೃಷ್ಣ ಅವರು ಬೆಂಗಳೂರನ್ನು ಐಟಿಬಿಟಿ ನಗರ ಮಾಡುವಲ್ಲಿ ತಮ್ಮದೇ ಆದ ಪಾತ್ರ ವಹಿಸಿದ್ದರು. ಶಾಲಾಮಕ್ಕಳಿಗೆ ಅಕ್ಷರ ದಾಸೋಹಕ್ಕೆ ಚಾಲನೆ, ಯಶಸ್ವಿನಿ ಯೋಜನೆಜಾರಿ ಸೇರಿದಂತೆ ಹಲವಾರು ಯೋಜನೆಗಳನ್ನು ಜಾರಿಮಾಡಿದರು. ಅವರ ನಿಧನ ಕರ್ನಾಟಕಕ್ಕೆ ತುಂಬಲಾರದ ನಷ್ಟ ಎಂದರು

ಇದೇವೇಳೆ ಮೃತರ ಗೌರವಾರ್ಥ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು.

ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ, ಚುಡಾಅಧ್ಯಕ್ಷ ಮಹಮದ್ ಅಸ್ಗರ್, ಜಿಪಂಮಾಜಿ ಸದಸ್ಯರಾದ ಕೆ.ಪಿ.ಸದಾಶಿವಮೂರ್ತಿ, ಚುಡಾ ಸದಸ್ಯರಾದ ದ್ವಾರ್ಕಿ, ರಾಜು, ಕೆಪಿಸಿಸಿ ಸದಸ್ಯ ಸಯ್ಯದ್‌ರಫಿ, ನಗರಸಭೆ ಮಾಜಿಸದಸ್ಯ ಪುಟ್ಟಸ್ವಾಮಿ, ಹೆಬ್ಬಸೂರು ವೀರಭದ್ರಸ್ವಾಮಿ, ನಾಗವಳ್ಳಿನಾಗಯ್ಯ, ಮುತ್ತಿಗೆದೊರೆ, ಕರಿನಂಜನಪುರಸ್ವಾಮಿ, ರಾಮಸಮುದ್ರ ಶಿವಮೂರ್ತಿ, ಬಸವರಾಜು, ಎ.ಎಚ್. ನಸ್ರುಲ್ಲಾಖಾನ್, ಪರ್ವಿಜ್ ಹಾಜರಿದ್ದರು.

# ಒಬ್ಬರೆ ಅರ್ಜಿದಾರರಿಗೆ, ಒಂದೇ ಕಛೇರಿಗೆ ಸಲ್ಲಿಸಿದ ಸುಮಾರು 390 ಪ್ರಕರಣಗಳ ವಿಚಾರಣೆ ನಡೆಸಿದ ಹೆಚ್.ಸಿ.ಸತ್ಯನ್

ಬೆಂಗಳೂರು,: ಒಬ್ಬರೆ ಅರ್ಜಿದಾರರಿಗೆ ಸಂಬಂಧಿಸಿದ ಒಂದೇ ಕಛೇರಿಗೆ ಸಲ್ಲಿಸಿದ ಸುಮಾರು 390 ಪ್ರಕರಣಗಳ ವಿಚಾರಣೆಯನ್ನು ಮಾಹಿತಿ ಆಯೋಗದ ಪ್ರಭಾರಿ ಮುಖ್ಯ ಆಯುಕ್ತರಾದ ಹೆಚ್.ಸಿ.ಸತ್ಯನ್ ನಡೆಸಿರುವುದು ಇದೇ ಮೊದಲಾಗಿದೆ ಎಂದು ಮಾಹಿತಿಹಕ್ಕು ಅಧ್ಯಯನ ಕೇಂದ್ರದ ಬಿ.ಹೆಚ್.ವೀರೇಶ ತಿಳಿಸಿದ್ದಾರೆ.

ಎಲ್ಲ ಪ್ರಕರಣಗಳಲ್ಲು ಪ್ರತ್ಯೇಕವಾಗಿ ಆದೇಶ ಹೊರಡಿಸಿದ ದಾಖಲೆಯೂ ಕೂಡ ಇದೇ ಮೊದಲೆನಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬೆಂಗಳೂರಿನ ನಾಗರಿಕರೊಬ್ಬರು ದಾವಣಗೆರೆ ಉಪನೋಂದ ಣಾಧಿಕಾರಿಗೆ 390 ಅರ್ಜಿಗಳನ್ನು ಸಲ್ಲಿಸಿ ವಿವಿಧ ನೊಂದಾಯಿತ ದಾಖಲೆಗಳ ಮಾಹಿತಿ ಹಾಗೂ ದಾವಣಗೆರೆ ತಹಸೀಲ್ದಾರ್ ರವರಿಗೂ 18 ಅರ್ಜಿಗಳನ್ನು ಸಲ್ಲಿಸಿ ಮಾಹಿತಿಯನ್ನು ಕೋರಿದ್ದರು. ಕೆಲವು ಮಾಹಿತಿಗಳ ದೃಢಿಕೃತ ಪ್ರತಿಗಳನ್ನು ಕೇಳಿದ್ದರೆ ಕೆಲವು ಅರ್ಜಿಗಳಲ್ಲಿ ಮಾಹಿತಿಯನ್ನು ಈ ಮೇಲ್ ಮೂಲಕ ಕಳುಹಿಸಿಕೊಡುವಂತೆ ಕೋರಿದ್ದರು. 30 ದಿನಗಳ ಅವಧಿಯಲ್ಲಿ ಮಾಹಿತಿ ದೊರಕದಿದ್ದರಿಂದ ಸೆಕ್ಷನ 18ರ ಅಡಿಯಲ್ಲಿ ಮಾಹಿತಿ ಆಯೋಗಕ್ಕೆ ದೂರನ್ನು ಸಲ್ಲಿಸಿದರು. ಕೆಲವು ಅರ್ಜಿಗಳಲ್ಲಿ ಮೊದಲನೇ ಮೇಲ್ಮನವಿಯನ್ನೂ ಸಹ ಸಲ್ಲಿಸಿದ್ದರು. ಅಂಥಹ ಪ್ರಕರಣಗಳಲ್ಲಿ ಎರಡನೇ ಮೇಲ್ಮನವಿ ಸಲ್ಲಿಸಿದ್ದರು. ಶೇಖರ್ ಅವರ ಎಲ್ಲ 408 ದೂರುಗಳನ್ನೂ ಮತ್ತು ಮೇಲ್ಮನವಿಗಳನ್ನು ಮಾಹಿತಿ ಆಯೋಗದಲ್ಲಿ ದಿನಾಂಕ 9.102024 ರಂದು ಪ್ರತ್ಯೇಕವಾಗಿ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ಪ್ರತಿವಾದಿಯಾದ ಉಪನೊಂದಣಾಧಿ ಕಾರಿಯು ಖುದ್ದಾಗಿ ಹಾಜರಾಗಿದ್ದರು. ಅರ್ಜಿದಾರರು ಗೈರುಹಾಜರಾಗಿದ್ದರು. ಅರ್ಜಿದಾರರು ಮಾಹಿತಿ ಆಯೋಗಕ್ಕೆ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರಲಿಲ್ಲ. ಆದರೆ ಎಲ್ಲ ಪ್ರಕರಣಗಳಲ್ಲಿಯೂ ಅರ್ಜಿದಾರರಿಗೆ ಮಾಹಿತಿ ನೀಡಲಾಗಿದೆ ಎಂಬ ಮೌಖಿಕ ಹೇಳಿಕೆಯನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯು ಸಲ್ಲಿಸಿದರು ಮತ್ತು ಈ ಸಂಬಂಧದ ಎಲ್ಲ ಪೂರಕ ದಾಖಲೆಗಳನ್ನು ಮಾಹಿತಿ ಆಯೋಗಕೆ ಸಲ್ಲಿಸಿದರು. ಈ ಪ್ರಕರಣಗಳ 408 ಆದೇಶಗಳನ್ನು ಪ್ರತ್ಯೇಕವಾಗಿ ನೀಡಿದ ಮಾಹಿತಿ ಆಯೋಗವು ಎಲ್ಲ ಪ್ರಕರಣಗಳನ್ನೂ ಮುಕ್ತಾಯಗೊಳಿಸಿತು.

ಈ ಪ್ರಕರಣವು ಒಂದು ಅಪರೂಪದ ಪ್ರಕರಣವೆನಿಸಿದ್ದು. ಮಾಹಿತಿ ಆಯೋಗದ ಇತಿಹಾಸದಲ್ಲಿಯೇ ಒಂದು ದಾಖಲೆಯೆನಿಸಿದೆ. ಈ ಸಂಬಂಧ ಅರ್ಜಿದಾರರಾದ ಶೇಖರ್ ರವರು ಯಾವುದೇ ತಕರಾರು ಇದುವರೆವಿಗೂ ಸಲ್ಲಿಸದಿರುವುದರಿಂದ ಅವರಿಗೆ ಮಾಹಿತಿ ದೊರಕಿದೆ ಎಂಬ ನಿರ್ಧಾರವನ್ನು ಮಾಹಿತಿ ಆಯೋಗದಲ್ಲಿ ತೆಗದುಕೊಳ್ಳಲಾಗಿದೆ ಎಂದು ಬಿ.ಹೆಚ್.ವೀರೇಶ ತಿಳಿಸಿದ್ದಾರೆ.

# ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಅವ್ಯವಹಾರ: ಕಾರ್ಯದರ್ಶಿ ಅಮಾನತ್ತಿಗೆ ಆಗ್ರಹ

**ಬಂಗಾರಪೇಟೆ:** ತಾಲೂಕಿನ ಐನೋರಹೊಸಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ 8 ಲಕ್ಷ ಅವ್ಯವಹಾರವನ್ನು ನಡೆಸಿರುವ ಕಾರ್ಯದರ್ಶಿ ಪ್ರಭಾಕರಗೌಡರನ್ನು ಅಮಾನತು ಮಾಡುವಂತೆ ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕ ಎನ್.ನವೀನ್ ಡೇರಿ ಸಂಘದ ಅಧ್ಯಕ್ಷರಿಗೆ ಆದೇಶ ಮಾಡಿದ್ದಾರೆ.




ತಾಲೂಕಿನ ಐನೋರಹೊಸಹಳ್ಳಿ ಹಾಲು ಡೇರಿ ಬಗ್ಗೆ ಸುಮಾರು 15 ದಿನಗಳ ಕಾಲ ಲೆಕ್ಕ ಪರಿಶೋಧನೆ ನಡೆಸಿದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ ಸಿಬ್ಬಂದಿಯು ಡೇರಿ ಕಾರ್ಯದರ್ಶಿಯು ವಿವಿಧ ಖಾತೆಗಳಿಗೆ ಮುಂಗಡ ವಾಪಸ್ಸು ಎಂದು ಹೆಚ್ಚುವರಿಯಾಗಿ ರೂ. 1.45 ಲಕ್ಷ, 36091 ಲೀಟರ್ ಹಾಲು ಕೊರತೆಯ ಬಾಬ್ತು ರೂ.1.29 ಲಕ್ಷ, ಲೆಕ್ಕ ಪರಿಶೋಧನೆ ವರದಿಯಂತೆ ವಸೂಲಾತಿ ರೂ.5.30 ಲಕ್ಷಗಳು ಸೇರಿ ಒಟ್ಟು 8 ಲಕ್ಷ ಡೇರಿ ಹಣವು ದುರುಪಯೋಗವಾಗಿದೆ. ಡೇರಿ ಹಣಕಾಸಿನ ವ್ಯವಹಾರದ ಲೆಕ್ಕಪರಿಶೋಧನೆ ಮಾಡದೇ ನಿರ್ಲಕ್ಷ್ಯ ವಹಿಸಿರುವುದನ್ನು ಖಚಿತಪಡಿಸಿ ಆದೇಶ ಮಾಡಿರುವುದರಿಂದ ಡೇರಿ ಕಾರ್ಯದರ್ಶಿ ಪ್ರಭಾಕರಗೌಡರನ್ನು ಸೇವೆಯಿಂದ ಅಮಾನತು ಮಾಡಿ ಅವರಿಂದ 8 ಲಕ್ಷ ವಸೂಲಿ ಮಾಡುವಂತೆ ಡೇರಿ ಅಧ್ಯಕ್ಷ ರಮೇಶಗೌಡ ಅವರಿಗೆ ಸೂಚನೆ ನೀಡಿದ್ದಾರೆ.

ಹಾಲು ಡೇರಿ ಕಾರ್ಯದರ್ಶಿ ಪ್ರಭಾಕರಗೌಡ ಕಳೆದ ಹತ್ತು ತಿಂಗಳಲ್ಲಿ ತಮ್ಮ ಖಾತೆಗೆ 90 ಸಾವಿರ, ಮಂಜುಳಾ ಎಂಬುವವರ ಖಾತೆಗೆ 50 ಸಾವಿರ ಹಾಗೂ ಎನ್.ಪದ್ಮ ಎಂಬುವವರ ಖಾತೆಗೆ 1.98 ಲಕ್ಷ ಹಣ ವರ್ಗಾವಣೆ ಮಾಡಿದ್ದಾರೆ. ಒಟ್ಟು 3.38 ಲಕ್ಷ ಭ್ರಷ್ಟಾಚಾರ ನಡೆಸಿದ್ದಾರೆ.

ಹಾಲು ಶೇಖರಣೆಯಲ್ಲಿ ವ್ಯತ್ಯಾಸ, ಲೆಕ್ಕ ತಪಾಸಾಣೆಯಲ್ಲಿ ನ್ಯೂನತೆ, ಪಶು ಆಹಾರ ದುರುಪಯೋಗ, ಬೋನಸ್ ನೀಡಿದೆ ರೈತರಿಗೆ ವಂಚನೆ, ಹಾಲು ಸರಬರಾಜಿಗೆ ತಕ್ಕಂತೆ ದರ ನೀಡುತ್ತಿಲ್ಲ, ಆದಕಾರಣ ಮೇಲಾಧಿಕಾರಿಗಳು ಇಂತಹ ಭ್ರಷ್ಟರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಹಾಗೂ ಕಾರ್ಯದರ್ಶಿ ಹುದ್ದೆಯಿಂದ ವಜಾಗೊಳಿಸಬೇಕು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಎನ್.ರಾಮೇಗೌಡ ನೇತೃತ್ವದಲ್ಲಿ ಶಿಬಿರ ಕಚೇರಿ ಎದುರು ಪ್ರತಿಭಟನೆ ಮಾಡಿ ಆಗ್ರಹಿಸಿದ್ದರು.

ಹಾಲು ಡೇರಿಯಲ್ಲಿ ಕಾರ್ಯದರ್ಶಿ ಪ್ರಭಾಕರಗೌಡ ಅವ್ಯವಹಾರ ನಡೆಸಿರುವುದು ನಿಜ ಅದನ್ನು ಸೂಕ್ತ ರೀತಿಯಲ್ಲಿ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ದ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿ, ಹಾಲು ಡೇರಿಯ ಉಪಾಧ್ಯಕ್ಷ ನಾಗರಾಜರೆಡ್ಡಿ, ಆಡಳಿತ ಮಂಡಳಿಯ ಸದಸ್ಯರಾದ ಜಗದೀಶ್, ರಾಜಣ್ಣ, ಪ್ರಸಾದ್, ಮಾಲ, ಚಂದ್ರಪ್ಪ, ಪಾರ್ವತಮ್ಮ, ರತ್ನಮ್ಮ ಮತ್ತು ಶಾರದ ಅವರುಗಳ ಸ್ಥಾನಕ್ಕೆ ರಾಜೀನಾಮೆಯನ್ನು ನ. 21 ರಂದು ಸಂಘದ ಕಾರ್ಯದರ್ಶಿ ಪ್ರಭಾಕರಗೌಡರಿಗೆ ಸಲ್ಲಿಸಿದ್ದರು. ಇವರ ರಾಜೀನಾಮೆಯೂ ಸಹ ಅಂಗೀಕಾರದ ಹಂತದಲ್ಲಿದ್ದು, ಐನೋರಹೊಸಹಳ್ಳಿ ಡೇರಿಯಲ್ಲಿ ಸದಸ್ಯ ಬಲ ಕೊರತೆ ಇರುವುದರಿಂದ ಸೂಪರ್ ಸೀಡ್ ಆಗುವುದು ಬಹುತೇಕ ಖಚಿತವಾಗಿದೆ. ಡೇರಿಯ ಆಡಳಿತ ಮಂಡಳಿ ಹಾಗೂ ಕಾರ್ಯದರ್ಶಿಯನ್ನು ಉಳಿಸಲು ಕೆಲವರು ಪ್ರಯತ್ನಗಳು ಮಾಡುತ್ತಿದ್ದರೂ ಸಹ ಇದೇ ಗ್ರಾಮದ ಮುಖಂಡರು ಒಪ್ಪುತ್ತಿಲ್ಲ ಎನ್ನಲಾಗಿದ್ದು, ಕಾರ್ಯದರ್ಶಿ ಈ ಆದೇಶಕ್ಕೆ ಕಿಮ್ಮತ್ತು ನೀಡದೇ ಕಾರ್ಯದರ್ಶಿಯಾಗಿಯೇ ಮುಂದುವರೆದಿರುವುದರಿಂದ ರಾಜೀನಾಮೆ ನೀಡಿರುವ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

# ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸುವಲ್ಲಿ ಕೈ ಜೋಡಿಸಿ

ಮೈಸೂರು,: ಬಾಲ ಕಾರ್ಮಿಕ ಮತ್ತು ಕಿಶೋರಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯನ್ವಯ ನೇಮಕಗೊಂಡಿರುವ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮೈಸೂರು ಜಿಲ್ಲೆಯನ್ನು 'ಬಾಲಕಾರ್ಮಿಕ ಮುಕ್ತ ಜಿಲ್ಲೆ'ಯನ್ನಾಗಿಸುವಲ್ಲಿ ಕೈ ಜೋಡಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಜಿ. ಲಕ್ಷ್ಮೀಕಾಂತ ರೆಡ್ಡಿ ಅವರು ಸೂಚಿಸಿದರು.



ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಡಿ.9 ರಂದು ಮೈಸೂರು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿ ಸಭೆ ಹಾಗೂ ಕಾರ್ಯ ಪಡೆ (ಟಾಸ್ಕ್ ಫೋರ್ಸ್) ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮೈಸೂರು ಜಿಲ್ಲೆಯನ್ನು ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸುವ ಸಲುವಾಗಿ ಗ್ಯಾರೇಜುಗಳು, ಗುಜರಿ, ಕಸ ವಿಲೇವಾರಿ ಘಟಕ ಮುಂತಾದ ಬಾಲ/ಕಿಶೋರ ಕಾರ್ಮಿಕರು ಹೆಚ್ಚಾಗಿ ಕಂಡುಬರುವಂತಹ ಸ್ಥಳಗಳಲ್ಲಿ ಹೆಚ್ಚು ತಪಾಸಣೆ ನಡೆಸಿ ದುಡಿಮೆಯಲ್ಲಿ ತೊಡಗಿರುವ ಬಾಲ ಮತ್ತು ಕಿಶೋರ ಕಾರ್ಮಿಕರನ್ನು ರಕ್ಷಿಸಿ ಪುನರ್ವಸತಿಗೊಳಿಸಲು ಅಧಿಕಾರಿಗಳು ಮುಂದಾಗಬೇಕು ಎಂದು ಅವರು ಸೂಚಿಸಿದರು. ವಲಸೆ ಕಾರ್ಮಿಕರ ಜೊತೆ ಬಂದಿರುವ ಮಕ್ಕಳು ಶಿಕ್ಷಣದಿಂದ ವಂಚಿತರಾಗಿರುತ್ತಾರೆ. ಅಂತಹ ಮಕ್ಕಳು ಶಿಕ್ಷಣ ಪಡೆಯುವ ಸಲುವಾಗಿ ಕಾರ್ಮಿಕ ಇಲಾಖೆಯೊಂದಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಶಿಕ್ಷಣ ಇಲಾಖೆಗಳು ಸಹಭಾಗಿತ್ವ ವಹಿಸಿ ಮಕ್ಕಳನ್ನು ಟೆಂಟ್ ಶಾಲೆ ಅಥವಾ ಅಂಗನವಾಡಿ ಕೇಂದ್ರಗಳಿಗೆ ಮಕ್ಕಳನ್ನು ದಾಖಲಿಸಲು ಸೂಚಿಸಿದರು.

2024-25ನೇ ಸಾಲಿನಲ್ಲಿ ಒಟ್ಟು 832 ತಪಾಸಣೆಗಳು, 40 ಬಾಲ/ಕಿಶೋರಕಾರ್ಮಿಕರು ಪತ್ತೆಯಾಗಿದ್ದು, ಪೊಲೀಸ್ ಠಾಣೆಯಲ್ಲಿ ಬಾಲ/ಕಿಶೋರಕಾರ್ಮಿಕರನ್ನು ನೇಮಿಸಿಕೊಂಡ ಮಾಲೀಕರ ವಿರುದ್ಧ 06 ಪ್ರಕರಣಗಳಲ್ಲಿ ಎಫ್.ಐ.ಆರ್ ಆಗಿದ್ದು, 16 ಪ್ರಕರಣಗಳಲ್ಲಿ ಘನ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಲಾಗಿರುತ್ತದೆ.

ಸಭೆಯಲ್ಲಿ ಪೊಲೀಸ್ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ ಹಾಗೂ ಸ್ಥಳೀಯ ಸರ್ಕಾರೇತರ ಸಂಸ್ಥೆಯ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ವಿವಿಧ ಯೋಜನೆಗಳ ಸೌಲಭ್ಯ: ನೊಂದಾಯಿಸಿ

ಚಾಮರಾಜನಗರ,: ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳ ಸೌಲಭ್ಯಕ್ಕೆ ಅಸಂಘಟಿತ ಕಾರ್ಮಿಕರು ನೋಂದಾಯಿಸಿಕೊಳ್ಳುವಂತೆ ಕಾರ್ಮಿಕ ಇಲಾಖೆ ತಿಳಿಸಿದೆ.

ಚಾಲಕರು, ಕ್ಲೀನರ್, ನಿರ್ವಾಹಕರು, ಮೆಕ್ಯಾನಿಕ್, ನಿಲ್ದಾಣ ಸಿಬ್ಬಂದಿ, ಮಾರ್ಗ ಪರಿಶೀಲನಾ ಸಿಬ್ಬಂದಿ, ಬುಕ್ಕಿಂಗ್ ಗುಮಾಸ್ತ, ನಗದು ಗುಮಾಸ್ತ, ಡೀಪೋ ಗುಮಾಸ್ತ, ಸಮಯ ಸೂಚಕ, ಕಾವಲುಗಾರ ಅಥವಾ ಪರಿಚಾರಕ, ನಿಲ್ದಾಣ ಲೋಡಿಂಗ್, ಅನ್ ಲೋಡಿಂಗ್ ಸಿಬ್ಬಂದಿ, ಮೋಟಾರು ಗ್ಯಾರೇಜ್ ಸಿಬ್ಬಂದಿ, ಟೈರ್ ಜೋಡಿಸುವ ಮತ್ತು ಬೇರ್ಪಡಿಸುವ ಸಿಬ್ಬಂದಿ, ಪಂಚರ್ ದುರಸ್ತಿ ಮಳಿಗೆ ಕಾರ್ಮಿಕರು, ವೀಲ್ ಬ್ಯಾಲೆನ್ಸಿಂಗ್ ಮತ್ತು ಅಲೈನ್‌ಮೆಂಟ್ ಸಿಬ್ಬಂದಿ, ನೀರಿನಿಂದ ವಾಹನ ಸ್ವಚ್ಛಗೊಳಿಸುವ ಘಟಕ ಸಿಬ್ಬಂದಿ, ಮೋಟಾರು ವಾಹನ ಹೊರಕವಚ ನಿರ್ಮಾಣ ಘಟಕ, ಟಿಂಕರಿಂಗ್, ಎಲೆಕ್ಟ್ರಿಕಲ್ ಹಾಗೂ ಎ.ಸಿ ಘಟಕಗಳಲ್ಲಿನ ಸಿಬ್ಬಂದಿ, ಭದ್ರತೆ ಸಿಬ್ಬಂದಿ ಯೋಜನೆಗೆ ನೋಂದಾಯಿಸಿಕೊಳ್ಳಬಹುದು. ಅಪಘಾತ ಪರಿಹಾರ ಯೋಜನೆಯಡಿ ಅಪಘಾತದಿಂದ ಫಲಾನುಭವಿಗಳು ನಿಧನರಾದಲ್ಲಿ ನಾಮನಿರ್ದೇಶಿತರಿಗೆ 5 ಲಕ್ಷ ರೂ. ಪರಿಹಾರ, ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದರೆ ಫಲಾನುಭವಿಗೆ ದುರ್ಬಲತೆಯ ಪ್ರಮಾಣಕ್ಕನುಗುಣವಾಗಿ ಗರಿಷ್ಟ 2 ಲಕ್ಷ ರೂ. ವರೆಗೆ ಪರಿಹಾರ ನೀಡಲಾಗುತ್ತದೆ. ಅಪಘಾತದಿಂದ ತಾತ್ಕಾಲಿಕ ದುರ್ಬಲತೆ ಹೊಂದಿದರೆ ಅಪಘಾತಕ್ಕೊಳಗಾಗಿ ಆಸ್ಪತ್ರೆಯಲ್ಲಿ 15 ದಿನಗಳಿಗಿಂತ ಕಡಿಮೆ ಅವಧಿಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ಗರಿಷ್ಠ 50 ಸಾವಿರ ರೂ. ಅಥವಾ ನಿಖರ ಆಸ್ಪತ್ರೆ ವೆಚ್ಚ, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಹಾಗೂ 15 ದಿನಗಳಿಂತ ಹೆಚ್ಚು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಲ್ಲಿ ಗರಿಷ್ಟ 1 ಲಕ್ಷ ರೂ. ಅಥವಾ ನಿಖರ ವೆಚ್ಚ, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಪಾವತಿಸಲಾಗುವುದು. ನೈಸರ್ಗಿಕ ಮರಣ ಪರಿಹಾರ ಹಾಗೂ ಅಂತ್ಯಸಂಸ್ಕಾರ ವೆಚ್ಚ ಯೋಜನೆಯಡಿ ಸಹಜ ಮರಣ ಹೊಂದಿದ ಫಲಾನುಭವಿಗಳ ಅವಲಂಬಿತರಿಗೆ ಅಂತ್ಯಸಂಸ್ಕಾರ ವೆಚ್ಚವೂ ಸೇರಿದಂತೆ 25 ಸಾವಿರ ರೂ. ಪರಿಹಾರ ನೀಡಲಾಗುತ್ತದೆ. ಶೈಕ್ಷಣಿಕ ಧನಸಹಾಯ ಯೋಜನೆಯಡಿ ನೋಂದಾಯಿತ ಫಲಾನುಭವಿಯ ಗರಿಷ್ಟ ಇಬ್ಬರು ಮಕ್ಕಳಿಗೆ 12ನೇ ತರಗತಿ ಅಥವಾ ತತ್ಸಮಾನ ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ 3 ಸಾವಿರ ರೂ., ಪದವಿ ಅಥವಾ ತತ್ಸಮಾನ ವಿದ್ಯಾರ್ಥಿಗಳಿಗೆ 5,500 ರೂ., ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣ ವಿದ್ಯಾರ್ಥಿಗಳಿಗೆ 8 ಸಾವಿರ ರೂ. ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ 11 ಸಾವಿರ ರೂ. ನೀಡಲಾಗುತ್ತದೆ. ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಬಲತೆ ಹೊಂದಿದ ಫಲಾನುಭವಿಯ ಗರಿಷ್ಟ ಇಬ್ಬರು ಮಕ್ಕಳಿಗೆ 1ನೇ ತರಗತಿಯಿಂದ ಪದವಿ ಅಥವಾ ತತ್ಸಮಾನ ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ 10 ಸಾವಿರ ರೂ., ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣ ವಿದ್ಯಾರ್ಥಿಗಳಿಗೆ 20 ಸಾವಿರ ರೂ. ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಾರ್ಷಿಕ 11 ಸಾವಿರ ರೂ. ನೀಡಲಾಗುತ್ತದೆ. ಹೆರಿಗೆ ಭತ್ಯೆ ಯೋಜನೆಯಡಿ ಫಲಾನುಭವಿಯ ಮೊದಲ ಎರಡು ಹೆರಿಗೆಗಳಿಗೆ ಮಾತ್ರ ಸೀಮಿತಗೊಂಡಂತೆ ತಲಾ 10 ಸಾವಿರ ರೂ. ನೀಡಲಾಗುತ್ತದೆ. ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ. ನೋಂದಣಿದಾರರು 18 ರಿಂದ 60 ವಯೋಮಿತಿಯೊಳಗಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾದು. ಇ.ಎಸ್.ಐ ಮತ್ತು ಪಿ.ಎಫ್ ಸೌಲಭ್ಯ ಹೊಂದಿರಬಾರದು. ಯೋಜನೆಯ ಸೌಲಭ್ಯಗಳು ಕರ್ತವ್ಯದಲ್ಲಿರುವಾಗ ಹಾಗೂ ಇಲ್ಲದಿರುವಾಗಲೂ ಸಹ ಲಭ್ಯವಾಗುತ್ತದೆ. ಚಾಲಕರು, ಕರ್ನಾಟಕ ರಾಜ್ಯ ಸಾರಿಗೆ ಇಲಾಖೆಯಿಂದ ವಾಣಿಜ್ಯ ವಾಹನ ಚಲಾಯಿಸಲು ಊರ್ಜಿತ ಚಾಲನಾ ಪರವಾನಗಿಯನ್ನು ಹೊಂದಿರುವುದು ಕಡ್ಡಾಯವಾಗಿದೆ.

ಅರ್ಜಿದಾರ ಅಥವಾ ಫಲಾನುಭವಿಯು ಅಪಘಾತ ಪರಿಹಾರಕ್ಕಾಗಿ ಅಪಘಾತ ಸಂಭವಿಸಿದ 1 ವರ್ಷದೊಳಗೆ ಹಾಗೂ ಸಹಜ ಮರಣ ಪ್ರಕರಣಗಳಲ್ಲಿ ಮರಣ ದಿನಾಂಕದಿಂದ 6 ತಿಂಗಳ ಅವಧಿಯೊಳಗೆ ಹಾಗೂ ಶೈಕ್ಷಣಿಕ ಧನಸಹಾಯಕ್ಕಾಗಿ ಮಂಡಳಿಯು ಘೋಷಿಸಿದ ಅವಧಿಯಲ್ಲಿ ಸೇವಾ ಸಿಂಧೂ ಪೋರ್ಟಲ್ ಮೂಲಕ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು.

3 ವರ್ಷಗಳ ಅವಧಿಗೆ ನೋಂದಣಿ ಶುಲ್ಕವಾಗಿ 50 ರೂ. ಮತ್ತು ಮುಂದಿನ 3 ವರ್ಷಗಳವರೆಗೆ ನವೀಕರಣ ಶುಲ್ಕ 50 ರೂ. ನಿಗದಿ ಮಾಡಲಾಗಿದೆ. ನೋಂದಣಿ, ಕ್ಲೈಮ್, ಇನ್ನಿತ ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ ಕಚೇರಿ, ಕಲ್ಯಾಣ ಸುರಕ್ಷಾ ಭವನ, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029 ಅಥವಾ ವೆಬ್‌ಸೈಟ್ ಓಣಣಠ:://ಇಣಾಶಿಥ.ಇಚಿಡಿಟಿಚಿಣಚಿಞಚಿ.ರಠತ.ಟಿ ಹಾಗೂ ಕಾರ್ಮಿಕ ಇಲಾಖೆಯ ಉಚಿತ ಸಹಾಯವಾಣಿ ಸಂ-155214 ಸಂಪರ್ಕಿಸಬಹುದು.

# 100 ಬೆಡ್ ಹೆರಿಗೆ ಆಸ್ಪತ್ರೆಗೆ ಎಸ್.ಎಂ.ಕೃಷ್ಣ ಹೆಸರಿಡಲಾಗುವುದು

ಮಂಡ್ಯ: ಮಾಜಿ ಸಿಎಂ ಎಸ್.ಎಂ.ಕೃಷ್ಣ ವಿಧಿವಶರಾಗಿದ್ದು, ಬುಧವಾರ ಅವರ ಹುಟ್ಟೂರು ಸೋಮನಹಳ್ಳಿಯಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಲಿದೆ.

ಸಾವಿರ ಕೆಜಿ ಶ್ರೀಗಂಧದಿಂದ ಎಸ್.ಎಂ.ಕೃಷ್ಣ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಶಾಸಕ ಗಣಿಗ ರವಿ ತಿಳಿಸಿದ್ದಾರೆ.



ಬೆಂಗಳೂರಿನ ಸದಾಶಿವನಗರದಲ್ಲಿ ಎಸ್.ಎಂ.ಕೃಷ್ಣ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಬಳಿಕ ಮಾತನಾಡಿದ ಶಾಸಕ ಗಣಿಗ ರವಿ, 1000 ಕೆಜಿ ಶ್ರೀಗಂಧದ ಕಟ್ಟಿಗೆಯಿಂದ ಎಸ್.ಎಂ.ಕೃಷ್ಣ ಅವರ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದರು. ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಶ್ರೀಗಂಧದ ಮರಗಳನ್ನು ರೈತರು ಬೆಳೆಯಲು ಅವಕಾಶ ಮಾಡಿಕೊಟ್ಟಿದ್ದರು.ಈ ಹಿನ್ನೆಲೆಯಲ್ಲಿ ಗೌರವಪಾರ್ಥವಾಗಿ ಶ್ರೀಗಂಧದಿಂದ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದು. ಮಂಡ್ಯದಲ್ಲಿ ನೂತನವಾಗಿ ನಿರ್ಮಿಸಲಾಗಿರುವ 100ಬೆಡ್ ಹೆರಿಗೆ ಆಸ್ಪತ್ರೆಗೆ ಎಸ್.ಎಂ.ಕೃಷ್ಣ ಹೆಸರಿಡಲು ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿದ್ದು ಇದಕ್ಕೆ ಮುಖ್ಯಮಂತ್ರಿಗಳು ಒಪ್ಪಿಗೆ ನೀಡುತ್ತಾರೆ ಎಂದರು. ಮಂಡ್ಯದಲ್ಲಿನ ಒಂದು ಉದ್ಯಾನವನಕ್ಕೂ ಎಸ್.ಎಂ.ಕೃಷ್ಣ ಹೆಸರಿಡಲಾಗುವುದು ಹಾಗೂ ಮಂಡ್ಯ ತಾಲ್ಲೂಕಿನ ಬಿ.ಹೊಸೂರು ಕಾಲೋನಿಯಲ್ಲಿ ತಾಯಿ-ಮಕ್ಕಳ ಆಸ್ಪತ್ರೆಗೆ ಎಸ್.ಎಂ.ಕೃಷ್ಣ ಅವರ ಹೆಸರಿಡಲಾಗುವುದು ಎಂದು ತಿಳಿಸಿದರು.

# ಆಕಾಶ್ ಸಮೂಹ ಸಂಸ್ಥೆಗೆ ಟೈಮ್ಸ್ ಹೆಲ್ತ್ ಅವಾರ್ಡ್ ಪ್ರಶಸ್ತಿ




ದೇವನಹಳ್ಳಿ: ತಾಲೂಕಿನ ಪ್ರಸನ್ನಹಳ್ಳಿಯಲ್ಲಿರುವ ಅಕಾಶ್ ಅಸ್ಪತ್ರೆಯು ಮತ್ತೊಂದು ಗರಿಯನ್ನು ಮುಡಿಗೇರಿಸಿಕೊಂಡಿದೆ. ಮೊಟ್ಟ ಮೊದಲನೇಯದಾಗಿ ಕೋಕ್ಲಿಯರ್ ಇಂಪ್ಲಾಂಟ್ ಯಶಸ್ವಿಯಾಗಲು ಅಕಾಶ್ ಅಸ್ಪತ್ರೆ ವೈದ್ಯಾಧಿಕಾರಿಗಳು ಹಾಗು ಅಡಳಿತ ಮಂಡಲಿ ಪರಿಶ್ರಮದಿಂದ ಮತ್ತೊಂದು ಮೈಲುಗಲ್ಲು ಸಾಧಿಸಿದ್ದಾರೆ. ಆಕಾಶ್ ಅಸ್ಪತ್ರೆಯಲ್ಲಿ ಐತಿಹಾಸಿಕ ಕ್ಷಣ ಸುಧಾರಿತ ತಂತ್ರಜ್ಞಾನ, ನಿಖರತೆ ಮತ್ತು ಟೀಮ್ ವರ್ಕ್‌ಗೆ ನಿಜವಾದ ಪುರಾವೆಯಾಗಿರುವುದಕ್ಕೆ ಟೈಮ್ಸ್ ಹೆಲ್ತ್ ಅವಾರ್ಡ್‌ಗಳನ್ನು ನೀಡಿ ಗೌರವಿಸಲಾಗಿದೆ.

ಈ ಸಮಯದಲ್ಲಿ ಆಕಾಶ್ ಗ್ರೂಪ್ ಸಂಸ್ಥೆಯ ಅಧ್ಯಕ್ಷ ಹಾಗೂ ಸಂಸ್ಥಾಪಕ ಕೆ.ಮುನಿರಾಜು, ಆಕಾಶ್ ಸಂಸ್ಥೆಗಳ ಮುಖ್ಯಸ್ಥೆ ಪುಷ್ಪ ಮುನಿರಾಜು, ಆಕಾಶ್ ಶಿಕ್ಷಣ ಸಮೂಹ ಸಂಸ್ಥೆ ಉಪಾಧ್ಯಕ್ಷ ಅಮರ್ ಗೌಡ, ನಿರ್ದೇಶಕ ಆಕಾಶ್ ಹಾಗೂ ಅಡಳಿತ ಮಂಡಳಿಯವರು ಟೈಮ್ಸ್ ಹೆಲ್ತ್ ವತಿಯಿಂದ ಎಕ್ಸಲೆನ್ಸ್ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ ಮತ್ತು ಎಕ್ಸಲೆನ್ಸ್ ವಿಮೆನ್ ಅಂಡ್ ಚೈಲ್ಡ್ ಹೆಲ್ತ್ ಎಂಬ ಎರಡು ಟೈಮ್ಸ್ ಹೆಲ್ತ್ ಅವಾರ್ಡ್ ಗಳನ್ನು ಸ್ವೀಕರಿಸಿದರು.

# ಆರ್ಟ್ ಆಫ್ ಟ್ರಾನ್ಸ್ ಪಾರ್ಮೇಶನ್‌ನಿಂದ ಪಶ್ಚಿಮ ಬಂಗಾಳದ ಚಿತ್ರ ಕಲಾವಿದರ ಚಿತ್ರ ಪ್ರದರ್ಶನ

ಬೆಂಗಳೂರು : ದಿ ಆರ್ಟ್ ಆಫ್ ಟ್ರಾನ್ಸ್ ಪಾರ್ಮೆಶನ್ ನ ಪಶ್ಚಿಮ ಬಂಗಾಳದ ಆರು ಮಂದಿ ಚಿತ್ರ ಕಲಾವಿದರ ಚಿತ್ರ ಕಲಾ ಪ್ರದರ್ಶನ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಇದೇ 15ರವರೆಗೆ ಐದು ದಿನಗಳ ಕಾಲ ನಡೆಯಲಿದೆ.

ಚಿತ್ರಕಲಾವಿದರಾದ ರಾಮ್ ಕುಮಾರ್ ಮನ್ನಾ, ಪಿಯಾಲಿ ಗಂಗೂಲಿ, ಮಹಾನಂದ ಗೋಮಾಸ್ತಾ,ಗೋಪಾಲ ಚಂದ್ರ ನಾಸ್ಕರ್, ಮೌಮಿತ ಘೋಷ್,ರಿತುಪರ್ಣ ಚಕ್ರವರ್ತಿ ಅವರ ವಿವಿಧ ಚಿತ್ರಪಟಗಳು ಚಿತ್ರಕಲಾ ಪ್ರೇಮಿಗಳ ಗಮನ ಸೆಳೆಯುತ್ತಿವೆ. ರಾಮ್ ಕುಮಾರ್ ಮನ್ನಾ ಅವರ ಟೆರ್ರಾಕೊಟ ಚಿತ್ರ ಮೂರ್ತಿಗಳು, ಆಯಿಲ್ ಕ್ಯಾನವಾಸ್, ಮರಗಳಲ್ಲಿ ಕತ್ತನೆ ಮಾಡಿರುವ ಚಿತ್ರಗಳು, ಆರ್ಕಲಿಕ್ ಕ್ಯಾನವಾಸ್,ಮೌಮಿತ ಘೋಷ್ ಅವರ ವಾಟರ್ ಕಲರ್ ಚಿತ್ರ ಪಟಗಳು ಆಕರ್ಷಿಸುತ್ತಿವೆ.

ಚಿತ್ರ ಕಲಾವಿದೆ ಮೌಮಿತ ಘೋಷ್ ಮಾತನಾಡಿ,ಇದೇ ಮೊದಲ ಬಾರಿಗೆ ಪಶ್ಚಿಮ ಬಂಗಾಳದ ಕಲಾವಿದರ ಚಿತ್ರ ಪ್ರದರ್ಶನವನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ, ಈಗಾಗಲೇ ದೇಶದ ವಿವಿಧಡೆ ಈ ಪ್ರದರ್ಶನ ನಡೆಸಲಾಗಿದೆ ಎಂದು ಹೇಳಿದರು.



# ಸುದ್ದಿ ಸಂಜೆ

## ಡಿ.17ರಂದು ಬೆಳಗಾವಿ ಚಲೋ

**ಹೊಸಕೋಟೆ:** ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘ ರಾಜ್ಯದ ವಿವಿಧ ಇಲಾಖೆಗಳಲ್ಲಿ ಅಧಿಸೂಚನೆಗೊಂಡಿರುವ ನೌಕರರು ಹಾಗೂ ನಿವೃತ್ತಿ ಹೊಂದಿರುವ ನೌಕರರನ್ನು ಒಳಗೊಂಡಂತೆ ಬೆಳಗಾವಿ ಚಲೋ ಡಿ.17ಕ್ಕೆ ಮಾಡುವುದಾಗಿ ರಾಜ್ಯಾಧ್ಯಕ್ಷ ಎ.ಎಂ ನಾಗರಾಜ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ನಡೆಯುತ್ತಿದ್ದು, ಈ ಅವಧಿಯಲ್ಲಿ ರಾಜ್ಯದ ವಿವಿಧ ಇಲಾಖೆಗಳಲ್ಲಿ ತೊಡಗಿಸಿಕೊಂಡಿರುವ ಕರ್ನಾಟಕ ದಿನಗೂಲಿ ಕ್ಷೇಮಾಭಿವೃದ್ಧಿ ಅಧಿಸೂಚಿತ ನೌಕರರು ತಮಗೆ ಅಧಿನಿಯಮ ಶಾಸನ 2012ರ ಅಡಿ ಸಿಗಬೇಕಾದ ಪೂರ್ಣ ಪ್ರಮಾಣದ ಸೌಲಭ್ಯಗಳು ಜಾರಿ ಆಗದಿರುವ ಕಾರಣದಿಂದ ನೌಕರರ ಬಹು ವರ್ಷಗಳ ಬೇಡಿಕೆಗಳ ಜಾರಿಗಾಗಿ ಒತ್ತಾಯಿಸಿ ಡಿ. 17 ರಂದು ಒಂದು ದಿನ ಸರ್ಕಾರದ ಗಮನ ಸೆಳೆಯಲು ಹೋರಾಟವನ್ನು ಹಮ್ಮಿಕೊಳ್ಳಲಾಗಿದೆ.

**ಮುಖ್ಯ ಬೇಡಿಕೆಗಳು:** ನಿವೃತ್ತಿ ಹೊಂದಿರುವ ನೌಕರರಿಗೆ ಪಿಂಚಣಿ ಜಾರಿ ಬಗ್ಗೆ ಒತ್ತಾಯಪಡಿಸುವುದು. 2013 ಫೆಬ್ರವರಿ 15 ರಿಂದ ಆರ್ಥಿಕ ಸೌಲಭ್ಯ ಸರ್ಕಾರದ ಅಧಿಸೂಚನೆ 2024 ಏಪ್ರಿಲ್ 22 ರ ಅವಧಿಗೆ ಒಂದು ವರ್ಷದ ವೇತನ ವ್ಯತ್ಯಾಸ ಜಾರಿಗೆ ಒತ್ತಾಯ ಪಡಿಸುವುದು, ಆರನೇವೇತನ ಜಾರಿ ವೇಳೆ ಆಗಿರುವ ತಾರತಮ್ಯ ಸರಿಪಡಿಸಿ ಸರ್ಕಾರಿ ನೌಕರರಿಗೆ ಜಾರಿಗೆ ಬಂದ 2018 ಏಪ್ರಿಲ್ 1 ರಿಂದ 2018 ಜುಲೈ 31ರ ಅವಧಿಗೆ ನಾಲ್ಕು ತಿಂಗಳ ವ್ಯತ್ಯಾಸ ಬಾಕಿ ಬಗ್ಗೆ ಒತ್ತಾಯ, ಏಳನೇ ವೇತನ ಜಾರಿಗೂ ಮೊದಲು ಸರ್ಕಾರಿ ನೌಕರರಿಗೆ ಜಾರಿಗೊಳಿಸಿದ ತಾತ್ಕಾಲಿಕ ಪರಿಹಾರ ಶೇ 17 ರಷ್ಟನ್ನು 2023 ಏಪ್ರಿಲ್ 1 ರಿಂದ ನೀಡಿದ್ದು, ಕ್ಷೇಮಾಭಿವೃದ್ಧಿ ನೌಕರರಿಗೆ 2024 ಸೆಪ್ಟಂಬರ್ 1 ರಿಂದ ಜಾರಿಗೊಳಿಸಿ ಒಟ್ಟು ಶೇ. 27 ವ್ಯತ್ಯಾಸ ನೀಡುವ ಬಗ್ಗೆ ಒತ್ತಾಯ, ಆರೋಗ್ಯ ವಿಮೆ ಜಾರಿ ನಿವೃತ್ತ ನೌಕರರನ್ನು ಒಳಗೊಂಡಂತೆ ಹಲವು ಬೇಡಿಕೆಗಳ ಜಾರಿಗಾಗಿ ಬೆಳಗಾವಿ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಎ.ಎಂ ನಾಗರಾಜ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿ.13ರಂದು ಜಿಲ್ಲಾ ಮಟ್ಟದ ಯುವಜನೋತ್ಸವ

ಚಾಮರಾಜನಗರ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಜಿಲ್ಲಾ ಮಟ್ಟದ ಯುವಜನೋತ್ಸವ ವಿವಿಧ ಸ್ಪರ್ಧೆಗಳನ್ನು ಡಿಸೆಂಬರ್ 13ರಂದು ನಗರದ ಡಾ. ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿದೆ. ಸ್ವಾಮಿ ವಿವೇಕಾನಂದ ಜನ್ಮದಿನಾಚರಣೆಯ ಅಂಗವಾಗಿ ರಾಷ್ಟೀಯ ಯುವ ದಿನಾಚರಣೆಗೆ ಜಾನಪದ ಗೀತೆ (ಗುಂಪು), ಜಾನಪದ ನೃತ್ಯ (ಗುಂಪು), ಕಥೆ ಬರೆಯುವದು (ವೈಯಕ್ತಿಕ), ಕವಿತೆ ಬರೆಯುವುದು (ವೈಯಕ್ತಿಕ), ಚಿತ್ರಕಲೆ (ವೈಯಕ್ತಿಕ), ಘೋಷಣೆ (ವೈಯಕ್ತಿಕ) ಛಾಯಾಚಿತ್ರ (ವೈಯಕ್ತಿಕ), ವಿಜ್ಞಾನಮೇಳ (ವೈಯಕ್ತಿಕ ಮತ್ತು ಗುಂಪು) ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಸ್ಪರ್ಧೆಗಳಿಗೆ 15 ರಿಂದ 29 ವಯೋಮಿತಿಯಲ್ಲಿರುವ ಜಿಲ್ಲೆಯ ಎಲ್ಲಾ ಯುವಕ, ಯುವತಿಯರು ಸಂಘ-ಸಂಸ್ಥೆಗಳ ಪ್ರತಿನಿಧಿಗಳು, ಶಾಲಾ, ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಬಹುದು. ಸ್ಪರ್ಧೆಗಳು ಯುವಕ, ಯುವತಿಯರಿಗೆ ಪ್ರತ್ಯೇಕವಾಗಿರುವುದಿಲ್ಲ. ಮಧ್ಯಾಹ್ನದ ಲಘು ಉಪಹಾರ ಇರುತ್ತದೆ. ಸ್ಪರ್ಧಿಗಳಿಗೆ ಪ್ರಯಾಣ ಭತ್ಯೆಯನ್ನು ನೀಡಲಾಗುತ್ತಿದ್ದು ಬ್ಯಾಂಕ್ ಖಾತೆಯ ಜೆರಾಕ್ಸ್ ಪ್ರತಿಯನ್ನು ತರಬೇಕು.

ವಿಜೇತರಿಗೆ ವಿಜಯಫಲಕ ಮತ್ತು ಪ್ರಶಸ್ತಿ ಪತ್ರಗಳು ಹಾಗೂ ನಗದು ಬಹುಮಾನ ನೀಡಲಾಗುತ್ತದೆ. ನೆಹರು ಯುವ ಕೇಂದ್ರ ವತಿಯಿಂದಲೂ ಸಹ ನಗದು ಬಹುಮಾನವನ್ನು ನೀಡುವುದರಿಂದ ಬ್ಯಾಂಕ್ ಖಾತೆಯ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ತರಬೇಕು.


ಡಿಸೆಂಬರ್ 13 ರಂದು ಬೆಳಿಗ್ಗೆ 9.30 ಗಂಟೆಯೊಳಗೆ ನಗರದ ಡಾ. ಬಿ.ಆರ್ ಅಂಬೇಡ್ಕರ್ ಭವನದಲ್ಲಿ ವರದಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ 08226-224932 ಅಥವಾ ಮೊ.ಸಂ 9380523132, 9880211027, 9844160841, 9916466659, 9844242672 ಅನ್ನು ಸಂಪರ್ಕಿಸಬಹುದೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ

## ಮಾಜಿ ಮುಖ್ಯಮಂತ್ರಿ ಎಸ್.ಎಂ ಕೃಷ್ಣರ ನಿಧನಕ್ಕೆ ಕಂಬನಿ

**ಹೊಸಕೋಟೆ:** ಕರ್ನಾಟಕ ರಾಜ್ಯ ಕಂಡ ಮುತ್ಸದ್ದಿ ರಾಜಕಾರಣಿ, ಶಿಸ್ತು ಹಾಗೂ ಪ್ರಬುದ್ಧ ಆಡಳಿತಕ್ಕೆ ಮಾದರಿಯಾಗಿದ್ದ, ನಾಡಿನ ಇತಿಹಾಸದಲ್ಲಿ ತಮ್ಮ ಸಜ್ಜನಿಕೆ ಹಾಗೂ ಘನತೆಯ ನಡವಳಿಕೆಯಿಂದ ವಿಶೇಷ ಛಾಪು ಮೂಡಿಸಿದ್ದ, ಮುಖ್ಯ ಮಂತ್ರಿಗಳಾಗಿ, ವಿಧಾನಸಭೆ ಸ್ಪೀಕರ್ ಆಗಿ ಕೇಂದ್ರದ ಸಚಿವರಾಗಿ ಮಹಾರಾಷ್ಟ್ರ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರಾದ ಎಸ್.ಎಂ ಕೃಷ್ಣ ರವರು ಇನ್ನಿಲ್ಲವಾಗಿರುವ ಸುದ್ದಿ ಅತ್ಯಂತ ನೋವು ತಂದಿದೆ ಎಂದು ವಿಧಾನ ಪರಿಷತ್ ಸದಸ್ಯರಾದ ಎಂಟಿಬಿ ನಾಗರಾಜ್ ತಮ್ಮ ಸಂತಾಪ ವ್ಯಕ್ತಪಡಿಸಿದ್ದಾರೆ. ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಮಹತ್ವದ ಹುದ್ದೆಗಳನ್ನು ಅಲಂಕರಿಸಿ ಇತಿಹಾಸದಲ್ಲಿ ತಮ್ಮ ಶಾಶ್ವತ ಹೆಜ್ಜೆ ಗುರುತು ಮೂಡಿಸಿರುವ ಹೆಮ್ಮೆಯ ಕನ್ನಡಿಗ ಎಸ್.ಎಂ ಕೃಷ್ಣರವರು ಮುಖ್ಯ ಮಂತ್ರಿಗಳಾಗಿ ಕರ್ನಾಟಕದ ಅಭಿವೃದ್ಧಿಗೆ ಅದರಲ್ಲೂ ಬೆಂಗಳೂರನ್ನು ಸಿಲಿಕಾನ್ ಸಿಟಿ ಎನಿಸಿಕೊಳ್ಳಲು ಕೊಟ್ಟ ಕೊಡುಗೆ ಎಂದೆಂದಿಗೂ ಮರೆಯಲಾಗದು. ಮೃತರ ಆತ್ಮಕ್ಕೆ ಹಾಗೂ ಕುಟುಂಬದ ಸದಸ್ಯರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ ಎಂದಿದ್ದಾರೆ.


# ಭೂಲ್ ಭುಲಯ್ಯ 4 ಚಿತ್ರದಲ್ಲಿ ಅಕ್ಷಯ್

'ಭೂಲ್ ಭುಲಯ್ಯ 3' ಸಿನಿಮಾ ವಿಮರ್ಶಕರಿಂದ ಸಾಧಾರಣ ಮೆಚ್ಚುಗೆ ಪಡೆಯಿತು. ಆದರೆ, ಈ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿ ಗಳಿಕೆ ಮಾಡಿತು. ಇದರಿಂದ ನಿರ್ಮಾಪಕರು ಸೇಫ್ ಆಗಿದ್ದಾರೆ. ಹಾಕಿದ ದುಡ್ಡಿಗೆ ಅವರಿಗೆ ಮೋಸ ಆಗಿಲ್ಲ. ಹಿಗಿರುವಾಗಲೇ 'ಭೂಲ್ ಭುಲಯ್ಯ 4' ಸಿನಿಮಾ ಬಗ್ಗೆ ಚರ್ಚೆ ನಡೆದಿದೆ. 'ಭೂಲ್ ಭುಲಯ್ಯ 3' ಸಿನಿಮಾದಲ್ಲಿ ವಿದ್ಯಾ ಬಾಲನ್ ಆಗಮನ ಆಗಿತ್ತು. ನಾಲ್ಕನೇ ಭಾಗದಲ್ಲಿ ಅಕ್ಷಯ್ ಮರಳುತ್ತಾರಾ ಎನ್ನುವ ಪ್ರಶ್ನೆ ಮೂಡಿದೆ. ಇದಕ್ಕೆ ಈಗ ಉತ್ತರ ಸಿಕ್ಕಿದೆ.



ಅಕ್ಷಯ್ ಕುಮಾರ್ ಅವರು 'ಭೂಲ್ ಭುಲಯ್ಯ' ಸಿನಿಮಾದಲ್ಲಿ ಮುಖ್ಯ ಭೂಮಿಕೆ ನಿರ್ವಹಿಸಿದ್ದರು. ಎರಡು ಹಾಗೂ ಮೂರನೇ ಭಾಗದಲ್ಲಿ ಅಕ್ಷಯ್ ಕುಮಾರ್ ಇರಲಿಲ್ಲ. ಕಾರ್ತಿಕ್ ಆರ್ಯನ್ ಅವರು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡರು. ಈಗ ನಾಲ್ಕನೇ ಭಾಗದಲ್ಲಿ ಅಕ್ಷಯ್ ಅವರು ಮರಳುತ್ತಾರಾ ಎನ್ನುವ ಪ್ರಶ್ನೆ ಕಾಡಿದೆ. ಇದಕ್ಕೆ ನಿರ್ದೇಶಕ ಅನೀಸ್ ಬಾಜ್ಮೀ ಪ್ರತಿಕ್ರಿಯಿಸಿದ್ದಾರೆ. ಅನೀಸ್ ಹಾಗೂ ಅಕ್ಷಯ್ ಮಧ್ಯೆ ಒಳ್ಳೆಯ ಫ್ರೆಂಡ್ಶಿಪ್ ಇದೆ. ಅಕ್ಷಯ್ ಅವರ ಮರು ಆಗಮನದ ಬಗ್ಗೆ ಅವರು ಮಾತನಾಡಿದ್ದಾರೆ. 'ಅಕ್ಷಯ್ ಕುಮಾರ್ ಜೊತೆ ಒಳ್ಳೆಯ ಗೆಳೆತನ, ಪ್ರೀತಿ ಎಲ್ಲವೂ ಇದೆ. ಆದರೆ, ಕಥೆ ಸೆಟ್ ಆಗಬೇಕು. ಅವರ ಜೊತೆ ಕೆಲಸ ಮಾಡಬೇಕು ಎಂಬ ಆಸೆ ಇದೆ' ಎಂದಿದ್ದಾರೆ ಅವರು 'ಭೂಲ್ ಭುಲಯ್ಯ 3' ಸಿನಿಮಾಗೆ ಕಾರ್ತಿಕ್ ಆರ್ಯನ್ ಹೀರೋ. ವಿದ್ಯಾ ಬಾಲನ್, ಮಾಧುರಿ ದೀಕ್ಷಿತ್, ತ್ರಿಪ್ತಿ ದಿಮ್ರಿ ಮುಖ್ಯಭೂಮಿಕೆಯಲ್ಲಿದ್ದಾರೆ. ಈ ಸಿನಿಮಾ 400 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. ಈ ಸಿನಿಮಾ ಭರ್ಜರಿ ಕಲೆಕ್ಷನ್ ಮಾಡಿ ಒಟಿಟಿಯಲ್ಲಿ ಬರೋಕೆ ಸಿನಿಮಾ ಸಿದ್ಧವಾಗಿದೆ. ಅನೀಸ್ ಬಾಜ್ಮೀ ಅವರು 'ಭೂಲ್ ಭುಲಯ್ಯ 3' ಸಿನಿಮಾ ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾ 'ಸಿಂಗಂ ಅಗೇನ್' ಚಿತ್ರ ಕೂಡ ರಿಲೀಸ್ ಆಗಿತ್ತು. ಈ ಸಿನಿಮಾ ಕೂಡ ಮೆಚ್ಚುಗೆ ಪಡೆಯಿತು. ಬಾಕ್ಸ್ ಆಫೀಸ್‌ನಲ್ಲಿ ಎರಡೂ ಸಿನಿಮಾಗಳು ಗೆದ್ದಿವೆ.

# ಅನುಶ್ರೀಗೆ ಗುಟ್ಟು ಹೇಳಿದ ಉಪೇಂದ್ರ!



ಸ್ಯಾಂಡಲ್‌ವುಡ್ ನಟ–ನಿರ್ದೇಶಕ, ರಿಯಲ್ ಸ್ಟಾರ್ ಖ್ಯಾತಿಯ ಉಪೇಂದ್ರ ಅವರು ಸದ್ಯ 'ಯುಐ' ಸಿನಿಮಾ ಬಿಡುಗಡೆ ಹೊಸ್ತಿಲಲ್ಲಿದ್ದಾರೆ. ಆಂಕರ್ ಅನುಶ್ರೀ ಬಳಿ ಸಂದರ್ಶನವೊಂದರಲ್ಲಿ ಉಪೇಂದ್ರ ಮಾತನಾಡಿರುವ ಹಳೆಯ ವಿಡಿಯೋವೊಂದು ಸೋಷಿಯಲ್ ಮೀಡಿಯಾದಲ್ಲಿ ಭಾರೀ ವೈರಲ್ ಆಗುತ್ತಿದ್ದು, ಬಹಳಷ್ಟು ಲೈಕ್ಸ್ ಡಪೆಯುತ್ತಿದೆ. ಅದರಲ್ಲಿ ಅವರು ಯಾರ ಬಗ್ಗೆ ಮಾತನ್ನಾಡಿದ್ದಾರೆ, ಅದೇನು ಹೇಳಿದ್ದಾರೆ ಎಂಬ ಕುತೂಹಲಕ್ಕೆ ಮುಂದಿನ ಸ್ಟೋರಿ ನೋಡಿ..

'ನಿನಗೇ ಅನಿವಾರ್ಯತೆ ಬಂದ್ರೆ ಕಲಿತೀಯಾ ನೀನು.. ನಾನ್ಯಾರು ನಿಂಗೆ ಕಲಿಸೋಕೆ ಅಂತ.. ತುಂಬಾ ಟ್ರೂಥ್‌ಫುಲ್ ಅವ್ರು ನಿಜ ಹೇಳ್ಬೇಕು ಅಂದ್ರೆ.. ನಿಮ್ಗೆ ನಿಜ ಹೇಳ್ಬೇಕು ಅಂದ್ರೆ ನಮ್ ಸಿನಿಮಾದಲ್ಲಿನಾನು ಕ್ಯಾರೆಕ್ಟರ್ ಎಲ್ಲಾ ಸುಮ್ನೆ ಬಂದಿದ್ದಲ್ಲ, ಅವ್ರು ಹಾಗೇನೇ ಇದ್ರು.. ಪೇಶನ್ಸ್ ಅಂದ್ರೆ ಅಲ್ಟಿಮೇಟ್ ಪೇಶನ್ಸ್.. ಯಾರೋ ಒಬ್ಬ ಬಂದ ಕರಾಬ್ ಆಗಿ ಅವ್ರ ಮನೆಗೆ.. ಹೇಗಿತ್ತು ಅಂದ್ರೆ, ಅವ್ರ ಮನೆಗೆ ಯಾರು ಬೇಕಾದ್ರೂ ಯಾವಾಗ ಬೇಕಾದ್ರೂ ಬರಬಹುದು, ಹೋಗಬಹುದು ಅನ್ನೋ ತರ ಇತ್ತು..


ಸೆಕ್ಯೂರಿಟಿ ಏನೂ ಇರ್ಲಿಲ್ಲ ಅವ್ರ ಮನೆಗೆ.. ನಾನೊಬ್ನೇ ಕೂತಿದ್ದೆ ಅವ್ರ ಜೊತೆನಲ್ಲಿ, ಒಬ್ಬ ಬಂದ ಡೈರೆಕ್ಟ್ಾಗಿ, ಹೀಗೆ ವಾರ್ನ್ ಮಾಡಿದ.. 'ನಂಗೆ ನಾಳೆ ಹತ್ತು ಸಾವಿರ ರೂಪಾಯಿ ಕೊಡ್ಬೇಕು ನೀನು.. ಕೊಡ್ಲಿಲ್ಲ ಅಂದ್ರೆ ಆಸಿಡ್ ಹಾಕ್ತೀನಿ ನಿಂಗೆ.. ' ಅಂದ. ನಂಗೆ ಫುಲ್ ಶಾಕ್ ಆಗೋಯ್ತು.. ನಾನು ಆಗ ಕಾಲೇಜು ಓದ್ತಾ ಇದ್ದೆ.. ಫುಲ್ ಜೋಶ್ ಬೇರೆ.. ಹುಡುಗ್ರ ಕರ್ಕೊಂಡು ಬರ್ತೀನಿ ಅಂತ ಹೇಳ್ದೆ.. ಪೊಲೀಸ್ ಕಂಪ್ಲೇಂಟ್ ಕೊಡ್ತೀನಿ, ಹುಡುಗ್ರ ಕರ್ಕೊಂಡು ನಿಮ್ಮನೆಗೆ ಬರ್ತೀನಿ' ಅಂದೆ.

ಅವ್ರು ತುಂಬಾ ಸಹನೆಯಿಂದ 'ಅವೆಲ್ಲಾ ಬೇಡ' ಅನ್ನೋ ತರಹ ಕೈ ಸನ್ನೆ ಮಾಡಿದ್ರು.. ಮಾರನೇ ದಿನ ನಾನು ಅವ್ರ ಮನೆಗೆ ಬೇಗ ಹೋದೆ.. ಹೋದವ್ನೇ 'ಏನ್ ಸರ್, ಹತ್ತು ಗಂಟೆಗೆ ಬರ್ತೀನಿ ಅಂದವ್ನೇ' ಅಂದೆ.. ಆದ್ರೂ ಅವ್ರು ಸುಮ್ನೇ ಇದ್ದರು.. ಗೇಟ್ ಹಾಗೂ ಡೋರ್ ಯಾವತ್ತಿನ ತರಹ ತೆರೆದೇ ಇತ್ತು.. ಮನೆ ಒಳಕ್ಕೆ ಸುಮ್ಮನೇ ಕೂತಿದಾರೆ.. ನನ್ನ ಹತ್ರ 'ನೀನೇನೂ ಮಾತಾಡ್ಬೇಡ, ಅವ್ನು ಬರ್ಲಿ..' ಅಂದ್ರು.

ಬಂದ ಹತ್ತು ಗಂಟಗೆ ಸರಿಯಾಗಿ ಬಾಟ್ಲಿನಲ್ಲಿ ಆಸಿಡ್ ಹಿಡ್ಕೊಂಡೇ ಬಂದ.. ಬಂದವ್ನೇ ಅವ್ರ ಎದುರು ಬಂದು ಬಾಟಲಿ ಹಿಡ್ಕೊಂಡೇ ನಿಂತ.. 'ನಾನು ಕೊಡಲ್ಲ, ಆಸಿಡ್ ಹಾಕು' ಅಂದ್ರು.. ಅವ್ನು ಹಂಗೇ ನೋಡಿದ ಅವ್ರನ್ನ, ಆ ಕಡೆ ಈ ಕಡೆ ನೋಡಿ ಹಂಗೇ ಹೊರಟು ಹೋದ.. ಇವ್ರು ಸ್ವಲ್ಪನೂ ವಿಚಲಿತರಾಗೇ ಇಲ್ಲ.. ಎಂಥ ಟೈಮಲ್ಲೂ ಸಹನೆ ಕಳ್ಕೊಳ್ಳೋದೇ ಗೊತ್ತಿರ್ಲಿಲ್ಲ ಅವ್ರಿಗೆ.. 'ಅವ್ನು ಹೋದ ಬಳಿಕ, ಯಾವತ್ತಿನಂತೆ, 'ಬಾ, ಕೆಲಸ ಮಾಡೋಣ..' ಅಂತ ಅಂದು ನಾರ್ಮಲ್ ಆಗೇ ಇದ್ರು..' ಅಂದಿದ್ದಾರೆ ನಟ ಉಪೇಂದ್ರ.

ತಮ್ಮ ಗುರುಗಳು ಕಾಶೀನಾಥ್ ಬಗ್ಗೆ ನಟ–ನಿರ್ದೇಶಕ ರಿಯಲ್ ಸ್ಟಾರ್ ಉಪೇಂದ್ರ ಅವರು ತಮ್ಮ ಎದುರು ಕುಳಿತು ಹೇಳುತ್ತಿದ್ದರೆ ಪಟ್ ಪಟಾಕಿ ಆಂಕರ್ ಅನುಶ್ರೀ ಅವರು 'ಮೂಕ ವಿಸ್ಮಿತೆ' ಎಂಬಂತೆ ಅಚ್ಚರಿಯಿಂದ ಕೇಳಿಸಿಕೊಳ್ಳುತ್ತಿದ್ದರು. ಮಧ್ಯೆ ಮಧ್ಯೆ 'ಹೌದಾ, ಹಾಗಾ, ಚೂರೂ ಭಯ ಆಗಿಲ್ವ ಅವ್ರಿಗೆ' ಹೀಗೆ ಆಶ್ಚರ್ಯ ವ್ಯಕ್ತಪಡಿಸುತ್ತ ಅನುಶ್ರೀ ಕೇಳುತ್ತಿದ್ದರೆ ಆ ವಿಡಿಯೋ ನೋಡುತ್ತಿರುವವರು 'ಘೋರ ಚಳಿಯಲ್ಲೂ ಬೆವರುವುದು ಪಕ್ಕಾ' ಎಂಬಂತೆ ನೈಜ ಸಂಗತಿ ಹೇಳುತ್ತಿದ್ದರು ಉಪೇಂದ್ರ!

# ಖಡಕ್ ಡೈಲಾಗ್ ಹೇಳಿದ ಸುಬ್ಬಿ



ಝೀ ಕನ್ನಡದ ಸೀತಾ ರಾಮ ಸೀರಿಯಲ್ ನಲ್ಲಿ ಸಿಹಿ ಸಾವಿನ ಕಥೆ ವೀಕ್ಷಕರನ್ನು ಭಾವುಕಗೊಳಿಸಿತ್ತು. ಸೀರಿಯಲ್ ಸಿಹಿಯಿಲ್ಲದೆ ಸಪ್ಪೆಯಾಗಿತ್ತು. ಆದ್ರೀಗ ಸುಬ್ಬಿ ಆಟ ಶುರುವಾಗಿದೆ. ಸಿಹಿ ಬದಲು ಸುಬ್ಬಿ ಎಂಟ್ರಿಕೊಟ್ಟಿದ್ದಾಳೆ. ಸಿಹಿ ಆತ್ಮ ಹಾಗೂ ಸುಬ್ಬಿ ಇಬ್ಬರನ್ನೂ ವೀಕ್ಷಕರು ನೋಡುವ ಅವಕಾಶ ಸಿಗ್ತಿದೆ. ಸಿಹಿಯನ್ನೇ ಹೋಲುವ ಸುಬ್ಬಿ ಈ ಹಿಂದೆ ತನ್ನ ಒಂದು ಝಲಕ್ ತೋರಿಸಿ ಹೋಗಿದ್ದಳು. ಈಗ ಖಡಕ್ ಲುಕ್ ಜೊತೆ ಸುಬ್ಬಿಯ ಎಂಟ್ರಿಯಾಗಿದೆ.

ಝೀ ಕನ್ನಡ ಬಿಡುಗಡೆ ಮಾಡಿದ್ದು, ಶುರುವಾಯ್ತು ಸುಬ್ಬಿ ಆಟ, ಇಷ್ಟು ದಿನ ಒಂದು ಲೆಕ್ಕ, ಇನ್ಮುಂದೆ ಇರೋ ಲೆಕ್ಕನೇ ಬೇರೆ ಎಂದು ಶೀರ್ಷಿಕೆ ಹಾಕಿದೆ. ಈ ಪ್ರೋಮೋದಲ್ಲಿ ಸುಬ್ಬಿ ಎರಡು ಜುಟ್ಟು ಕಟ್ಕೊಂಡು, ಫ್ರಾಕ್ ಧರಿಸಿ, ಹೊಸ ಸ್ಟೈಲ್ ನಲ್ಲಿ ಬಂದಿದ್ದಲ್ಲದೆ, ರೌಡಿಗೆ ನಮಸ್ಕಾರ ಅಣ್ಣ ಎನ್ನುತ್ತಾಳೆ. ಅದಕ್ಕೆ ರೌಡಿ ರೆಸ್ಪಾನ್ಸ್ ಮಾಡಿಲ್ಲ ಅಂತ, ಸುಬ್ಬಿ ಅವಾಜ್ ಹಾಕಿದ್ದಾಳೆ. ನಮಸ್ಕಾರ ಅಂದ್ರೆ ವಾಪಸ್ ನಮಸ್ಕಾರ ಅಂತ ಹೇಳೋಕೆ ಗೊತ್ತಾಗಲ್ವಾ ಎಂದ ಸುಬ್ಬಿ, ಅಕ್ಕನ ಎಚ್ಚರಿಕೆ ಮಾತಿಗೂ ಹೆದರೋದಿಲ್ಲ. ಥೋಟ್ ಮೆಣಸಿನಕಾಯಿ ಅಂತ ರೌಡಿ ಕೂಗಾಡ್ತಿದ್ದಂತೆ ಕೋಪಗೊಳ್ಳುವ ಸುದ್ದಿ ಥೋಟ್ ಮೆಣಸಿನಕಾಯಿ ಅಲ್ಲ, ನನ್ನ ಹೆಸರು ಸುಬ್ಬಿ ಎನ್ನುತ್ತಾಳೆ. ಬುಲ್ಡೋಜರ್ ಹತ್ತಿರ ಬಂದ್ರೂ ಭಯಗೊಳ್ಳದೆ ಧೈರ್ಯವಾಗಿ ನಿಲ್ಲುವ ಸುಬ್ಬಿ, ಅದ್ರ ಮೇಲೆ ಹತ್ತಿ ಅಬ್ಬರಿಸ್ತಾಳೆ.

ಈ ಪ್ರೋಮೋ ನೋಡಿದ ಫ್ಯಾನ್ಸ್ , ಸುಬ್ಬಿಯನ್ನು ಸ್ವಾಗತಿಸಿದ್ದಾರೆ. ಆದ್ರೆ ಸುಬ್ಬಿಯದ್ದು ಸ್ವಲ್ಪ ಓವರ್ ಆಕ್ಟಿಂಗ್ ಆಯ್ತು ಎನ್ನುವ ಅಭಿಪ್ರಾಯ ಕೇಳಿ ಬಂದಿದೆ. ಮಕ್ಕಳ ಕ್ಯಾರೆಕ್ಟರ್ ಗಿಂತ ಹೆಚ್ಚಾಯ್ತು ಸುಬ್ಬಿ ಆಕ್ಟಿಂಗ್, ಇಷ್ಟೊಂದು ಅವಶ್ಯಕತೆ ಇರಲಿಲ್ಲ ಎನ್ನುತ್ತಿದ್ದಾರೆ ಫ್ಯಾನ್ಸ್. ಸಿಹಿಯನ್ನೂ ಆರಂಭದಲ್ಲಿ ಹೀಗೆ ತೋರಿಸಿ, ಅವಳ ಕಥೆ ಮುಗಿಸಿದ್ದಾರೆ. ಈಗ ಸುಬ್ಬಿ ಸರದಿ. ಇಷ್ಟೊಂದು ಬಿಲ್ಡಪ್ ನೀಡಿ ನಂತ್ರ ಆಕೆ ಕಥೆಯನ್ನೂ ಮುಗಿಸಿದ್ರೆ ಎಂದು ವೀಕ್ಷಕರು ಕಮೆಂಟ್ ಮಾಡಿದ್ದಾರೆ. ಇಷ್ಟು ಓವರ್ ಆಕ್ಟಿಂಗ್ ಡೈಲಾಗ್ ಮಾಡ್ಸಿ ಮಕ್ಕಳಿಗೆ ಏನು ಕಲಿಸ್ಬೇಕು ಅಂತಿದ್ದೀರಾ, ಬುದ್ಧಿ ಇಲ್ವಾ ಡೈರೆಕ್ಟರ್ ನಿಮ್ಗೆ, ಈ ತರ ಅಧಿಕಪ್ರಸಂಗ ಯಾವ ಮಕ್ಕಳು ಮಾಡ್ತಾರೆ,ಇದನ್ನು ನೋಡಿ ಮಕ್ಕಳೂ ಇದೇ ರೀತಿ ಮಾತನಾಡ್ತಾರೆ, ಮಕ್ಕಳ ರಕ್ಷಣಾ ವೇದಿಕೆ ಈಗ ಎಲ್ಲಿದೆ, ಮಕ್ಕಳ ಮುಗ್ಧತೆನಾ ಮಿಸ್ ಯುಸ್ ಮಾಡಿಕೊಳ್ಳಲಾಗ್ತಿದೆ ಎಂದು ಒಬ್ಬರು ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ.

ಸೀತಾರಾಮ ಸೀರಿಯಲ್ ನಲ್ಲಿ ಸೀತಾ ಹಾಗೂ ರಾಮ ಮುಖ್ಯ ಪಾತ್ರದಲ್ಲಿದ್ರೂ ಈಗ ಸಿಹಿ ಮತ್ತು ಸುಬ್ಬಿಯದ್ದೇ ಹವಾ. ಸಿಹಿ ಸಾವಿಗೆ ನ್ಯಾಯ ಸಿಗಬೇಕೇ ವಿನಃ ಸುಬ್ಬಿ ಅವಶ್ಯಕತೆ ಇರಲಿಲ್ಲ ಎಂದು ನಿರ್ದೇಶಕರಿಗೆ ವೀಕ್ಷಕರು ಸಲಹೆ ನೀಡಿದ್ದಾರೆ. ಮತ್ತೆ ಕೆಲವರಿಗೆ ಸುಬ್ಬಿ ಹಾಗೂ ಸಿಹಿಯನ್ನು ಒಟ್ಟಿಗೆ ನೋಡ್ತೇವೆ ಎಂಬ ಖುಷಿ ಇದೆ. ಸಿಹಿಯನ್ನು ಸಾಯಿಸದೆ ಸುಬ್ಬಿ ಎಂಟ್ರಿಯಾಗಿದ್ರೆ ಮತ್ತಷ್ಟು ಮಜವಾಗಿರುತ್ತಿತ್ತು ಎಂದ ಫ್ಯಾನ್ಸ್, ಸುಬ್ಬಿಯಾದ್ರೂ ಸೀತಾಗೆ ನ್ಯಾಯ ಕೊಡಿಸ್ತಾಳಾ ನೋಡೋಣ ಎಂದಿದ್ದಾರೆ. ಭಾರ್ಗವಿ ಕುತಂತ್ರದಿಂದ ಸಿಹಿ ಸಾವನ್ನಪ್ಪಿದ್ದಾಳೆ. ಮಗಳಿಲ್ಲದೆ ಸೀತಾ ಹುಚ್ಚಿಯಾಗ್ತಿದ್ದಾಳೆ. ಸಿಹಿ, ಸುಬ್ಬಿ ಮನವೊಲಿಸಿ ಹೇಗೆ ಸೀತಾ ಬಳಿ ಕರೆದುಕೊಂಡು ಬರ್ತಾಳೆ, ಭಾರ್ಗವಿಗೆ ಹೇಗೆ ಬುದ್ಧಿ ಕಲಿಸ್ತಾಳೆ ಕಾದು ನೋಡ್ಬೇಕಿದೆ.

# ಮತ್ತೆ ಹಾಲಿವುಡ್‌ಗೆ ಧನುಶ್





ತಮಿಳಿನ ಸ್ಟಾರ್ ನಟ ಧನುಶ್‌ಗೆ ಅಸಲಿಗೆ ಭಾಷೆಯ ಗಡಿಗಳಿಲ್ಲ. ತಮಿಳು ನಟರಾಗಿದ್ದರೂ ಸಹ ಬಾಲಿವುಡ್ ಸಿನಿಮಾಗಳಲ್ಲಿ ನಟಿಸಿ ದೊಡ್ಡ ಹಿಟ್ ಸಿನಿಮಾಗಳನ್ನು ನೀಡಿದ್ದಾರೆ. ಧನುಶ್ ಹಾಲಿವುಡ್ ನಲ್ಲಿ ಸ್ಟಾರ್ ನಟರುಗಳೊಟ್ಟಿಗೆ ಈಗಾಗಲೇ ನಟಿಸಿ ಬಂದಿದ್ದಾರೆ. ಹಾಲಿವುಡ್‌ನಲ್ಲಿ ಒಂದು ಸೋಲೋ ಹೀರೋ ಸಿನಿಮಾದಲ್ಲಿ ಸಹ ನಟಿಸಿದ್ದಾರೆ. ಇದೀಗ ಧನುಶ್ ಮತ್ತೊಮ್ಮೆ ಹಾಲಿವುಡ್‌ಗೆ ಹಾರಲಿದ್ದಾರೆ. ಈ ಬಾರಿ ಖ್ಯಾತ ನಟಿಯ ಎದುರು ನಾಯಕನಾಗಿ ನಟಿಸಲಿದ್ದಾರೆ ಧನುಶ್.

2019 ರಲ್ಲಿ ಬಿಡುಗಡೆ ಆದ 'ದಿ ಎಕ್ಸಾರ್ಡಿನರಿ ಜರ್ನಿ ಆಫ್ ಎ ಫಕೀರ್' ಹೆಸರಿನ ಇಂಗ್ಲೀಷ್ ಸಿನಿಮಾನಲ್ಲಿ ಧನುಶ್ ನಟಿಸಿದ್ದರು. ಅದಾದ ಬಳಿಕ ಮಾರ್ವೆಲ್ ಖ್ಯಾತಿಯ ರೋಸ್ಸೊ ಬ್ರದರ್ಸ್ ನಿರ್ದೇಶನ ಮಾಡಿ, ನಿರ್ಮಾಣವೂ ಮಾಡಿದ್ದ, ಹಾಲಿವುಡ್‌ನ ದೊಡ್ಡ ಸ್ಟಾರ್ ನಟರು ನಟಿಸಿದ್ದ 'ದಿ ಗ್ರೇ ಮ್ಯಾನ್' ಸಿನಿಮಾದ ಪವರ್‌ಫುಲ್ ಪಾತ್ರವೊಂದರಲ್ಲಿ ಧನುಶ್ ನಟಿಸಿದ್ದರು. ಇದೀಗ ಮೂರನೇ ಬಾರಿಗೆ ಧನುಶ್ ಹಾಲಿವುಡ್‌ಗೆ ಹೊರಟಿದ್ದಾರೆ.

ಧನುಶ್, 'ಸ್ಟ್ರೀಟ್ ಫೈಟರ್' ಹೆಸರಿನ ಹಾಲಿವುಡ್ ಸಿನಿಮಾದಲ್ಲಿ ನಟಿಸಲಿದ್ದಾರೆ. ಸಿನಿಮಾವನ್ನು ಸೋನಿ ನಿರ್ಮಾಣ ಮಾಡಲಿದ್ದು, ಹಾಲಿವುಡ್‌ನ ಜನಪ್ರಿಯ ನಿರ್ದೇಶಕರೊಬ್ಬರು ನಿರ್ದೇಶನ ಮಾಡಲಿದ್ದಾರೆ. ಸಿನಿಮಾದಲ್ಲಿ ನಾಯಕಿಯಾಗಿ ಹಾಲಿವುಡ್ ಖ್ಯಾತ ನಟಿ ಸಿಡ್ನಿ ಸ್ವೀನಿ ನಟಿಸಲಿದ್ದಾರೆ. ಕ್ವಿಂಟನ್ ಟೆರಂಟೀನೊ ನಿರ್ದೇಶನದ 'ಒನ್ಸ್ ಅಪಾನ್ ಎ ಟೈಂ ಇನ್ ಹಾಲಿವುಡ್' ಸಿನಿಮಾ ಸೇರಿದಂತೆ ಹಲವು ಜನಪ್ರಿಯ ಹಾಲಿವುಡ್ ಸಿನಿಮಾಗಳಲ್ಲಿ ನಟಿಸಿದ್ದಾರೆ.

ಧನುಶ್ ಪ್ರಸ್ತುತ 'ಕುಬೇರ' ಸಿನಿಮಾದಲ್ಲಿ ಬ್ಯುಸಿಯಾಗಿದ್ದಾರೆ. ಸಿನಿಮಾವನ್ನು ಶೇಖರ್ ಕಮ್ಮುಲ ನಿರ್ದೇಶನ ಮಾಡುತ್ತಿದ್ದು, ಸಿನಿಮಾದಲ್ಲಿ ನಾಗಾರ್ಜುನ ಮತ್ತು ರಶ್ಮಿಕಾ ಮಂದಣ್ಣ ಸಹ ಇದ್ದಾರೆ. ಧನುಶ್ 'ಇಡ್ಲಿ ಕಡೈ' ಹೆಸರಿನ ಸಿನಿಮಾ ನಿರ್ದೇಶನ ಸಹ ಮಾಡುತ್ತಿದ್ದಾರೆ. ಇಳಯರಾಜ ಜೀವನ ಆಧರಿಸಿದ ಸಿನಿಮಾದಲ್ಲಿಯೂ ಧನುಶ್ ನಟಿಸಲಿದ್ದು, ಸಿನಿಮಾವನ್ನು ಅರುಲ್ ಮಟ್ಟೇಶ್ವರನ್ ನಿರ್ದೇಶನ ಮಾಡಲಿದ್ದಾರೆ. ಹಿಂದಿಯಲ್ಲಿ ಸಹ ಒಂದು ಸಿನಿಮಾ ಮಾಡುತ್ತಿದ್ದು, 'ರಾಂಝುನಾ' ಮಾಡಿದ್ದ ತಂಡವೇ ಈ ಸಿನಿಮಾಕ್ಕಾಗಿ ಮತ್ತೆ ಒಟ್ಟಿಗೆ ಸೇರಿದೆ.

# ಕರ್ನಾಟಕ ತಂಡದಲ್ಲಿ ಮನೀಶ್ ಯುಗಾಂತ್ಯ



ವಿಜಯ ಹಝಾರೆ ಟೂರ್ನಿಗಾಗಿ ಕರ್ನಾಟಕ ತಂಡದ ಸಂಭಾವ್ಯ ಆಟಗಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ. 32 ಸದಸ್ಯರ ಈ ಬಳಗದಿಂದ ಅನುಭವಿ ಬ್ಯಾಟರ್ ಮನೀಶ್ ಪಾಂಡೆಯನ್ನು ಹೊರಗಿಡಲಾಗಿದೆ. ಇದರೊಂದಿಗೆ ಕರ್ನಾಟಕ ತಂಡದಲ್ಲಿ ಪಾಂಡ್ಯ ಯುಗಾಂತ್ಯವಾಗಿರುವುದು ಖಚಿತವಾಗಿದೆ. ಮುಂಬರುವ ವಿಜಯ ಹಝಾರೆ ಹಾಗೂ ರಣಜಿ ಟೂರ್ನಿಯಲ್ಲಿ ಮನೀಶ್ ಪಾಂಡೆ ಕರ್ನಾಟಕ ಪರ ಕಣಕ್ಕಿಳಿಯುವುದಿಲ್ಲ. ಯುವ ಆಟಗಾರರಿಗೆ ಹೆಚ್ಚಿನ ಅವಕಾಶ ನೀಡುವ ಸಲುವಾಗಿ 35 ವರ್ಷದ ಪಾಂಡೆ ಅವರನ್ನು ತಂಡದಿಂದ ಹೊರಗಿಡಲಾಗಿದೆ ಎಂದು ಕೆಎಸ್‌ಸಿಎ ಆಯ್ಕೆ ಸಮಿತಿ ಅಧ್ಯಕ್ಷ ಜೆ.ಅಭಿರಾಮ್ ತಿಳಿಸಿದ್ದಾರೆ. ಮನೀಶ್ ಪಾಂಡೆ ಅದ್ಭುತ ವೃತ್ತಿಜೀವನವನ್ನು ಹೊಂದಿದ್ದಾರೆ. ಅದರ ಬಗ್ಗೆ ಸಂದೇಹವಿಲ್ಲ. ಆದರೆ ಕೆಲವು ಹಂತದಲ್ಲಿ, ನೀವು ಯುವಕರಿಗೆ ದಾರಿ ಮಾಡಿಕೊಡಬೇಕಾಗುತ್ತದೆ. ನಮ್ಮಲ್ಲಿ ಕೆಲವು ಅತ್ಯಾಕರ್ಷಕ ಯುವ ಬ್ಯಾಟರ್‌ಗಳಿದ್ದಾರೆ. ಪ್ರಖರ್ ಚತುರ್ವೇದಿ, ಅನೀಶ್ವರ್ ಗೌತಮ್, ಕೆವಿ ಅನೀಶ್, ಇವರಿಗೆ ಹೆಚ್ಚು ಅವಕಾಶಗಳು ಸಿಕ್ಕಷ್ಟು ಉತ್ತಮ ಎಂದು ಅಭಿರಾಮ್ ಸ್ಪೋರ್ಟ್‌ಸ್ಟಾರ್‌ಗೆ ತಿಳಿಸಿದ್ದಾರೆ. ಕುತೂಹಲಕಾರಿ ವಿಷಯ ಎಂದರೆ ಈ ಬಾರಿಯ ರಣಜಿ ಟೂರ್ನಿಯ ಮೊದಲ ಸುತ್ತಿನಲ್ಲಿ ಮನೀಶ್ ಪಾಂಡೆ ಕರ್ನಾಟಕ ತಂಡದ ಉಪನಾಯಕರಾಗಿದ್ದರು. ಆದರೆ ಮುಂದಿನ ತಿಂಗಳು ನಡೆಯಲಿರುವ ದ್ವಿತೀಯ ಸುತ್ತಿನಲ್ಲಿ ಪಾಂಡೆ ಕರ್ನಾಟಕ ತಂಡದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಇದನ್ನು ಖುದ್ದು ಆಯ್ಕೆ ಸಮಿತಿ ಅಧ್ಯಕ್ಷರಾದ ಅಭಿರಾಮ್ ಅವರು ಖಚಿತಪಡಿಸಿದ್ದಾರೆ. ಇದರೊಂದಿಗೆ ಕರ್ನಾಟಕ ತಂಡದಲ್ಲಿ ಮನೀಶ್ ಪಾಂಡೆ ವೃತ್ತಿಜೀವನ ಕೊನೆಗೊಂಡಿರುವುದು ಖಚಿತವಾಗಿದೆ. ಇದಾಗ್ಯೂ ಪಾಂಡೆ ಮುಂದಿನ ದಿನಗಳಲ್ಲಿ ಬೇರೊಂದು ರಾಜ್ಯವನ್ನು ಪ್ರತಿನಿಧಿಸಲಿದ್ದಾರಾ ಕಾದು ನೋಡಬೇಕಿದೆ.

**ಕರ್ನಾಟಕ ಸಂಭಾವ್ಯ ತಂಡ:** ಕೆಎಲ್ ರಾಹುಲ್, ಮಯಾಂಕ್ ಅಗರ್ವಾಲ್, ಪ್ರಸಿದ್ಧ್ ಕೃಷ್ಣ, ದೇವದತ್ ಪಡಿಕ್ಕಲ್, ಎಲ್ ಆರ್ ಚೇತನ್, ಮ್ಯಾಕ್ನೀಲ್ ನೊರೊನ್ಹಾ, ಶ್ರೇಯಸ್ ಗೋಪಾಲ್, ಕೆಎಲ್ ಶ್ರೀಜಿತ್, ಅಭಿನವ್ ಮನೋಹರ್, ಮನೋಜ್ ಭಾಂಡಗೆ, ಹಾರ್ದಿಕ್ ರಾಜ್, ವಿ. ಕೌಶಿಕ್, ವಿದ್ಯಾಧರ್ ಪಾಟೀಲ್, ಶುಭಾಂಗ್ ಹೆಗ್ಡೆ, ಅಭಿಲಾಷ್ ಶೆಟ್ಟಿ, ಆರ್. ಸ್ಮರನ್, ಲವ್‌ನೀತ್ ಸಿಸೋಡಿಯಾ, ವಿ.ವೈಶಾಕ್, ಮನ್ವಂತ್ ಕುಮಾರ್, ಯಶೋವರ್ಧನ್ ಪರಂತಪ್, ಪ್ರವೀಣ್ ದುಬೆ, ಎಂ.ವೆಂಕಟೇಶ್, ನಿಕಿನ್ ಜೋಸ್, ಕೆ.ವಿ ಅನೀಶ್, ಕೆ.ಶಶಿಕುಮಾರ್, ಪಾರಸ್ ಗುರ್ಬಕ್ಸ್ ಆರ್ಯ, ಶಿಖರ್ ಶೆಟ್ಟಿ, ಕಿಶನ್ ಬೇದರೆ, ಹರ್ಷಿಲ್ ಧರ್ಮಾನಿ, ವಿದ್ವತ್ ಕಾವೇರಪ್ಪ,

# ಡಿಜೆ ಪಾರ್ಟಿಯಲ್ಲಿ ಸನ್ನಿ ಥಕಧಿಮಿತ



ಬೆಂಗಳೂರು ವರ್ಷಾಂತ್ಯದ ಪಾರ್ಟಿಗೆ ಸಜ್ಜಾಗ್ತಾ ಇದೆ. ಈಗಾಗ್ಲೇ ಅನೇಕ ಕಡೆಗೆ ರಂಗೀನ್ ಇವೆಂಟ್‌ಗಳು ಅರೇಂಜ್ ಆಗಿವೆ. ಇತ್ತೀಚೆಗೆ ನಡೆದ ಒಂದು ಡಿಜೆ ಪಾರ್ಟಿಗೆ ಬಾಲಿವುಡ್ ಬೆಡಗಿ, ಮಾದಕ ತಾರೆ ಸನ್ನಿ ಲಿಯೋನ್ ಬಂದಿದ್ರು. ಚಳಿಯಲ್ಲಿ ಮುಳುಗಿರೋ ಬೆಂದಕಾಳೂರಿಗೆ ಬಂದ ಈ ಬಿಸಿ ಬಿಸಿ ಚೆಲುವೆ ಹೇಳಿದ್ದೇನು..? ನೋಡೋಣ ಬನ್ನಿ.

ಹೌದು, ಡಿಸೆಂಬರ್ ಬಂತು ಅಂದ್ರೆ ಬೆಂಗಳೂರು ರಂಗೇರುತ್ತೆ.. ಮುಗಿಯದ ಮಸ್ತ್ ಪಾರ್ಟಿಗಳಿಗೆ ಸಜ್ಜಾಗುತ್ತೆ. ಈಗಾಗ್ಲೇ ಡಿಸೆಂಬರ್ ಚಳಿಯನ್ನ ಕಡಿಮೆ ಮಾಡುವಂಥಾ ಅನೇಕ ಪಾರ್ಟಿ ಇವೆಂಟ್ಸ್ ನಡೀತಾ ಇವೆ. ಈ ವಾರಾಂತ್ಯ ವೈಟ್‌ಫಿಲ್ಡ್‌ನಲ್ಲಿರುವ ವೈಟ್ ಲೋಟಸ್ ಕ್ಲಬ್‌ನಲ್ಲಿ ಡಿಜೆ ಪಾರ್ಟಿ ನಡೆದಿದ್ದು, ಅಲ್ಲಿ ಗೆಸ್ಟ್ ಆಗಿ ಬಂದಿದ್ದು ಮಾದಕ ತಾರೆ ಸನ್ನಿ ಲಿಯೋನ್. ಸನ್ನಿ ಬರ್ತಾನೇ ಫುಲ್ ಪಾರ್ಟಿ ಮೂಡ್‌ನಲ್ಲಿದ್ರು. ಬೆಂಗಳೂರಂದ್ರೆ ನಂಗೆ ಶಾನೆ ಇಷ್ಟ ಅಂದ ಈ ಚೆಲುವೆ ಕಮ್ ಲೆಟ್ಸ್ ಪಾರ್ಟಿ ಅಂತ ರೆಕೊಟ್ರು. ನೆನಪಿರಲಿ ಪ್ರೇಮ್ ಕೂಡ ಈ ಇವೆಂಟ್‌ನಲ್ಲಿ ಹಾಜರಿದ್ರು. ಸನ್ನಿನಾ ತಮ್ಮ ಫ್ಯಾಮಿಲಿಗೆ ಪರಿಚಯ ಮಾಡಿಸಿಕೊಟ್ರು. ಅಸಲಿಗೆ ಕನ್ನಡ ಸಿನಿರಸಿಕರಿಗೆ ಸನ್ನಿ ಲಿಯೋನ್ ಏನು ಹೊಸಬಳಲ್ಲ. ಈಕೆ ಬಾಲಿವುಡ್‌ಗೆ ಬಂದು ಮಿರಿ ಮಿರಿ ಮಿಂಚ್ತಾ ಇದ್ದ ಕಾಲದಲ್ಲೇ ನಮ್ಮ ಶೋ ಮ್ಯಾನ್ ಪ್ರೇಮ್ ಸನ್ನಿನಾ ಕನ್ನಡಕ್ಕೆ ಕರೆತಂದಿದ್ರು.

ಡಿಕೆ ಸಿನಿಮಾದಲ್ಲಿ ಸೇಸಮ್ಮಾ ಸೇಸಮ್ಮಾ ಅಂತ ಕುಣಿದಿದ್ದ ಸನ್ನಿ, ಪಡ್ಡೆ ಹೈಕಳನ್ನ ಹುಚ್ಚೆದ್ದು ಕುಣಿಸಿದ್ಳು. ಇನ್ನೂ ಇಂದ್ರಜೀತ್ ಲಂಕೇಶ್ ನಿರ್ದೇಶನದ ಲವ್ ಯು ಆಲಿಯಾ ಸಿನಿಮಾದಲ್ಲೂ ಸನ್ನಿ ಸ್ಪೆಷಲ್ ನಂಬರ್‌ವೊಂದಕ್ಕೆ ಕುಣಿದು ಕಿಚ್ಚು ಹಚ್ಚಿದ್ಲು. 2022ರಲ್ಲಿ ಬಂದ ಚಾಂಪಿಯನ್ ಅನ್ನೋ ಮೂವಿನಲ್ಲೂ ಈ ಮಾದಕ ಚೆಲುವೆಯ ಕುಣಿತ ಇತ್ತು. ಡಿಂಗರ್ ಬಿಲ್ಲಿ ಅನ್ನೋ ಐಟಂ ನಂಬರ್‌ಗೆ ಸನ್ನಿ ಕುಣಿದು ಮತ್ತೇರಿಸಿದ್ಳು.

ಇನ್ನೇನು ರಿಲೀಸ್ ಗೆ ಸಜ್ಜಾಗಿರೋ ಉಪೇಂದ್ರ ನಟನೆ ನಿರ್ದೇಶನದ ಗಖ ಸಿನಿಮಾದಲ್ಲೂ ಸನ್ನಿ ಇದ್ದಾಳೆ. ರಿಯಲ್ ಸ್ಟಾರ್ ಉಪ್ಪಿ ತಮ್ಮ ಗಖ ಯೂನಿವರ್ಸ್‌ನಲ್ಲಿ ಈ ಚೆಲುವೆಯನ್ನ ಹೇಗೆ ತೋರಿಸಿದ್ದಾರೆ ಅನ್ನೋ ಕುತೂಹಲಕ್ಕೆ ಇದೇ ಡಿಸೆಂಬರ್ 20ರಂದು ಉತ್ತರ ಸಿಗಲಿದೆ. ಸದ್ಯಕ್ಕಂತೂ ಖಾಸಗಿ ಪಾರ್ಟಿನಲ್ಲಿ ಸನ್ನಿ ಮಾದಕ ಭಂಗಿಯಲ್ಲಿ ಹೆಜ್ಜೆ ಹಾಕಿ ಹೋಗಿದ್ದಾಳೆ. ಅದನ್ನ ನೋಡೋದಕ್ಕೆ ನೀವು ಟಿಕೆಟ್ ತಗೋಬೇಕು. ಆ ದುಬಾರಿ ಟಿಕೆಟ್ ಬೇಡ ಅಂದ್ರೆ ಗಖ ಟಿಕೆಟ್ ತಗೋಳಿ ಸಾಕು.. ಸನ್ನಿ ಜೊತೆ ಇಯರ್ ಎಂಡ್ ಪಾರ್ಟಿ ಮಾಡಬಹುದು.

ಪ್ರಕಾಶಕ– ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು–560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು–562123 ಇಲ್ಲಿ ಮುದ್ರಿಸಲ್ಪಟ್ಟಿದೆ. **RNI.KAR/KAN/2009/31934,** ದೂರವಾಣಿ: **9448074878**
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
**RNI.KAR/KAN/2009/31934.**VOLUME-16/ISSUE-22 Email-mussanje2010@gmail.com, Phone: **9448074878**